ಸರ್ಕಾರಿ ಉರ್ದು ಪ್ರೌಢಶಾಲೆ(RMSA) ಅರಳಿಹಳ್ಳಿ ಭದ್ರಾವತಿ ತಾಲ್ಲೂಕು

# ದ್ವಿತೀಯ ಭಾಷೆ ಕನ್ನಡದಲ್ಲಿ

## ಗರಿಷ್ಠ ಅಂಕಗಳನ್ನು ಗಳಿಸುವ ಮಾರ್ಗದರ್ಶಿ

# ಹೊಂಗಿರಣ

## ಎಂಟನೆಯ ತರಗತಿ

# 8

(ಇದು ಹೊಸ ಪಠ್ಯ ಪುಸ್ತಕದ ಅನುಸಾರವಾಗಿದೆ.)

ಪರಶುರಾಮ್ ಎನ್ ಎಂ.ಎ., ಎಂ.ಎಡ್.

ಕನ್ನಡ ಭಾಷಾ ಶಿಕ್ಷಕರು

ಸರ್ಕಾರಿ ಉರ್ದು ಪ್ರೌಢಶಾಲೆ (RMSA)ಅರಳಿಹಳ್ಳಿ ಭದ್ರಾವತಿ ತಾಲ್ಲೂಕು

9731436839

# ಪರಿವಿಡಿ


| ಕ್ರ.ಸಂ | ಪಾಠದ ಹೆಸರು | ಪು.ಸಂ. |
|---|---|---|
| | **ಗದ್ಯಭಾಗ** | |
| 1 | ಬುದ್ಧನ ಸಲಹೆ | 3– 6 |
| 2 | ಕನಸು ಮತ್ತು ಸಂದೇಶ | 6–11 |
| 3 | ಗಾಂಧೀಜಿಯ ಬಾಲ್ಯ | 11–14 |
| 4 | ಸುಕ್ರಿ ಬೊಮ್ಮನ ಗೌಡ | 14–19 |
| 5 | ಬ್ಲಡ್ ಗ್ರೂಪ್ | 19–23 |
| 6 | ಪರಿವರ್ತನೆ | 23–27 |
| 7 | ಒಂದು ಮರದ ಬೆಲೆ | 27–30 |
| 8 | ಆಸನದ ಮೇಲೆ ಆಸನ | 31–34 |
| | **ಪದ್ಯಭಾಗ** | |
| 1 | ಅನ್ವೇಷಣೆ | 35–37 |
| 2 | ಹಾರಿದ ಹಕ್ಕಿಗಳು | 37–38 |
| 3 | ಜ್ಯೋತಿಯೇ ಆಗು ಜಗಕೆಲ್ಲ | 39–42 |
| 4 | ನನ್ನ ಹಾಗೆಯೆ | 42–45 |
| 5 | ತೂಗಿ ತೂಗಿ ಮರಗಳೇ | 45–47 |
| 6 | ಮಳೆ ಬರಲಿ | 48–49 |
| 7 | ಹಕ್ಕಿಗಳು | 50–53 |
| 8 | ಗೌರವಿಸು ಜೀವನವ | 53–56 |
| | **ರಚನೆ** | |
| 1 | ಗಾದೆಗಳ ವಿಸ್ತರಣೆ | 56–57 |
| 2 | ಪ್ರಬಂಧ ರಚನೆ | 57–58 |
| 3 | ಪತ್ರಲೇಖನ | 59–61 |
| | | |
| 1 | **ಗ್ರಂಥಋಣ** | 62 |

# 1. ಬುದ್ಧನ ಸಲಹೆ – ನಿರುಪಮಾ

**ಕೃತಿಕಾರರ ಪರಿಚಯ :**

- **ಡಾ. ನಿರುಪಮಾ** ಅವರು 1933 ರಲ್ಲಿ ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಹೊಳವನಹಳ್ಳಿಯಲ್ಲಿ ಜನಿಸಿದರು.
- ಇವರು ಅಮೃತಕಲಶ, ಪರಿತ್ಯಕ್ತೆ, ಭುವನವಿಜಯ, ಭಾರತೀಯ ನಾರಿ ನಡೆದು ಬಂದ ದಾರಿ, ಭಾವಮುಖಿ, ರಣಹದ್ದು, ಅಧಿಕಾರಿಗಳ ಅವಾಂತ್ರ ಇನ್ನು ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಇವರಿಗೆ ಯೂನಿಸೆಫ್ ಮಕ್ಕಳ ಸಾಹಿತ್ಯ, ಶಾಶ್ವತ ಸಂಸ್ಥೆಯ "ಸದೋದಿತಾ" ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ಅನುಪಮಾ ಪ್ರಶಸ್ತಿ, ಸಾಹಿತ್ಯ ಶಿರೋಮಣಿ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿಗಳು ಲಭಿಸಿವೆ.
- 'ಬುದ್ಧನ ಸಲಹೆ' ಕಥೆಯನ್ನು **'ಶತಮಾನದ ಮಕ್ಕಳ ಸಾಹಿತ್ಯ'** ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ.

**ಅಭ್ಯಾಸ**

**I. ಪದಗಳ ಅರ್ಥ ತಿಳಿಯಿರಿ :**

**ಅಮೂಲ್ಯ** – ಬೆಲೆಕಟ್ಟಲಾಗದ
**ಈರ್ಷ್ಯೆ** – ಅಸೂಯೆ; ಹೊಟ್ಟೆಕಿಚ್ಚು.
**ಕವಲು** – ಭಿನ್ನತೆ; ಎರಡು ಭಾಗ.
**ತೆಪ್ಪಗಾಗು** – ಸುಮ್ಮನಾಗು; ಏನೂ ತಿಳಿಯದಾಗು.
**ದ್ವೇಷ** – ಹಗೆತನ; ವೈರತ್ವ.
**ವರ** – ಅನುಗ್ರಹ; ಶ್ರೇಷ್ಠ.
**ಸಲಹೆ** –ಬುದ್ಧಿವಾದ; ಮಾರ್ಗದರ್ಶನ.
**ಸ್ವಾರ್ಥ** – ಸ್ವಪ್ರಯೋಜನ; ಸ್ವಹಿತ; ತನಗಾಗಿ.
**ಅಸೂಯೆ** – ಹೊಟ್ಟೆಕಿಚ್ಚು
**ಉತ್ಕಟ** – ಅಧಿಕ; ಪ್ರಬಲವಾದ.
**ತೆಪ್ಪಗೆ** – ಸುಮ್ಮನೆ; ಮಾತಿಲ್ಲದೆ.
**ದುರಾಸೆ** – ಅತಿ ಆಸೆ; ಕೆಟ್ಟ ಬಯಕೆ.
**ನೆರೆಹೊರೆ** – ಸುತ್ತಮುತ್ತ
**ವಿಷಮಿಸು** – ನಂಜಾಗು; ವಿಕೋಪಕ್ಕೆ ತಿರುಗು.
**ಸುಭಿಕ್ಷೆ** – ಒಳ್ಳೆಯ ಕಾಲ; ಸಮೃದ್ಧಿ.

**2. ಪ್ರಶ್ನೆಗಳು :**

**ಅ) ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿರಿ.**

1. ಸಿದ್ಧಾರ್ಥನ ತಂದೆಯ ಹೆಸರು **ಶುದ್ಧೋಧನನ**
2. ವತ್ಸ ಮತ್ತು ಮಗಧ ರಾಜ್ಯಗಳ ನಡುವೆ ಹರಿಯುವ ನದಿ **ಗಂಗಾನದಿ**
3. ವತ್ಸ ಮತ್ತು ಮಗಧ ರಾಜ್ಯಗಳ ನಡುವೆ ಶಾಂತಿ ನೆಲೆಸುವಂತೆ ಮಾಡಿದವರು **ಭಗವಾನ್ ಬುದ್ಧ**
4. 'ಬುದ್ಧನ ಸಲಹೆ' ಪಾಠದ ಆಕರ ಕೃತಿ **ಶತಮಾನದ ಮಕ್ಕಳ ಸಾಹಿತ್ಯ**

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಗಂಗಾನದಿ ಎಲ್ಲಿ ಹುಟ್ಟಿ ಯಾವ ಸಮುದ್ರವನ್ನು ಸೇರುತ್ತದೆ?
ಗಂಗಾನದಿ ಹೇಮಕೂಟ ಪರ್ವತದಲ್ಲಿ ಹುಟ್ಟಿ ಬಂಗಾಳ ಸಮುದ್ರವನ್ನು ಸೇರುತ್ತದೆ.
2. ಬುದ್ಧನ ಪ್ರಕಾರ ನದಿ ನೀರಿಗಿಂತ ಹೆಚ್ಚು ಬೆಲೆಯುಳ್ಳದ್ದು ಯಾವುದು? ಏಕೆ?
ಬುದ್ಧನ ಪ್ರಕಾರ ನದಿ ನೀರಿಗಿಂತ ಹೆಚ್ಚು ಬೆಲೆಯುಳ್ಳದ್ದು ಶಾಂತಿ. ಏಕೆಂದರೆ "ಮನುಷ್ಯ ಸುಖವಾಗಿ ಜೀವಿಸಲು ನೀರು, ಗಾಳಿ, ಆಹಾರ ಎಲ್ಲವೂ ಮುಖ್ಯವಾದಂತೆ ಶಾಂತಿಯೂ ಅಷ್ಟೇ ಮುಖ್ಯವಾಗಿದೆ.
3. ಬುದ್ಧ ದೇವನು ಹೇಳುವಂತೆ ಜೀವನದಲ್ಲಿ ಸುಖ ಶಾಂತಿ ಸಿಗಬೇಕಾದರೆ ಏನು ಮಾಡಬೇಕು?
ಬುದ್ಧ ದೇವನು ಹೇಳುವಂತೆ ಜೀವನದಲ್ಲಿ ಸುಖ, ಶಾಂತಿ ಸಿಗಬೇಕಾದರೆ ಮಾನವರು ಪರಸ್ಪರ ಹಂಚಿಕೊಳ್ಳುವ ಗುಣ ಹೊಂದಬೇಕು.
4. ವತ್ಸ ಮತ್ತು ಮಗಧ ರಾಜ್ಯದವರು ಯುದ್ಧವನ್ನು ಏಕೆ ನಿಲ್ಲಿಸಿದರು?
ಬುದ್ಧದೇವನು ಬೋಧಿಸಿದ ಶಾಂತಿಯ ಮಹತ್ವ ಅರಿತು ವತ್ಸ ಮತ್ತು ಮಗಧ ರಾಜ್ಯದವರು ಯುದ್ಧವನ್ನು ನಿಲ್ಲಿಸಿದರು.

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ವತ್ಸ ಮತ್ತು ಮಗಧ ರಾಜ್ಯದ ಜನರು ಗಂಗಾ ನದಿಯನ್ನು ತಾಯಿಯಂತೆ ಏಕೆ ಪೂಜಿಸುತ್ತಿದ್ದರು?
ವತ್ಸ ಮತ್ತು ಮಗಧ ರಾಜ್ಯದ ನಡುವೆ ಗಂಗಾ ನದಿ ಹರಿಯುತ್ತಿತ್ತು. ಈ ನದಿಯ ನೀರಿನಿಂದ ಎರಡೂ ರಾಜ್ಯಗಳ ನೆಲ

ಸಸ್ಯಶ್ಯಾಮಲವಾಗಿತ್ತು. ಎತ್ತ ನೋಡಿದರೂ ಹಸಿರು ತುಂಬಿ ಬೆಳೆ ಬೆಳೆದು ಸುಭಿಕ್ಷದಿಂದ ಜನರು ಸುಖವಾಗಿದ್ದ ಕಾರಣ ವತ್ಸ ಮತ್ತು ಮಗಧ ರಾಜ್ಯದ ಜನರು ಗಂಗಾ ನದಿಯನ್ನು ತಾಯಿಯಂತೆ ಪೂಜಿಸುತ್ತಿದ್ದರು.

2. ವತ್ಸ ಮತ್ತು ಮಗಧ ರಾಜ್ಯಗಳ ನಡುವೆ ದ್ವೇಷ ಏಕೆ ಹೆಚ್ಚಾಯಿತು?

ಗಂಗಾ ನದಿಯ ಮೇಲೆ ತಮ್ಮ ಸಂಪೂರ್ಣ ಅಧಿಕಾರ ಸ್ಥಾಪಿಸುವ ಸಲುವಾಗಿ ವತ್ಸ ಮತ್ತು ಮಗಧ ರಾಜ್ಯಗಳ ಜನರಲ್ಲಿ ಕ್ರಮೇಣ ಸ್ವಾರ್ಥ ಆವರಿಸಿತು. ಈ ಕಾರಣದಿಂದಾಗಿ ಎರಡು ರಾಜ್ಯಗಳ ನಡುವೆ ದ್ವೇಷ ಹೆಚ್ಚಾಯಿತು.

3. ಬುದ್ಧನು ಹೇಳುವಂತೆ ದ್ವೇಷ ದುಃಖವನ್ನು ಹೇಗೆ ಹೆಚ್ಚಿಸುತ್ತದೆ?

ಬುದ್ಧನು ಹೇಳುವಂತೆ "ನೀವು ದ್ವೇಷದಿಂದ ದ್ವೇಷವನ್ನು ಜಯಿಸಲು ಹೋದರೆ ಕೊನೆಗೆ ನಿಮಗೆ ಉಳಿಯುವುದು ಈರ್ಷ್ಯೆಯೇ. ಇವುಗಳಿಂದ ಜೀವಿಗಳಿಗೆ ದುಃಖವೇ ಹೊರತು ಸುಖವಲ್ಲ. ಈಗ ಸುಖವಾಗಿರುವ ನೀವು ದುಃಖ ತಂದುಕೊಳ್ಳುವ ಮಾರ್ಗ ಇದು" ಎಂದರು.

4. ವತ್ಸ ಮತ್ತು ಮಗಧ ರಾಜ್ಯದವರಿಗೆ ಸುಖಶಾಂತಿಯ ಮಹತ್ವವನ್ನು ಬುದ್ಧನು ಹೇಗೆ ಬೋಧಿಸಿದನು?

"ಮನುಷ್ಯ ಸುಖವಾಗಿ ಜೀವಿಸಲು ನೀರು, ಗಾಳಿ, ಆಹಾರ ಎಲ್ಲವೂ ಮುಖ್ಯವಾದಂತೆ ಶಾಂತಿಯೂ ಮಾಡಿಕೊಳ್ಳುವುದನ್ನು ಬಿಟ್ಟು ವಿವೇಕ ತಂದುಕೊಂಡು ಸುಖವಾಗಿರಿ. ಪ್ರಕೃತಿ ಜೀವಿಗಳಿಗೆ ವರವೇ ಹೊರತು ಶಾಪವಲ್ಲ. ಆ ವರವನ್ನು ಸರ್ವಮಾನವರೂ ಸಮಾನವಾಗಿ ಹಂಚಿಕೊಂಡಾಗ ಎಲ್ಲರಿಗೂ ಸುಖ ಶಾಂತಿ ಸಿಗುತ್ತದೆ" ಎಂದು ಬುದ್ಧನು ಬೋಧಿಸಿದನು.

5. ಬುದ್ಧ ದೇವನು ವತ್ಸ ಮತ್ತು ಮಗಧ ರಾಜ್ಯಗಳ ನಡುವಿನ ಯುದ್ಧವನ್ನು ಏಕೆ ತಪ್ಪಿಸಿದನು?

ಸರ್ವರಿಗೂ ಮೀಸಲಾಗಿರುವ ನೆಲ, ಜಲಗಳನ್ನು ಹಂಚಿಕೊಡಾಗ ಮಾನವರು ವಿವೇಕವನ್ನು ಕಳೆದುಕೊಂಡು ಯುದ್ಧಕ್ಕೆ ಸನ್ನದ್ಧರಾಗುತ್ತಾರೆ. ಈ ಯುದ್ಧಗಳಿಂದ ಅಪಾರ ಸಾವು ನೋವು ಉಂಟಾಗಿ ಬದುಕು ನರಕವಾಗಿ ಬಿಡುತ್ತದೆ ಎಂಬ ಸತ್ಯವನ್ನು ಮರೆತು ಬಿಡುತ್ತಾರೆ. ಅದಕ್ಕಾಗಿ ಬದುಕಲು ಗಾಳಿ, ನೀರು, ಆಹಾರದಂತೆ ಸುಖ, ಶಾಂತಿ, ನೆಮ್ಮದಿ ಅಗತ್ಯವಾಗಿ ಬೇಕು, ಎಂದು ಅರಿತ ಬುದ್ಧದೇವನು ಯುದ್ಧವನ್ನು ತಪ್ಪಿಸಿದನು.

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

1. ವತ್ಸ ಮತ್ತು ಮಗಧ ರಾಜ್ಯಗಳು ಯುದ್ಧ ಮರೆತು ಶಾಂತಿಯಿಂದ ನೆಲೆಸಿದುದು ಹೇಗೆ?

ವತ್ಸ ಮತ್ತು ಮಗಧ ರಾಜ್ಯಗಳು ಗಂಗಾನದಿಯ ಮೇಲೆ ತಮ್ಮ ಹಕ್ಕು ಸ್ಥಾಪಿಸುವ ಸಲುವಾಗಿ ದ್ವೇಷ, ಅಸೂಯೆಗಳಿಂದ ಪರಸ್ಪರ ಹೋರಾಟಕ್ಕೆ ಸಿದ್ಧರಾದರು. ಆ ಸಮಯದಲ್ಲಿ ಬುದ್ಧದೇವನು ಆಗಮಿಸಿ ಇಬ್ಬರೂ ರಾಜ ಮಂತ್ರಿಗಳಿಗೆ ನದಿಯ ನೀರು ಮಾನವನ ರಕ್ತಗಳಲ್ಲಿ ಯಾವುದಕ್ಕೆ ಬೆಲೆ ಹೆಚ್ಚು ಎಂದು ಕೇಳಿದರು. ಆಗ ಮಂತ್ರಿಗಳು ರಕ್ತವೆಂಬ ಉತ್ತರ ಕೊಟ್ಟರು. ಹಾಗಾದರೆ ನದಿ ನೀರಿಗಾಗಿ ಅಮೂಲ್ಯವಾದ ರಕ್ತ ಹರಿಸಲು ಏಕೆ ಸಿದ್ಧರಾಗಿದ್ದೀರಿ? ಜೀವಿಸಬೇಕೆಂದ ಮೇಲೆ ಸಾಯಲೇಕೆ ಯುದ್ಧವನ್ನು ಆರಿಸಿಕೊಂಡಿದ್ದೀರಿ? ಇವೆಲ್ಲವನ್ನು ಬಿಟ್ಟು ಶಾಂತಿ ಬೆಳೆಸಿಕೊಳ್ಳಿ, ವಿವೇಕದಿಂದ ವರ್ತಿಸಿರಿ, ಪ್ರಕೃತಿ ಸಂಪತ್ತನ್ನು ಹಂಚಿಕೊಂಡಾಗ ಎಲ್ಲರಿಗೂ ಸುಖ, ಶಾಂತಿ ಸಿಗುತ್ತದೆ ಎಂದು ಬುದ್ಧದೇವ ತಿಳಿಸಿದಾಗ ವತ್ಸ ಮತ್ತು ಮಗಧ ರಾಜ್ಯಗಳು ಯುದ್ಧ ಮರೆತು ಶಾಂತಿಯಿಂದ ನೆಲೆಸಿದರು.

2. ಬದುಕಿನಲ್ಲಿ ಸುಖ ಶಾಂತಿ ನೆಮ್ಮದಿಗಳನ್ನು ಕಂಡುಕೊಳ್ಳುವುದು ಹೇಗೆ? ಚರ್ಚಿಸಿ.

ಬದುಕಿನಲ್ಲಿ ಸುಖ, ಶಾಂತಿ, ನೆಮ್ಮದಿಗಳನ್ನು ಕಂಡುಕೊಳ್ಳಲು ಮಾನವರು ಕೊಡಮಾಡಿದ ಪ್ರಾಕೃತಿಕ ಸಂಪತ್ತನ್ನು ಬಳಸಿಕೊಂಡು ಸಮೃದ್ಧಿಯ ಜೀವನ ನಡೆಸಬೇಕು. ಇಲ್ಲದಿದ್ದರೆ ಸ್ವಾರ್ಥ, ದ್ವೇಷ, ತುಂಬಿದ ದುರಾಸೆ ಬದುಕು ನಮ್ಮನ್ನು ನಾಶಮಾಡುತ್ತದೆ. ಎಲ್ಲ ಕಾಲದಲ್ಲಿಯೂ ಪರಿಸ್ಥಿತಿಯನ್ನು ಅರಿತು ಬದುಕಬೇಕು.ಒಳಿತು ಕೆಡುಕುಗಳ ಬಗ್ಗೆ ತಾಳ್ಮೆಯಿಂದ ತೀರ್ಮಾನ ಕೈಗೊಳ್ಳಬೇಕು. ಪರಸ್ಪರ ಹಂಚಿಕೊಂಡು ತಿನ್ನುವ, ಇನ್ನೊಬ್ಬರ ಕಷ್ಟದಲ್ಲಿ ಭಾಗಿಯಾಗುವ, ವಿವೇಕದಿಂದ ವರ್ತಿಸುವ, ಸೌಹಾರ್ದಯುತವಾಗಿ ಬಾಳುವ, ಶಾಂತಿಯು ನೆಲೆಸುವಂತೆ ಮಾಡುವುದರಿಂದ ಬದುಕಿನಲ್ಲಿ ಸುಖ, ಶಾಂತಿ, ನೆಮ್ಮದಿಗಳನ್ನು ಕಂಡುಕೊಳ್ಳಬಹುದು.

**ಉ) ಸಂದರ್ಭದೊಡನೆ ವಿವರಿಸಿರಿ.**

1. 'ಮನುಷ್ಯನ ರಕ್ತ ನದಿ ನೀರಿಗಿಂತ ಬೆಲೆಯುಳ್ಳದ್ದು.'

ಈ ವಾಕ್ಯವನ್ನು ನಿರುಪಮಾ ಅವರು ಬರೆದಿರುವ **'ಶತಮಾನದ ಮಕ್ಕಳ ಸಾಹಿತ್ಯ'** ಎಂಬ ಕೃತಿಯಿಂದ ಆಯ್ದ **ಬುದ್ಧನ ಸಲಹೆ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ವತ್ಸ ಮತ್ತು ಮಗದ ರಾಜ್ಯದ ಜನರು ಭಗವಾನ್ ಬುದ್ಧದೇವನಿಗೆ ಹೇಳುತ್ತಾರೆ. ಎರಡು ರಾಜ್ಯದ ಜನರು ನದಿ ನೀರಿಗಾಗಿ ಯುದ್ಧಕ್ಕೆ ಸಿದ್ಧರಾದಾಗ ಬುದ್ಧನು ' ನದಿಯ ನೀರು ಮಾನವನ ರಕ್ತ ಇವೆರಡರಲ್ಲಿ ಯಾವುದಕ್ಕೆ ಹೆಚ್ಚು ಬೆಲೆಯಿದೆ' ಎಂದು ಪ್ರಶ್ನಿಸಿದಾಗ ಎರಡೂ ರಾಜ್ಯದ ಜನರು 'ಮನುಷ್ಯನ ರಕ್ತ ನದಿ ನೀರಿಗಿಂತಲೂ ಬೆಲೆಯುಳ್ಳದ್ದು' ಎಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

2. 'ನೀವು ಜೀವಿಸಬೇಕೆಂದಿದ್ದೀರಲ್ಲವೆ? ಮತ್ತೆ ಸಾಯಲೇಕೆ ಸಿದ್ಧರಾಗಿದ್ದೀರಿ?'

ಈ ವಾಕ್ಯವನ್ನು ನಿರುಪಮಾ ಅವರು ಬರೆದಿರುವ **'ಶತಮಾನದ ಮಕ್ಕಳ ಸಾಹಿತ್ಯ'** ಎಂಬ ಕೃತಿಯಿಂದ ಆಯ್ದ **ಬುದ್ಧನ ಸಲಹೆ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಭಗವಾನ್ ಬುದ್ಧದೇವನು ವತ್ಸ ಮತ್ತು ಮಗದ ರಾಜ್ಯದ ಜನರಿಗೆ ಹೇಳುತ್ತಾರೆ. ಪ್ರಕೃತಿ ಸರ್ವಮಾನವರಿಗೂ ನೀಡಿರುವ ಎಲ್ಲ ವಸ್ತುಗಳನ್ನು ಸಮಾನವಾಗಿ ಹಂಚಿಕೊಂಡಾಗ ಎಲ್ಲರಿಗೂ ಸುಖ ಶಾಂತಿ ಸಿಗುತ್ತದೆ. 'ಪ್ರಕೃತಿ ಜೀವಿಗಳಿಗೆ ವರವೇ ಹೊರತು ಶಾಪವಲ್ಲ.' ಎಂದು ಬುದ್ಧನು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

3. 'ಪ್ರಕೃತಿ ಜೀವಿಗಳಿಗೆ ವರವೇ ಹೊರತು ಶಾಪವಲ್ಲ.'

ಈ ವಾಕ್ಯವನ್ನು ನಿರುಪಮಾ ಅವರು ಬರೆದಿರುವ **'ಶತಮಾನದ ಮಕ್ಕಳ ಸಾಹಿತ್ಯ'** ಎಂಬ ಕೃತಿಯಿಂದ ಆಯ್ದ **ಬುದ್ಧನ ಸಲಹೆ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಭಗವಾನ್ ಬುದ್ಧದೇವನು ವತ್ಸ ಮತ್ತು ಮಗದ ರಾಜ್ಯದ ಜನರಿಗೆ ಹೇಳುತ್ತಾರೆ. ಪ್ರಕೃತಿ ಸರ್ವಮಾನವರಿಗೂ ನೀಡಿರುವ ಎಲ್ಲ ವಸ್ತುಗಳನ್ನು ಸಮಾನವಾಗಿ ಹಂಚಿಕೊಂಡಾಗ ಎಲ್ಲರಿಗೂ ಸುಖ ಶಾಂತಿ ಸಿಗುತ್ತದೆ. 'ಪ್ರಕೃತಿ ಜೀವಿಗಳಿಗೆ ವರವೇ ಹೊರತು ಶಾಪವಲ್ಲ.' ಎಂದು ಬುದ್ಧನು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

**3. ಭಾಷಾಭ್ಯಾಸ :**

**ಅ) ಸ್ವರಾಕ್ಷರಗಳಿಂದ ಆರಂಭಗೊಳ್ಳುವ ಪದಗಳನ್ನು 'ಬುದ್ಧನ ಸಲಹೆ' ಪಾಠದಿಂದ ಆಯ್ದು ಅವುಗಳನ್ನು ಅಕಾರಾದಿಯಾಗಿ ಜೋಡಿಸಿ ಬರೆಯಿರಿ.**

**ಉದಾ :** *ಅದನ್ನು, ಅದೇ, ಅಪಾರ, ಅಷ್ಟೇ, ಅವುಗಳನ್ನು, ಅರಸು, ಅವರಿಬ್ಬರು,ಅಧಿಕಾರ, ಅವರು, ಅನ್ನ, ಅಂದಿನಿಂದ, ಅಲ್ಲಿಗೆ, ಅಸೂಯೆ, ಅಮೂಲ್ಯವಾದ,ಅವರಲ್ಲರೂ,ಅದಕ್ಕಿಂತಲೂ, ಆಹಾರ, ಆದರೆ, ಆಳುತ್ತಿದ್ದರು, ಆವರಿಸಿತು, ಆತ.
*ಇವರೆಲ್ಲರೂ, ಇವುಗಳಿಂದ, ಇತರ, ಇವೆರಡರಲ್ಲಿ, ಈ, ಈಗ.
* ಉತ್ತವಿತ್ತರು, ಉಂಟಾಯಿತು, ಉಪಯೋಗ, ಊರಿಗೆ.
ಎರಡು, ಎಲ್ಲರಿಗೂ, ಏಕೆ, ಒಕ್ಕೊರಲಿನಿಂದ.

**ಆ) 'ಬುದ್ಧನ ಸಲಹೆ' ಪಾಠದಲ್ಲಿ ಅನುಸ್ವಾರ ವಿಸರ್ಗಗಳಿಂದ ಕೂಡಿರುವ ಪದಗಳನ್ನು ಆಯ್ದು ಬರೆಯಿರಿ.**

**ಉದಾ :** ಗಂಗಾ, ಒಂದು, ದುಃಖ, ಪುನಃ, ಹಿಂದಿನ, ಕಪಿಲವಸ್ತುವೆಂಬ,ಶಾಕ್ಯರೆಂಬ,ಎಂಬ. ನಂತರ, ಬಂಗಾಳ, ಇಂದ, ಅಂತೆ, ತುಂಬಿ, ಸಂಪೂರ್ಣ, ಉಂಟಾಯಿತು, ಬಂದ, ನಿಂತುಕೊಂಡ, ಮಂತ್ರಿ, ಎಂದು, ಶಾಂತಿ, ತಂದುಕೊಂಡು, ಅಂದಿನಿಂದ, ಸ್ನೇಹದಿಂದ.

**ಇ) ಪ್ರಸ್ತುತ ಪಾಠದಲ್ಲಿ ಸ, ಶ, ಷ ಅಕ್ಷರಗಳಿರುವ ಪದಗಳನ್ನು ಪಟ್ಟಿಮಾಡಿ ಅವುಗಳ ಸ್ಪಷ್ಟ ಉಚ್ಚಾರಣೆಯನ್ನು ಅಭ್ಯಾಸ ಮಾಡಿರಿ.**

**ಉದಾ :** ಸಸ್ಯಶ್ಯಾಮಲೆ, ಸನ್ಯಾಸ, ದೇಶ, ಸುಖ, ಶಾಂತಿ, ಈರ್ಷ್ಯೆ, ಸಮೀಪ, ಸಮುದ್ರ, ಸೇರುತ್ತದೆ, ವತ್ಸ, ಸಸ್ಯ, ಹಸಿರು, ಸ್ವಾರ್ಥ, ಆವರಿಸು, ಸೈನ್ಯ, ಸ್ವಲ್ಪ, ಕೇಳಿಸು,ಅಸೂಯೆ, ಅವಶ್ಯಕ, ನಾಶ, ಮನುಷ್ಯ, ಅಷ್ಟೇ,ಜೀವಿಸಲು, ಸಮಾನ, ಕಪಿಲವಸ್ತು, ಸತ್ಯ, ನಮಸ್ಕರಿಸು, ದೇಶ, ಕಾಶಿ, ದಕ್ಷಿಣ, ವಿಷ, ಸುಭಿಕ್ಷೆ, ದುರಾಸೆ, ಸಿದ್ಧ, ಶುದ್ಧೋಧನ,– ಇತ್ಯಾದಿ.

**ಈ) ಕೆಳಗಿನ ಪದಗಳಿಗೆ ವಿರುದ್ದಾರ್ಥ ಬರೆಯಿರಿ.**

ಮೌಲ್ಯ x ಅಪಮೌಲ್ಯ, ಸುಖ x ದುಃಖ, ವರ x ಶಾಪ, ಸತ್ಯ x ಅಸತ್ಯ, ಪವಿತ್ರ x ಅಪವಿತ್ರ, ಸ್ವಾರ್ಥ x ನಿಸ್ವಾರ್ಥ.

**ಉ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಉಪಯೋಗಿಸಿರಿ.**

1. ಹಿಂಜರಿಕೆ : ಕೆಲವು ಮಕ್ಕಳು ಹಿರಿಯರ ಮುಂದೆ ಮಾತನಾಡಲು ಹಿಂಜರಿಯುತ್ತಾರೆ.
2. ವಿವೇಕ : ವಿದ್ಯೆ ಇದ್ದವರಿಗೆ ವಿವೇಕ ಹೆಚ್ಚಾಗಿರುತ್ತದೆ.
3. ಸ್ವಾರ್ಥ : ಕೆಲವರು ತಮ್ಮ ಸ್ವಾರ್ಥಕ್ಕಾಗಿ ಕೆಟ್ಟ ಕೆಲಸ ಮಾಡುತ್ತಾರೆ.
4. ಸುಖಶಾಂತಿ: ಸಂಸಾರದಲ್ಲಿ ಸುಖಶಾಂತಿ ಇರಬೇಕು.
4. ಸುಭಿಕ್ಷೆ : ವತ್ಸ ಮತ್ತು ಮಗದ ರಾಜ್ಯಗಳು ಸುಭಿಕ್ಷವಾಗಿದ್ದವು.
5. ಸಸ್ಯಶ್ಯಾಮಲ: ಭದ್ರಾ ನದಿಯ ನೀರಿನಿಂದ ನಮ್ಮ ಗದ್ದೆ, ತೋಟಗಳು ಸಸ್ಯಶ್ಯಾಮಲವಾಗಿವೆ.

**4. ಸೈದ್ಧಾಂತಿಕ ವ್ಯಾಕರಣ :**

**ಕನ್ನಡ ವರ್ಣಮಾಲೆಯಲ್ಲಿ ಒಟ್ಟು 49 ಅಕ್ಷರಗಳಿವೆ. ಅವುಗಳಲ್ಲಿ ಮೂರು ಭಾಗಗಳಿವೆ.**

1. ಸ್ವರಗಳು – 13
2. ಯೋಗವಾಹಗಳು – 02
3. ವ್ಯಂಜನಗಳು – 34

**ಒಟ್ಟು – 49**

**1.ಸ್ವರಗಳು** : (13)
ಸರಳವಾಗಿ, ಸ್ವತಂತ್ರವಾಗಿ, ಸಹಜವಾಗಿ ಉಚ್ಚರಿಸಲು ಬರುವ ಅಕ್ಷರಗಳೇ ಸ್ವರಗಳು.
ಒಟ್ಟು 13 ಸ್ವರಾಕ್ಷರಗಳಿವೆ. ಅವುಗಳನ್ನು ಈ ಕೆಳಗಿನಂತೆ ಎರಡು ಭಾಗಗಳಾಗಿ ವಿಂಗಡಿಸಿದೆ.
**ಹ್ರಸ್ವಸ್ವರ (6)** – ಒಂದು ಮಾತ್ರಾಕಾಲದಲ್ಲಿ ಉಚ್ಚರಿಸುವ ಅಕ್ಷರಗಳನ್ನು ಹ್ರಸ್ವ ಸ್ವರಗಳು ಎನ್ನುತ್ತೇವೆ.
**ಉದಾ** : ಅ, ಇ, ಉ, ಋ, ಎ, ಒ.
**ದೀರ್ಘಸ್ವರ** (7) – ಎರಡು ಮಾತ್ರಾಕಾಲದಲ್ಲಿ ಉಚ್ಚರಿಸುವ ಅಕ್ಷರಗಳನ್ನು ದೀರ್ಘ ಸ್ವರಗಳು ಎನ್ನುತ್ತೇವೆ.
**ಉದಾ** : ಆ, ಈ, ಊ, ಏ, ಐ, ಓ, ಔ.

**2. ಯೋಗವಾಹಗಳು** : (2)
ಸ್ವರಗಳ ಸಂಬಂಧ ಪಡೆದು ಉಚ್ಚರಿಸಲ್ಪಡುವ ಅಕ್ಷರಗಳು. ಇವು ಕನ್ನಡದಲ್ಲಿ ಎರಡು ಇವೆ.
ಉದಾ : ಂ (ಅನುಸ್ವಾರ) ಃ (ವಿಸರ್ಗ)

**3. ವ್ಯಂಜನಗಳು** : (34)
ಸ್ವರಗಳ ಸಹಾಯದಿಂದ ಉಚ್ಚರಿಸುವ ಅಕ್ಷರಗಳೇ ವ್ಯಂಜನಗಳು. ಇವುಗಳಲ್ಲಿ ಎರಡು ಪ್ರಕಾರಗಳಿವೆ. ಅವುಗಳೆಂದರೆ,
1. ವರ್ಗೀಯ ವ್ಯಂಜನಗಳು (25)
2. ಅವರ್ಗೀಯ ವ್ಯಂಜನಗಳು (9)

**ವರ್ಗೀಯ ವ್ಯಂಜನಗಳಲ್ಲಿ ಮೂರು ವಿಭಾಗಗಳಿವೆ :**
1) **ಅಲ್ಪಪ್ರಾಣ ಅಕ್ಷರಗಳು** : ಕಡಿಮೆ ಉಸಿರಿನಿಂದ ಉಚ್ಚರಿಸುವ ಅಕ್ಷರಗಳು
ಕ್, ಚ್, ಟ್, ತ್, ಪ್ ಹಾಗೂ ಗ್, ಜ್, ಡ್, ದ್, ಬ್
(ಪ್ರತಿ ವರ್ಗದಲ್ಲಿ ಒಂದು ಮತ್ತು ಮೂರನೆಯ ಅಕ್ಷರಗಳು) = 10

2) **ಮಹಾಪ್ರಾಣ ಅಕ್ಷರಗಳು** : ಹೆಚ್ಚು ಉಸಿರಿನಿಂದ ಉಚ್ಚರಿಸುವ ಅಕ್ಷರಗಳು
ಖ್, ಛ್, ಠ್, ಥ್, ಫ್ ಹಾಗೂ ಘ್, ಝ್, ಢ್, ಧ್, ಭ್
(ಪ್ರತಿ ವರ್ಗದಲ್ಲಿ ಎರಡು ಮತ್ತು ನಾಲ್ಕನೆಯ ಅಕ್ಷರಗಳು) = 10

3) **ಅನುನಾಸಿಕ ಅಕ್ಷರಗಳು** : ಮೂಗಿನ ಸಹಾಯದಿಂದ ಉಚ್ಚರಿಸುವ ಅಕ್ಷರಗಳು
ಙ, ಞ, ಣ, ನ, ಮ
(ಪ್ರತಿ ವರ್ಗದ ಐದನೆಯ ಅಕ್ಷರಗಳು) = 05
**ಅವರ್ಗೀಯ ವ್ಯಂಜನಗಳು** : ಒಂದು ನಿರ್ದಿಷ್ಟ ವರ್ಗಕ್ಕೆ ಸೇರಿಸಲು ಸಾಧ್ಯವಾಗದ ವ್ಯಂಜನಗಳೇ ಅವರ್ಗೀಯ ವ್ಯಂಜನಗಳು.
ಯ್, ರ್, ಲ್, ವ್, ಶ್, ಷ್, ಸ್, ಹ್, ಳ್ = 09

## 2. ಕನಸು ಮತ್ತು ಸಂದೇಶ

**ಮೂಲ: ಎ.ಪಿ.ಜೆ. ಅಬ್ದುಲ್ ಕಲಾಂ**

**ಕೃತಿಕಾರರ ಪರಿಚಯ :**

- **ಎ.ಪಿ.ಜೆ. ಅಬ್ದುಲ್ ಕಲಾಂ** ಅವರು ತಮಿಳುನಾಡಿನ ರಾಮೇಶ್ವರದಲ್ಲಿ ದಿನಾಂಕ 15 ನೇ ಅಕ್ಟೋಬರ್ 1931 ರಂದು ಜನಿಸಿದರು. ಇವರ ಪೂರ್ಣ ಹೆಸರು ಅವುಲ್ ಫಕೀರ್ ಜೈನುಲಬ್ದೀನ್ ಅಬ್ದುಲ್ ಕಲಾಂ.
- ಭಾರತದ 11 ನೇ ರಾಷ್ಟ್ರಪತಿಯಾಗಿ 22ನೇ ಜುಲೈ 2002 ರಂದು ಆಯ್ಕೆಯಾದರು. ಸರಳತೆ,ಪ್ರಾಮಾಣಿಕತೆ ಮತ್ತು ಮೇಧಾವಿತನದಿಂದ ನಡೆದುಕೊಂಡು ರಾಷ್ಟ್ರಪತಿ ಹುದ್ದೆಯ ಘನತೆಯನ್ನು ಹೆಚ್ಚಿಸಿದರು.
- ಲೇಖಕರಾಗಿದ್ದ ಕಲಾಂ ಅವರು 'ವಿಂಗ್ಸ್ ಆಫ್ ಫೈರ್' (ಆತ್ಮಕಥೆ), 'ಇಂಡಿಯಾ ಮೈ ಡ್ರೀಮ್''ಇಂಡಿಯಾ 2020', 'ಮೈ ಜರ್ನಿ', 'ಟಾರ್ಗೆಟ್ ತ್ರಿ ಬಿಲಿಯನ್', 'ಟರ್ನಿಂಗ್ ಪಾಯಿಂಟ್', 'ಇಗ್ನೈಟೆಡ್ ಮೈಂಡ್ಸ್', 'ದಿ ಲೈಫ್ ಟ್ರೀ' ಮುಂತಾದ ಕೃತಿಗಳನ್ನು ಬರೆದಿದ್ದಾರೆ.

- ಕಲಾಂ ಅವರ ಸೇವೆಗೆ ಪದ್ಮಭೂಷಣ, ಪದ್ಮವಿಭೂಷಣ ಹಾಗೂ ದೇಶದ ಅತ್ಯುನ್ನತ 'ಭಾರತ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಸುಮಾರು 30 ವಿಶ್ವವಿದ್ಯಾನಿಲಯಗಳು ಕಲಾಂ ಅವರಿಗೆ ಗೌರವ ಡಾಕ್ಟರೇಟ್ ನೀಡಿವೆ.
- ಪ್ರಸ್ತುತ ಗದ್ಯಭಾಗವನ್ನು ಎ.ಪಿ.ಜೆ ಅಬ್ದುಲ್ ಕಲಾಂ ಅವರ **'ಪ್ರಜ್ವಲಿತ ದೀಪಗಳು'** ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ.

**ಅನುವಾದಕರ ಪರಿಚಯ :**

- **ಶ್ರೀ ಜಯಕೃಷ್ಣ ಟಿ. ಎನ್.** ಅವರು ಪತ್ರಕರ್ತರಾಗಿದ್ದು, ಡೇಲ್ ಕಾರ್ನೆಗಿ ಅವರ 'ಚಿಂತೆ ಬಿಡಿ: ಹೊಸ ಬದುಕು ಆರಂಭಿಸಿ', 'ಸಮರ್ಥ ನಾಯಕ ನೀವೂ ಆಗಬಲ್ಲಿರಿ!' ಹಾಗೂ ನೆಪೋಲಿಯನ್ ಹಿಲ್ ಅವರ 'ಸಿರಿತನಕ್ಕೆ ಹದಿಮೂರೇ ಹೆಜ್ಜೆ' ಮುಂತಾದ ಅನುವಾದಿತ ಕೃತಿಗಳ ಮೂಲಕ ಕನ್ನಡಿಗರಿಗೆ ಚಿರಪರಿಚಿತರಾಗಿದ್ದಾರೆ.

**ಟಿಪ್ಪಣಿಗಳು :**

**ಅಶೋಕ ಚಕ್ರವರ್ತಿ :** (ಕ್ರಿ.ಪೂ. 304 – ಕ್ರಿ.ಪೂ. 232) ಪ್ರಾಚೀನ ಭಾರತವನ್ನು ಆಳಿದ ಮೌರ್ಯ ಸಾಮ್ರಾಜ್ಯದ ಚಕ್ರವರ್ತಿ. ಅಶೋಕನು ಸದಾ ಯುದ್ಧದಲ್ಲಿ ತೊಡಗಿರುತ್ತಿದ್ದನು. ಈತನು ಕಳಿಂಗದ ಮೇಲೆ ನಡೆಸಿದ ಯುದ್ಧವೇ ಕೊನೆಯದಾಯಿತು. ಕಳಿಂಗ ಯುದ್ಧದ ನಂತರ ಅಶೋಕನು ನಗರ ಪ್ರದಕ್ಷಿಣೆಗೆಂದು ಹೊರಟು ಎಲ್ಲೆಲ್ಲೂ ಸುಟ್ಟು ಹೋದ ಮನೆಗಳನ್ನು, ಚೆಲ್ಲಾಪಿಲ್ಲಿಯಾಗಿ ಬಿದ್ದ ಹೆಣಗಳನ್ನು, ದುಃಖತಪ್ತರನ್ನು ನೋಡಿದನು. ಇದರಿಂದ ಅವನ ಮನಸ್ಸು ಮರುಗಿತು. ಕೊನೆಗೆ ಯುದ್ಧವನ್ನು ತ್ಯಜಿಸಿ, ಬೌದ್ಧಧರ್ಮವನ್ನು ಸ್ವೀಕರಿಸುವ ಮೂಲಕ ಶಾಂತಿ ಪ್ರಿಯನಾದನು.

**ಆಲ್ಬರ್ಟ್ ಐನ್‌ಸ್ಟೀನ್** (1879–1955): ಜಗತ್ತಿನ ಶ್ರೇಷ್ಠ ವಿಜ್ಞಾನಿಯಾದ ಈತ ಜರ್ಮನಿಯ ಉಲ್ಮ್ ಎಂಬಲ್ಲಿ ಜನಿಸಿದನು. ಪರಮಾಣು ಬಾಂಬಿನ ಸಂಶೋಧನೆಗೆ ಮೂಲಕಾರಣವಾದ 'ಸಾಪೇಕ್ಷತಾ ಸಿದ್ಧಾಂತ'ವನ್ನು ಕಂಡುಹಿಡಿದು ಭೌತಶಾಸ್ತ್ರದಲ್ಲಿ ಕ್ರಾಂತಿಕಾರಕ ಅಲೆಯನ್ನು ಎಬ್ಬಿಸಿದನು. ಎರಡನೇ ಜಾಗತಿಕ ಯುದ್ಧದಲ್ಲಿ ಪರಮಾಣು ಬಾಂಬು ಉಂಟುಮಾಡಿದ ಅನಾಹುತ ಕಂಡು ದುಃಖತಪ್ತರಾಗಿ ತಮ್ಮ ಜೀವಿತದ ಕೊನೆಯವರೆಗೆ ಶಾಂತಿ ಸ್ಥಾಪನೆಗಾಗಿ ಶ್ರಮಿಸತೊಡಗಿದರು.

**ಅಬ್ರಹಾಂ ಲಿಂಕನ್** (1809–1865): ಅಮೇರಿಕಾದಲ್ಲಿ ಶಾಪವಾಗಿದ್ದ ಗುಲಾಮಗಿರಿಯನ್ನು ವರ್ಣಭೇದ ನೀತಿಯನ್ನು ತೊಲಗಿಸಲು ಹೋರಾಡಿದ ಧೀರೋದ್ಧಾತ ನಾಯಕ. ಸಾಮಾನ್ಯ ಕುಟುಂಬದಲ್ಲಿ ಜನಿಸಿ, ಗೆಳೆಯರಿಂದ ಪುಸ್ತಕಗಳನ್ನು ಎರವಲಾಗಿ ಪಡೆದು, ಬೀದಿ ದೀಪದ ಬೆಳಕಿನಲ್ಲಿ ಓದಿದವರು. ಇವರು ಅಮೇರಿಕಾದ ರಿಪಬ್ಲಿಕನ್ ಚಳುವಳಿಯಲ್ಲಿ ಧುಮುಕಿ ಅಮೇರಿಕಾದ ಅಧ್ಯಕ್ಷರಾಗಿ ಆಯ್ಕೆಯಾದರು. ಗುಲಾಮಗಿರಿಯನ್ನು ಕಿತ್ತೊಗೆದ ಇವರನ್ನು ಹತ್ಯೆ ಮಾಡಲಾಯಿತು.

**ಖಲೀಫ ಉಮರ್–** ಪೈಗಂಬರ್ ಬಳಿಕ ನೇಮಕಗೊಂಡ ಅರಬ್ಬರ ಆಧ್ಯಾತ್ಮಿಕ ಮತ್ತು ರಾಜಕೀಯ ನಾಯಕ. ಈತನನ್ನು 'ಖಲೀಫ' ಎಂದೂ ಕರೆಯಲಾಗುತ್ತದೆ.

## ಅಭ್ಯಾಸ

**1. ಪದಗಳ ಅರ್ಥ ತಿಳಿಯಿರಿ :**

**ಆಘಾತ** – ಪೆಟ್ಟು; ಕೇಡು.
**ಆಹುತಿ** – ಬಲಿ
**ಕುಬ್ಜ** – ಕುಳ್ಳ; ಸಣ್ಣವ.
**ಕೃತ್ಯ** – ಕೆಲಸ
**ದಿರಿಸು** – ಉಡುಪು
**ಧರಣಿ** – ಭೂಮಿ
**ನೀರವತೆ** – ಮೌನ; ನಿಶ್ಯಬ್ದ.
**ಬೀಭತ್ಸ** – ಜುಗುಪ್ಸೆ; ಅಸಹ್ಯ.
**ಮರುಭೂಮಿ** – ಮರಳು ತುಂಬಿದ ಭೂಮಿ.
**ವಿಭಜಿತ** – ಬೇರೆಯಾದ; ವಿಂಗಡಿಸಿದ.
**ಆರಾಧಿಸು** – ಪೂಜಿಸು; ಸ್ಮರಿಸು.
**ಉದ್ಯುಕ್ತ** – ಪ್ರಯತ್ನಿಸು; ಸಿದ್ಧವಾಗು.
**ಕೃತಜ್ಞತೆ** – ಉಪಕಾರ ಸ್ಮರಣೆ
**ದಿಗಂತ** – ಕ್ಷಿತಿಜ
**ದಿಗ್ವಿಜಯ** – ರಾಜ್ಯಗಳನ್ನು ಜಯಿಸುವುದು.
**ನಿರ್ದಯಿ** – ಕ್ರೂರಿ; ದಯೆ ಇಲ್ಲದವ.
**ಪವಾಡಸದೃಶ** – ಆಶ್ಚರ್ಯಕರ ರೀತಿಯಲ್ಲಿ
**ಭಾಸವಾಗು** – ಕಾಣು; ತೋರು.
**ಮೇಧಾವಿ** – ಬುದ್ಧಿವಂತ.

**2. ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಕಲಾಂ ಅವರು ಸಾಮಾನ್ಯವಾಗಿ ನಿತ್ಯ ಎಷ್ಟು ಗಂಟೆಗೆ ಮಲಗಿ, ಎಷ್ಟು ಗಂಟೆಗೆ ಏಳುತ್ತಿದ್ದರು?
ಕಲಾಂ ಅವರು ಸಾಮಾನ್ಯವಾಗಿ ನಿತ್ಯ ರಾತ್ರಿ ಒಂದು ಗಂಟೆಗೆ ಮಲಗಿ, ಬೆಳಗ್ಗೆ ಆರು ಗಂಟೆಗೆ ಏಳುತ್ತಿದ್ದರು.
2. ಕಲಾಂ ಅವರು ಕನಸಿನಲ್ಲಿ ಕಂಡ ಪ್ರದೇಶ ಯಾವುದು?

ಕಲಾಂ ಅವರು ಕನಸಿನಲ್ಲಿ ಕಂಡ ಪ್ರದೇಶ ಮರುಭೂಮಿ.
3. ಕಲಾಂ ಅವರು ಕನಸಿನಲ್ಲಿ ಕಂಡ ಐವರು ಮಹಾಪುರುಷರು ಯಾರು?
ಕಲಾಂ ಅವರು ಕನಸಿನಲ್ಲಿ ಕಂಡ ಐವರು ಮಹಾಪುರುಷರು– ಮಹಾತ್ಮಾ ಗಾಂಧಿ, ಆಲ್ಬರ್ಟ್ ಐನ್‌ಸ್ಟೀನ್, ಚಕ್ರವರ್ತಿ ಅಶೋಕ, ಅಬ್ರಹಾಂ ಲಿಂಕನ್ ಮತ್ತು ಖಲೀಫ ಉಮರ್
4. ಅಶೋಕನು ಪ್ರತಿಪಾದಿಸಿದ ಧರ್ಮ ಯಾವುದು?
ಅಶೋಕನು ಪ್ರತಿಪಾದಿಸಿದ ಧರ್ಮ 'ಅಹಿಂಸಾ ಧರ್ಮ'.
5. ಅಶೋಕನ ಪ್ರಕಾರ ನಿಜವಾದ ಗೆಲುವು ಯಾವುದು?
ಅಶೋಕನ ಪ್ರಕಾರ "ಶಾಂತಿ ನೆಮ್ಮದಿಯ ಸಾಮ್ರಾಜ್ಯ ನಿರ್ಮಾಣವೇ ನಿಜವಾದ ಗೆಲುವು".

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**
1. ಕಲಾಂ ಅವರು ರಾಂಚಿಯಿಂದ ಬೊಕಾರೋಗೆ ವಿಮಾನದಲ್ಲಿ ತೆರಳುವಾಗ ಯಾವ ದುರ್ಘಟನೆ ನಡೆಯಿತು?
ಕಲಾಂ ಅವರು ರಾಂಚಿಯಿಂದ ಬೊಕಾರೋಗೆ ವಿಮಾನದಲ್ಲಿ ತೆರಳುವಾಗ ಅವರನ್ನು ಕರೆದೊಯ್ಯುತ್ತಿದ್ದ ಹೆಲಿಕಾಪ್ಟರ್ ಇನ್ನೇನು ಭೂಸ್ಪರ್ಶ ಮಾಡಬೇಕೆನ್ನುವಷ್ಟರಲ್ಲಿ ಭಾರೀ ಸದ್ದಿನೊಂದಿಗೆ ನೆಲಕ್ಕಪ್ಪಳಿಸಿತು. ಅದರ ಎಂಜಿನ್‌ನಲ್ಲಿ ಏನೋ ದೋಷ ಕಾಣಿಸಿಕೊಂಡಿತ್ತು.
2. ಕಲಾಂ ಅವರಿಗೆ ನಿದ್ದೆಯಲ್ಲಿ ಯಾವ ಯಾವ ಯೋಚನೆಗಳು ಸುಳಿದಾಡಿದವು?
ಕಲಾಂ ಅವರಿಗೆ ನಿದ್ದೆಯಲ್ಲಿ ಆ ದೇವರ ಸೃಷ್ಟಿಯಲ್ಲಿ ಅತ್ಯಂತ ಶ್ರೇಷ್ಠವಾದುದೆನ್ನಲಾದ ಮಾನವ ಕುಲ ಏಕೆ ಇಷ್ಟೊಂದು ವಿಭಜಿತವಾಗಿದೆ? ಇಷ್ಟೊಂದು ಹಿಂಸಾಚಾರಗಳಲ್ಲಿ ಏಕೆ ತೊಡಗಿಸಿಕೊಳ್ಳುತ್ತಿದೆ?.....ಹೀಗೆ ಏನೇನೋ ಯೋಚನೆಗಳು ಸುಳಿದಾಡಿದವು.
3. ಕಲಾಂ ಅವರು ಕನಸಿನಲ್ಲಿ ಕಂಡ ಪ್ರದೇಶ ಯಾವ ರೀತಿ ಇತ್ತು?
ಕಲಾಂ ಅವರು ಕನಸಿನಲ್ಲಿ ಮರುಭೂಮಿಯನ್ನು ಕಂಡರು. ಅವರ ಸುತ್ತ ಎತ್ತ ನೋಡಿದರೂ ಬರೀ ಮರಳು! ಮೈಲಿ ಮೈಲಿಗಟ್ಟಲೆ ಮರಳು. ದೂರ ದಿಗಂತದವರೆಗೂ! ಆಗಸದಲ್ಲಿ ಪೂರ್ಣಚಂದ್ರ, ಮರಳುಗಾಡಿನುದ್ದಕ್ಕೂ ಹಾಲು ಬೆಳದಿಂಗಳು.
4. ಅಶೋಕನು ನಡೆಸಿದ ಎರಡು ಬಗೆಯ ಬದುಕು ಯಾವುವು?
ಅಶೋಕನು ಎರಡು ಬಗೆಯ ಬದುಕು ನಡೆಸಿದ. ಒಂದು ನಿರ್ದಯಿ ಆಕ್ರಮಣಕಾರನಾಗಿ ಹಾಗೂ ಇನ್ನೊಂದು ದಯಾಮಯಿ ಆಡಳಿತಗಾರನಾಗಿ.
5. ಕಳಿಂಗ ಯುದ್ಧದ ಪರಿಣಾಮವೇನು?
ಆ ಕಳಿಂಗ ಸಮರವು ಕಡಿಮೆಯೆಂದರೂ ಮೂರು ಲಕ್ಷ ಜನರ ಬಲಿ ತೆಗೆದುಕೊಂಡಿತ್ತು. ಅಷ್ಟೇ ಸಂಖ್ಯೆಯ ಜನ ತಮ್ಮ ಅಂಗಾಂಗಗಳನ್ನು ಕಳೆದುಕೊಂಡಿದ್ದರು. ಎಲ್ಲೆಲ್ಲೂ ರಕ್ತದ ಕೋಡಿ! ತನ್ನ ಕೃತ್ಯವನ್ನು ನೆನೆನೆನೆದು ಚಕ್ರವರ್ತಿ ಅಶೋಕ ಅಸಾಧ್ಯ ಯಾತನೆಪಟ್ಟ. ಇನ್ನು ಮುಂದೆ ಯುದ್ಧ ಮಾಡುವುದಿಲ್ಲ ಎಂದು ಪಣ ತೊಟ್ಟ. ಅಂದಿನಿಂದ 'ಅಹಿಂಸಾ ಧರ್ಮ' ಉದಯವಾಯಿತು. ಮಾನವ ಮಾನವನ ನಡುವೆ ಪ್ರೀತಿಯ ಮಹತ್ವವನ್ನು ಸಾರಲು ಮುಂದಾದನು.
6. ಕಲಾಂ ಅವರಿಗೆ ಕನಸಿನಲ್ಲಿ ಅಶೋಕನು ಕಂಡದ್ದು ಹೇಗೆ?
ಘನಗಾಂಭೀರ್ಯದ ಸಾಕಾರಮೂರ್ತಿ ಚಕ್ರವರ್ತಿ ಅಶೋಕನ ಪಕ್ಕದಲ್ಲೇ ಕಲಾಂ ಅವರು ನಿಂತಿದ್ದರು. ಅವನೆದುರು ಕಲಾಂ ತೀರಾ ಕುಬ್ಜನಾದಂತೆ ಅನ್ನಿಸಿತು.
7. ಯುದ್ಧ ಹಾಗೂ ಹತ್ಯೆಯ ಬಗೆಗೆ ಕಲಾಂ ಅವರನ್ನು ಕಾಡಿದ ಪ್ರಶ್ನೆಗಳಾವುವು?
ಕಲಾಂ ಅವರು ನಿಂತಲ್ಲೇ ಒಂದು ಕ್ಷಣ ಗಂಭೀರವಾಗಿ ಯೋಚಿಸಿದರು. ಆ ಕಳಿಂಗ ಯುದ್ಧವಾದರೂ ಯಾಕಾಯಿತು? ಮಹಾತ್ಮಾ ಗಾಂಧಿ, ಅಬ್ರಹಾಂ ಲಿಂಕನ್ ಮತ್ತು ಅವರಂಥ ಅನೇಕ ಮಹಾಪುರುಷರ ಹತ್ಯೆಯಾದರೂ ಯಾಕಾಯಿತು? ಆ ದೇವರು ತನ್ನ ಸೃಷ್ಟಿಯಲ್ಲಿ ಏನಾದರೂ ತಪ್ಪೆಸಗಿರುವನೇ? ಅಥವಾ ಎರಡನೇ ಸೃಷ್ಟಿಗಾಗಿ ಈ ಮಾನವ ಕುಲದ ನಾಶ ಅನಿವಾರ್ಯವೇ? ಇವು ಕಲಾಂ ಅವರಿಗೆ ಯುದ್ಧ ಹಾಗೂ ಹತ್ಯೆಯ ಬಗೆಗೆ ಕಾಡಿದ ಪ್ರಶ್ನೆಗಳು.
8. ಕಲಾಂ ಅವರ ಕನಸಿನಲ್ಲಿ ಅಶೋಕನು ಯಾವ ಸಂದೇಶ ನೀಡಿದನು?
ಕಲಾಂ ಅವರ ಕನಸ್ಸಿನಲ್ಲಿ ಅಶೋಕನು "ಗೆಳೆಯರೇ, ಒಂದು ವಿಷಯವನ್ನಂತೂ ನಾನೀಗ ಚೆನ್ನಾಗಿ ಅರ್ಥ ಮಾಡಿಕೊಂಡಿರುವೆ. ಜಯ ಎಂಬುದು ಸಾವುನೋವು ಉಂಟುಮಾಡುವುದರಲ್ಲಿಲ್ಲ. ಶಾಂತಿ ನೆಮ್ಮದಿಯ ಸಾಮ್ರಾಜ್ಯ ನಿರ್ಮಾಣವೇ ನಿಜವಾದ ಗೆಲುವು" ಎಂದು ಹೇಳುತ್ತಾನೆ.
9. ಕನಸಿನ ಬಗ್ಗೆ ಕಲಾಂ ಅವರ ಸಂದೇಶವೇನು?
"ಕನಸುಗಳನ್ನು ಕಾಣಿರಿ, ಕನಸುಗಳು ಭೂತ, ಭವಿಷ್ಯ ಹಾಗೂ ವರ್ತಮಾನದ ಅನುಭವಗಳನ್ನು ಕಟ್ಟಿಕೊಡುತ್ತವೆ. ಜೊತೆಗೆ ನಮ್ಮ ಬದುಕಿಗೆ ಸ್ಫೂರ್ತಿಯ ಸಂದೇಶಗಳಾಗಿರುತ್ತವೆ" ಎಂದು ಕನಸ್ಸಿನ ಬಗ್ಗೆ ಕಲಾಂ ಅವರು ನೀಡುವ ಸಂದೇಶವಾಗಿದೆ.

**ಇ) ಕೆಳಗಿನ ಪ್ರಶ್ನೆಗಳಿಗೆ ಏಳು–ಎಂಟು ವಾಕ್ಯಗಳಲ್ಲಿ ಉತ್ತರಿಸಿರಿ.**
1. ಅಶೋಕನಲ್ಲಿ ಅಹಿಂಸಾ ಧರ್ಮ ಹೇಗೆ ಉದಯಿಸಿತು?

ಅಶೋಕ ಕಳಿಂಗ ಯುದ್ಧದಲ್ಲಿ ಉಂಟಾದ ಸಾವು ನೋವುಗಳಿಂದ ಆತ ಚಿಂತಿತನಾಗಿದ್ದನು. ಆ ಕಳಿಂಗ ಸಮರವು ಕಡಿಮೆಯೆಂದರೂ ಮೂರು ಲಕ್ಷ ಜನರ ಬಲಿ ತೆಗೆದುಕೊಂಡಿತ್ತು. ಅಷ್ಟೇ ಸಂಖ್ಯೆಯ ಜನ ತಮ್ಮ ಅಂಗಾಂಗಗಳನ್ನು ಕಳೆದುಕೊಂಡಿದ್ದರು. ಚಕ್ರವರ್ತಿ ಅಶೋಕ ಹಾಗೆಯೇ ಕುಳಿತು ಆಗಸದತ್ತ ನೋಟ ಬೀರಿದ. ಮಂದಪ್ರಕಾಶ ಬೀರುತ್ತಿದ್ದ ಪ್ರಶಾಂತ ಪೂರ್ಣಚಂದ್ರನನ್ನು ಕಂಡ. ತಾಯಿ ಧರಣಿಯ ಮೇಲೆ ದೇವರ ಕೃಪಾದೃಷ್ಟಿ ಹರಿಯುತ್ತಿದ್ದುದನ್ನು ಕಂಡ. ಕೆಳಗೆ ನೋಡಿದರೆ, ತಾನು ಸೃಷ್ಟಿಸಿದ ಬೀಭತ್ಸ ದೃಶ್ಯ! ಎಲ್ಲೆಲ್ಲೂ ರಕ್ತದ ಕೋಡಿ! ತನ್ನ ಕೃತ್ಯವನ್ನು ನೆನೆನೆನೆದು ಚಕ್ರವರ್ತಿ ಅಶೋಕ ಅಸಾಧ್ಯ ಯಾತನೆಪಟ್ಟ. ರಮ್ಯ ಮನೋಹರ ಮತ್ತು ಬೀಭತ್ಸ ದೃಶ್ಯಗಳ ಸಮಾಗಮದ ಆ ಕ್ಷಣದಲ್ಲಿ – ಅಶೋಕನ ಕೃತ್ಯದ ಬಗ್ಗೆ ಸ್ವತಃ ನಿಸರ್ಗವೇ ಅಸಹನೆ ವ್ಯಕ್ತಪಡಿಸುತ್ತಿರುವಂತೆ ಕಂಡುಬಂದ ಆ ಕ್ಷಣದಲ್ಲಿ – 'ಅಹಿಂಸಾ ಧರ್ಮ'ದ ಉದಯವಾಯಿತು. ಚಕ್ರವರ್ತಿ ಅಶೋಕ ದೇವರ ಆದೇಶವನ್ನು ಶಿರಸಾವಹಿಸಿದ, 'ಅಹಿಂಸಾ ಪರಮೋ ಧರ್ಮಃ' ಸಿದ್ಧಾಂತದ ಮೂಲಕ ಮಾನವ–ಮಾನವ ನಡುವಣ ಪ್ರೀತಿಯ ಮಹತ್ವವನ್ನು ಸಾರಲು ಉದ್ಯುಕ್ತನಾದನು. ಈ ರೀತಿ ಅಶೋಕನಲ್ಲಿ ಅಹಿಂಸಾ ಧರ್ಮ ಉದಯವಯಿತು.

2. ಕಲಾಂ ಅವರ ಕನಸಿನಲ್ಲಿ ಮಹಾತ್ಮಾ ಗಾಂಧೀಜಿ ಏನೆಂದು ಮಾತನಾಡಿದರು?

ಕಲಾಂ ಅವರ ಕನಸಿನಲ್ಲಿ ಮಹಾತ್ಮಾ ಗಾಂಧೀಜಿಯವರು ಈ ರೀತಿ ಮಾತನಾಡತೊಡಗಿದರು 'ಸ್ನೇಹಿತರೆ, ನಮಗೆ ಕೇಳಿಬರುತ್ತಿರುವ ದಿವ್ಯ ಸಂದೇಶವು ಆ ಸೃಷ್ಟಿಕರ್ತನದು. ಇಲ್ಲಿ ನೆರೆದ ನಾವೆಲ್ಲರೂ ಭೂಗ್ರಹಕ್ಕೆ ಸೇರಿದವರಾಗಿರುವುದರಿಂದ ಇಡೀ ಮಾನವ ಕುಲಕ್ಕೆ ನಾವು ಆ ಸಂದೇಶವನ್ನು ತಲುಪಿಸಬೇಕಾಗಿದೆ. ನಾನಾ ಜಾತಿ–ಜನಾಂಗ, ಮತ–ಧರ್ಮ ಹಾಗೂ ಭಾಷೆಗಳ ಜನರು ಶಾಂತಿ ನೆಮ್ಮದಿಯಿಂದ, ಏಳಿಗೆ ಸಾಧಿಸುತ್ತಾ ಹೇಗೆ ಬಾಳಬಹುದು ಎಂಬುದನ್ನು ನಾವು ತಿಳಿಸಿಕೊಡಬೇಕಾಗಿದೆ. ಆ ದೇವರು ನಮ್ಮೆಲ್ಲರಿಗೂ ವಿಶಿಷ್ಟವಾದುದೇನನ್ನೋ ದಯಪಾಲಿಸಿದ್ದಾನೆ. ಅದನ್ನು ನಾವು ನಮ್ಮ ಸತ್ಕಾರ್ಯಗಳು ಹಾಗೂ ಶ್ರಮದ ಮೂಲಕ ಮಾನವಕುಲಕ್ಕೆ ತಲುಪಿಸಿದ್ದೂ ಆಗಿದೆ. ಆದರೆ, ಅದು ಪರಿಣಾಮ ಬೀರಿದೆಯೇ? ಅದಕ್ಕಾಗಿ ಯಾವುದಾದರೂ ದಿವ್ಯ ಸಂದೇಶ ಅಥವಾ ತತ್ವ ಇದೆಯೇ? ದೈವಿಕ ಸೌಂದರ್ಯವು ಮಾನವನ ಹೃದಯವನ್ನು ಪ್ರವೇಶಿಸುವಂತಾಗಬೇಕು. ಇದು ಸಾಧ್ಯವೇ?' ಎಂದು ಮಹಾತ್ಮ ಗಾಂಧೀಜಿಯವರು ಹೇಳಿದರು.

3. ಮಾನವನ ತನುಮನಗಳಲ್ಲಿ ಸುಖ ಸಂತೋಷ ಅರಳಲು ಏನು ಮಾಡಬೇಕು?

ಮಾನವನ ತನುಮನಗಳಲ್ಲಿ ಸುಖ ಸಂತೋಷ ಅರಳಲು ಉತ್ತಮ ಆಲೋಚನೆ ಮತ್ತು ಉತ್ತಮ ಕಾರ್ಯಗಳನ್ನು ನಡೆಸಬೇಕು. ಬದುಕಿಗೊಂದು ಗುರಿ, ಉದ್ದೇಶವಿರಬೇಕು. ಉತ್ತಮ ಕನಸುಗಳನ್ನು ಸಾಕಾರಗೊಳಿಸಬೇಕು. ಮೇಲಾಗಿ ಮಾನವ ಮಾನವ ನಡುವಣ ಪ್ರೀತಿ ಬೆಳೆಸಬೇಕು. ಜಾತಿ, ಮತ, ಧರ್ಮ, ಭಾಷೆಗಳ ಸಂಕುಚಿತ ಮನೋಭಾವನೆಯಿಂದ ಹೊರಬಂದು ನಾವೆಲ್ಲ ಒಂದು ಎಂಬ ಭಾವನೆ ಹೊಂದಬೇಕು. ಆ ದೇವರ ದಿವ್ಯ ಸಂದೇಶವನ್ನು ಮಾನವನ ಹೃದಯದಲ್ಲಿ ನೆಲೆಸುವಂತಾದರೆ ಮಾನವನ ತನುಮನಗಳಲ್ಲಿ ಸುಖ ಸಂತೋಷ ಅರಳುತ್ತದೆ.

**ಈ) ಸಂದರ್ಭದೊಡನೆ ವಿವರಿಸಿ.**

1. ನಾವು ನಿಜಕ್ಕೂ ಅದೃಷ್ಟ ಮಾಡಿರಬೇಕು!

ಈ ವಾಕ್ಯವನ್ನು **ಎ.ಪಿ.ಜೆ. ಅಬ್ದುಲ್ ಕಲಾಂ** ಅವರು ಬರೆದಿರುವ **'ಪ್ರಜ್ವಲಿತ ದೀಪಗಳು'** ಎಂಬ ಕೃತಿಯಿಂದ ಆಯ್ದ **ಕನಸು ಮತ್ತು ಸಂದೇಶ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಎ.ಪಿ.ಜೆ. ಅಬ್ದುಲ್ ಕಲಾಂರವರು ಹೇಳಿದ್ದಾರೆ. ಕಲಾಂ ಅವರು ರಾಂಚಿಯಿಂದ ಬೊಕಾರೋಗೆ ವಿಮಾನದಲ್ಲಿ ತೆರಳುವಾಗ ಅವರನ್ನು ಕರೆದೊಯ್ಯುತ್ತಿದ್ದ ಹೆಲಿಕಾಪ್ಟರ್ ಇನ್ನೇನು ಭೂಸ್ಪರ್ಶ ಮಾಡಬೇಕೆನ್ನುವಷ್ಟರಲ್ಲಿ ಭಾರೀ ಸದ್ದಿನೊಂದಿಗೆ ನೆಲಕ್ಕಪ್ಪಳಿಸಿತು. ಪವಾಡ ಸದೃಶ ನಾವೆಲ್ಲಾ ಬದುಕಿ ಉಳಿದೆವು ಎಂದು ತಿಳಿಸುವ ಸಮಯದಲ್ಲಿ ಈ ಮೇಲಿನ ಮಾತು ಬಂದಿದೆ.

2. ನನ್ನ ಅತ್ಯಂತ ಮೆಚ್ಚಿನ ಮಹಾ ಪುರುಷರು ಅವರು, ನಾನು ಆರಾಧಿಸುವಂಥವರು.

ಈ ವಾಕ್ಯವನ್ನು **ಎ.ಪಿ.ಜೆ. ಅಬ್ದುಲ್ ಕಲಾಂ** ಅವರು ಬರೆದಿರುವ **'ಪ್ರಜ್ವಲಿತ ದೀಪಗಳು'** ಎಂಬ ಕೃತಿಯಿಂದ ಆಯ್ದ **ಕನಸು ಮತ್ತು ಸಂದೇಶ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಎ.ಪಿ.ಜೆ. ಅಬ್ದುಲ್ ಕಲಾಂರವರು ಹೇಳಿದ್ದಾರೆ. ಅಬ್ದುಲ್ ಕಲಾಂರವರು ಕನಸಿನಲ್ಲಿ ಈ ರೀತಿ ಚಿಂತಿಸುತ್ತಿದ್ದರು. ಆ ದೇವರ ಸೃಷ್ಟಿಯಲ್ಲಿ ಅತ್ಯಂತ ಶ್ರೇಷ್ಠವಾದುದೆನ್ನಲಾದ ಮಾನವ ಕುಲ ಏಕೆ ಇಷ್ಟೊಂದು ವಿಭಜಿತವಾಗಿದೆ? ಇಷ್ಟೊಂದು ಹಿಂಸಾಚಾರಗಳಲ್ಲಿ ಏಕೆ ತೊಡಗಿಸಿಕೊಳ್ಳುತ್ತಿದ್ದಾನೆ ಎಂಬ ಆಲೋಚನೆ ಸುಳಿಯುವಾಗ ಅಷ್ಟರಲ್ಲಿ, ಕಲಾಂ ಅವರ ಅತ್ಯಂತ ಮೆಚ್ಚಿನ ಮಹಾಪುರುಷರು, ಆರಾಧಿಸುವಂಥವರು ಕಂಡರು ಎಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

3. ಅಹಿಂಸಾ ಧರ್ಮದ ಉದಯವಾಯಿತು.

ಈ ವಾಕ್ಯವನ್ನು **ಎ.ಪಿ.ಜೆ. ಅಬ್ದುಲ್ ಕಲಾಂ** ಅವರು ಬರೆದಿರುವ **'ಪ್ರಜ್ವಲಿತ ದೀಪಗಳು'** ಎಂಬ ಕೃತಿಯಿಂದ ಆಯ್ದ **ಕನಸು ಮತ್ತು ಸಂದೇಶ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು **ಎ.ಪಿ.ಜೆ. ಅಬ್ದುಲ್ ಕಲಾಂ** ಅವರು ಅಶೋಕ ಚಕ್ರವರ್ತಿಯನ್ನು ಕುರಿತು ಹೇಳಿದ ಮಾತಾಗಿದೆ. ಕಳಿಂಗ ಸಮರದಲ್ಲಿ ಕಂಡ ಅಸಂಖ್ಯ ಜನರ ಸಾವು ನೋವುಗಳು, ಅಲ್ಲಿ ಭೀಬತ್ಸ ದೃಶ್ಯ ಕಂಡು ಅಶೋಕ ಯುದ್ಧ ಮಾಡುವುದಿಲ್ಲ ಎಂದು ಪಣತೊಟ್ಟು ಅಹಿಂಸಾ ಧರ್ಮ ಸ್ವೀಕರಿಸಿದನು ಎಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

4. ಶಾಂತಿ ನೆಮ್ಮದಿಯ ಸಾಮ್ರಾಜ್ಯ ನಿರ್ಮಾಣವೇ ನಿಜವಾದ ಗೆಲುವು.

ಈ ವಾಕ್ಯವನ್ನು **ಎ.ಪಿ.ಜೆ. ಅಬ್ದುಲ್ ಕಲಾಂ** ಅವರು ಬರೆದಿರುವ **'ಪ್ರಜ್ವಲಿತ ದೀಪಗಳು'** ಎಂಬ ಕೃತಿಯಿಂದ ಆಯ್ದ. **ಕನಸು ಮತ್ತು ಸಂದೇಶ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಅಶೋಕನು ಹೇಳಿದ್ದಾನೆ. ಅಶೋಕನ ಪ್ರಕಾರ ಜಯ ಎಂಬುದು ಸಾವು ನೋವು ಉಂಟು ಮಾಡುವುದರಲ್ಲಿ ಇಲ್ಲ. ಶಾಂತಿ ನೆಮ್ಮದಿಯ ಸಾಮ್ರಾಜ್ಯ ನಿರ್ಮಾಣವೇ ನಿಜವಾದ ಗೆಲುವು ಎಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

**3. ಭಾಷಾಭ್ಯಾಸ :**

**ಅ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

1. ದಿಟ್ಟಿಸು : ಹುಲಿ ಜಿಂಕೆಯನ್ನು ದಿಟ್ಟಿಸಿ ನೋಡಿತು.
2. ಪವಾಡಸದೃಶ : ನಾನು ಬಸ್ಸಿನಲ್ಲಿ ಪ್ರಯಾಣಿಸುವಾಗ ಒಂದು ಪವಾಡಸದೃಶ ನಡೆಯಿತು.
3. ಕೃಪಾದೃಷ್ಟಿ : ನನ್ನ ಗುರುಗಳ ಕೃಪಾದೃಷ್ಟಿ ನನ್ನ ಮೇಲಿದೆ.
4. ಸವಿನಿದ್ದೆ : ಸವಿನಿದ್ದೆಯಲ್ಲಿ ಕನಸುಗಳು ಬೀಳುತ್ತವೆ.
4. ಅಹಿಂಸೆ : ನಾನು ಅಹಿಂಸಾವಾದಿಯಾಗಿದ್ದೇನೆ.
5. ಶಿರಸಾವಹಿಸಿ : ಹಿರಿಯರು ಹೇಳಿದ ಕೆಲಸಗಳನ್ನು ಶಿರಸಾವಹಿಸಿ ಮಾಡುತ್ತೇನೆ.
6. ಸತ್ಕಾರ್ಯ : ನಾವು ಪ್ರತಿದಿನ ಸತ್ಕಾರ್ಯ ಮಾಡುತ್ತೇವೆ.

**ಆ) ಕೆಳಗಿನ ಪದಗಳಿಗೆ ತತ್ಸಮ-ತದ್ಭವಗಳನ್ನು ಬರೆಯಿರಿ.**

ಸಹಸ್ರ – ಸಾವಿರ, ದಿಟ್ಟ– ದೃಷ್ಟಿ, ಸೃಷ್ಟಿ– ಕ್ಷಣ – ಚಣ,
ಧರ್ಮ– ದರುಮ, ಪಯಣ–ಪ್ರಯಾಣ, ಆಗಸ– ಆಕಾಶ, ಯುದ– ಜುದ್ದ.

**ಇ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ.**

ಕೃತಜ್ಞತೆ x ಕೃತಘ್ನತೆ, ದಯೆ x ನಿರ್ದಯೆ, ಸತ್ಕಾರ್ಯ x ದುಸ್ಕಾರ್ಯ, ಅನಿರೀಕ್ಷಿತ x ನಿರೀಕ್ಷಿತ,
ಅದೃಷ್ಟ x ದುರಾದೃಷ್ಟ, ಹಿಂಸೆ x ಅಹಿಂಸೆ, ಅಸಹನೆ x ಸಹನೆ.

**ಈ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

1. ನೆಲಕ್ಕಪ್ಪಳಿಸು = ನೆಲಕ್ಕೆ + ಅಪ್ಪಳಿಸು – ಲೋಪಸಂಧಿ
2. ಅಂಗಾಂಗ = ಅಂಗ + ಅಂಗ – ಸವರ್ಣದೀರ್ಘಸಂಧಿ
3. ದಿಗಂತ = ದಿಕ್ + ಅಂತ – ಜಶ್ತ್ವಸಂಧಿ
4. ಅತ್ಯಂತ = ಅತಿ + ಅಂತ – ಯಣ್‌ಸಂಧಿ
5. ದಿಗ್ವಿಜಯ = ದಿಕ್ + ವಿಜಯ – ಜಶ್ತ್ವಸಂಧಿ
6. ಕಳೆಗುಂದು = ಕಳೆ + ಕುಂದು – ಆದೇಶಸಂಧಿ

**ಉ) ಕೆಳಗಿನ ಪದಗಳಿಗೆ ಸಮನಾರ್ಥಕ ಪದಗಳನ್ನು ಬರೆಯಿರಿ.**

ಯುದ್ಧ – ಸಮರ; ಕಾಳಗ, ಭೂಮಿ – ವಸುಧೆ; ಪೊಡವಿ, ಆರಾಧಿಸು– ಪ್ರಾರ್ಥಿಸು, ಯಾತನೆ– ನೋವು.

**4. ಸೈದ್ಧಾಂತಿಕ ವ್ಯಾಕರಣ :**

**1. ಗುಣಿತಾಕ್ಷರಗಳು :** ವ್ಯಂಜನಗಳಿಗೆ ಸ್ವರಾಕ್ಷರಗಳು ಸೇರಿ ಆಗುವ ಅಕ್ಷರಗಳೆ ಗುಣಿತಾಕ್ಷರಗಳು.

**ಉದಾ : ವ್ಯಂಜನ + ಸ್ವರ = ಗುಣಿತಾಕ್ಷರ**

ಕ್ + ಅ = ಕ
ಚ್ + ಆ = ಚಾ
ಟ್ + ಇ = ಟಿ
ತ್ + ಈ = ತೀ

**2. ಸಂಯುಕ್ತಾಕ್ಷರಗಳು :** ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳಿಗೆ ಒಂದು ಸ್ವರ ಸೇರಿ ಆಗುವ ಅಕ್ಷರವನ್ನು ಸಂಯುಕ್ತಾಕ್ಷರ ಅಥವಾ ಒತ್ತಕ್ಷರ ಎಂದು ಕರೆಯಲಾಗುತ್ತದೆ.

**1. ಸಜಾತಿಯ ಸಂಯುಕ್ತಾಕ್ಷರ :** ಒಂದೇ ಜಾತಿಯ (ಮೂಲದ) ಎರಡು ವ್ಯಂಜನಗಳೊಂದಿಗೆ ಒಂದು ಸ್ವರ ಸೇರಿದಾಗ ಸಜಾತಿಯ ಸಂಯುಕ್ತಾಕ್ಷರ ಉಂಟಾಗುತ್ತದೆ.

**ಉದಾ :** ಅಮ್ಮ, ಅಣ್ಣ, ಕಲ್ಲು, ಮಣ್ಣು, ಕನ್ನಡ, ಸದ್ದು.

**2. ವಿಜಾತಿಯ ಸಂಯುಕ್ತಾಕ್ಷರ :** ಬೇರೆ ಜಾತಿಯ ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳ ಜತೆಯಲ್ಲಿ ಒಂದು ಸ್ವರ ಸೇರಿದಾಗ ವಿಜಾತಿಯ ಸಂಯುಕ್ತಾಕ್ಷರ ಉಂಟಾಗುತ್ತದೆ.

**ಉದಾ :** ಶಾಸ್ತ್ರ, ಸ್ತ್ರೀ, ಅಕ್ಷರ, ವಿದ್ಯೆ, ಕಷ್ಟ, ತ್ರಿಶೂಲ.

## 3. ಗಾಂಧೀಜಿಯ ಬಾಲ್ಯ

**ಮೂಲ: ಗಾಂಧೀಜಿ**

**ಕೃತಿಕಾರರ ಪರಿಚಯ :** **1)ಮಹಾತ್ಮಾ ಗಾಂಧೀಜಿ** (ಮೂಲ ಲೇಖಕರು)

- ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಪೂರ್ಣ ಹೆಸರು 'ಮೋಹನದಾಸ ಕರಮಚಂದ ಗಾಂಧಿ'. ಇವರು **1869 ನೇ ಅಕ್ಟೋಬರ್ 02** ರಂದು ಗುಜರಾತಿನ ಪೋರಬಂದರಿನಲ್ಲಿ ಜನಿಸಿದರು.
- ತಮ್ಮ ಬದುಕಿನ ಅನುಭವಗಳನ್ನು ಹಾಗೂ ಪ್ರಯೋಗಗಳನ್ನು ಕುರಿತು ಅವರೇ ಬರೆದ **'ಮೈ ಎಕ್ಸ್‌ಪಿರಿಮೆಂಟ್ ವಿಥ್‌ಟ್ರೂತ್'** ಜಗತ್ತಿನ ಹಲವು ಭಾಷೆಗಳಿಗೆ ಭಾಷಾಂತರಗೊಂಡಿದೆ.

**2. ಗೊರೂರು ರಾಮಸ್ವಾಮಿ ಅಯ್ಯಂಗಾರ್ :** (ಅನುವಾದಕರು)

* ಗೊರೂರು ರಾಮಸ್ವಾಮಿ ಅಯ್ಯಂಗಾರರು ಹಾಸನ ಜಿಲ್ಲೆಯ ಗೊರೂರು ಗ್ರಾಮದವರು. ಇವರು **1904 ನೇ ಜುಲೈ 04** ರಂದು ಜನಿಸಿದರು.

* ಇವರು ಸ್ವಾತಂತ್ರ್ಯವೇ ಧರ್ಮ, ಹಳ್ಳಿಯಹಾಡು, ಮೆರವಣಿಗೆ, ನಮ್ಮ ಊರಿನ ರಸಿಕರ, ಗರುಡಗಂಬದ ದಾಸಯ್ಯ- ಇನ್ನೂ ಮುಂತಾದ ಕೃತಿಗಳನ್ನು ಬರೆದಿದ್ದಾರೆ.

* ಪ್ರಸ್ತುತ ಗದ್ಯಭಾಗವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರರು ಅನುವಾದಿಸಿರುವ ಮೋ. ಕ. ಗಾಂಧಿ ಅವರ **'ನನ್ನ ಸತ್ಯಾನ್ವೇಷಣೆ'** ಕೃತಿಯಿಂದ ಆಯ್ದುಕೊಳ್ಳಲಾಗಿದೆ.

### ಅಭ್ಯಾಸ

**1. ಪದಗಳ ಅರ್ಥ ತಿಳಿಯಿರಿ :**

**ಅಂಕಿತ** – ಗುರುತು
**ಆದರ** – ಗೌರವ; ಪ್ರೀತಿ.
**ಆಣತಿ** – ಆಜ್ಞೆ
**ಕಲೆ** – ನೈಪುಣ್ಯತೆ
**ಕಿಂಚಿತ್ತೂ** – ಸ್ವಲ್ಪವೂ; ಕೊಂಚವೂ
**ಕೆಟಲ್** – ಕಾಫಿ ಸಂಗ್ರಹಿಸಿಡುವ ಸಾಧನ.
**ಗದರಿಸು** (ಕ್ರಿ) – ಅಬ್ಬರಿಸು
**ಪಿತೃ** – ತಂದೆ
**ರಾಗಮಾಲಿಕೆ** – ಸಂಗೀತ ಸಾಧನ
**ವೃಥಾ** – ನಿಷ್ಕಾರಣವಾಗಿ; ವ್ಯರ್ಥವಾಗಿ.
**ಅಕ್ಷರಶಃ** – ಪ್ರತಿಯೊಂದು ವಿವರದಲ್ಲೂ
**ಸೂರೆ** – ಕೊಳ್ಳೆ; ಲೂಟಿ.
**ಆರ್ತ** – ಕಷ್ಟಕ್ಕೆ ಸಿಲುಕಿದ; ದುಃಖಿತ.
**ಕಾಪಿ** – ನಕಲು; ಕದ್ದು ಬರೆಯುವುದು
**ಕುಚೋದ್ಯ** – ಕಿಡಿಗೇಡಿತನ; ಅಪಹಾಸ್ಯ.
**ಕ್ಲೇಶ** – ದುಃಖ; ನೋವು.
**ಪಾದರಕ್ಷೆ** – ಚಪ್ಪಲಿ
**ಪೈಕಿ** (ಅ) – ಸಂಬಂಧದಲ್ಲಿ
**ವಿಲಾಪ** – ಅಳುವಿಕೆ
**ಸತ್ಯಸಂಧ** – ನಿಜವನ್ನು ನುಡಿಯುವವನು
**ಅಡ್ಡೆ** – ಹೆಗಲ ಮೇಲೆ ಹೊರುವುದಕ್ಕಾಗಿ ತಕ್ಕಡಿಯಂತೆ ಮಾಡಿರುವ ಬಿದಿರ ದಬ್ಬೆಯ ಸಾಧನ.

**2. ಪ್ರಶ್ನೆಗಳು :**

**ಅ) ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿರಿ.**

1. ಮಹಾತ್ಮ ಗಾಂಧೀಜಿಯವರ ಆತ್ಮಕಥೆಯ ಹೆಸರು **ನನ್ನ ಸತ್ಯಾನ್ವೇಷಣೆ**
2. ಗಾಂಧೀಜಿಯವರು ಪರೀಕ್ಷೆಯಲ್ಲಿ ತಪ್ಪಾಗಿ ಬರೆದ ಪದ **ಕೆಟಲ್**
3. ಗಾಂಧೀಜಿಯವರು ಬಾಲ್ಯದಲ್ಲಿ ಓದಿದ ಮೊದಲ ಪುಸ್ತಕ **ಶ್ರವಣನ ಪಿತೃಭಕ್ತಿ**
4. ಬಾಲ್ಯದಲ್ಲಿ ಗಾಂಧೀಜಿಯವರ ಮೇಲೆ ಪ್ರಭಾವ ಬೀರಿದ ನಾಟಕದ ಹೆಸರು **ಹರಿಶ್ಚಂದ್ರ**

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಗಾಂಧೀಜಿಯವರಿಗೆ ಪರೀಕ್ಷೆಯಲ್ಲಿ ಕಾಪಿ ಮಾಡುವಂತೆ ಉಪಾಧ್ಯಾಯರು ಏಕೆ ಸೂಚಿಸಿದರು?
ಗಾಂಧೀಜಿಯವರು ಮುಂದಿನ ಹುಡುಗನ ಸ್ಲೇಟನ್ನು ನೋಡಿಕೊಂಡು ತನ್ನ ತಪ್ಪನ್ನು ತಿದ್ದಿಕೊಳ್ಳಬೇಕೆಂದು ಪರೀಕ್ಷೆಯಲ್ಲಿ ಕಾಪಿ ಮಾಡುವಂತೆ ಉಪಾಧ್ಯಾಯರು ಸೂಚಿಸಿದರು.
2. ಉಪಾಧ್ಯಾಯರು ಸೂಚಿಸಿದರೂ ಗಾಂಧೀಜಿ ಪರೀಕ್ಷೆಯಲ್ಲಿ ಕಾಪಿ ಮಾಡಲಿಲ್ಲ ಏಕೆ?
ಕಾಪಿ ಮಾಡದಂತೆ ನೋಡಿಕೊಳ್ಳುವುದೇ ಉಪಾಧ್ಯಾಯರ ಕೆಲಸವೆಂದು ತಿಳಿದ ಕಾರಣ ಗಾಂಧೀಜಿ ಪರೀಕ್ಷೆಯಲ್ಲಿ ಕಾಪಿ ಮಾಡಲಿಲ್ಲ.
3. ಉಪಾಧ್ಯಾಯರು ವಿದ್ಯಾರ್ಥಿಗಳಿಗೆ ಕಾಪಿ ಮಾಡಲು ಸೂಚಿಸುವುದು ಸರಿಯಲ್ಲ ಏಕೆ?
ಮಕ್ಕಳ ತಪ್ಪನ್ನು ತಿದ್ದಿ ಸರಿದಾರಿಗೆ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗುವುದು ಉಪಾಧ್ಯಾಯರ ಕೆಲಸವಾದ್ದರಿಂದ ಕಾಪಿ ಮಾಡಲು ಸೂಚಿಸುವುದು ಸರಿಯಲ್ಲ.
4. ಗಾಂಧೀಜಿಯವರಿಗೆ ಕಾಪಿ ಮಾಡಲು ಹೇಳಿದ ಉಪಾಧ್ಯಾಯರ ಮೇಲೆ ಗೌರವ ಏಕೆ ಕಡಿಮೆ ಆಗಲಿಲ್ಲ?
ಏಕೆಂದರೆ ಹಿರಿಯರ ದೋಷಗಳನ್ನು ಎಣಿಸದಿರುವುದು ಗಾಂಧೀಜಿಯವರ ಸ್ವಾಭಾವಿಕ ಗುಣವಾಗಿತ್ತು.
5. ಗಾಂಧೀಜಿಯವರಿಗೆ ಬಾಲ್ಯದಲ್ಲಿ ಪ್ರಭಾವ ಬೀರಿದ ಇಬ್ಬರು ವ್ಯಕ್ತಿಗಳಾರು?
ಗಾಂಧೀಜಿಯವರಿಗೆ ಬಾಲ್ಯದಲ್ಲಿ ಪ್ರಭಾವ ಬೀರಿದ ಇಬ್ಬರು ವ್ಯಕ್ತಿಗಳು ಹರಿಶ್ಚಂದ್ರ ಮತ್ತು ಶ್ರವಣ ಕುಮಾರ.

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**
1. ಗಾಂಧೀಜಿಯವರ ಬಾಲ್ಯದಲ್ಲಿದ್ದ ಸ್ವಭಾವಗಳಾವುವು?
ಗಾಂಧೀಜಿಯವರಿಗೆ ಆ ಕಾಲದಲ್ಲಿ ಶಿಕ್ಷಕರಿಗಾಗಲಿ, ಸ್ನೇಹಿತರಿಗಾಗಲಿ ಎಂದೂ ಸುಳ್ಳು ಹೇಳಿದ ನೆನಪಿಲ್ಲ. ಅವರು ಬಹಳ ನಾಚಿಕೆಯ ಸ್ವಭಾವದವರಾಗಿದ್ದರು. ಯಾರ ಜತೆಗೂ ಸೇರುತ್ತಿರಲಿಲ್ಲ. ಅವರ ಪುಸ್ತಕ, ಪಾಠಗಳು ಅವರ ಮಿತ್ರರಾಗಿದ್ದರು.
2. ಗಾಂಧೀಜಿಯವರಿಗೆ ಪರೀಕ್ಷೆಯಲ್ಲಿ ಕಾಪಿ ಮಾಡುವಂತೆ ಉಪಾಧ್ಯಾಯರು ಯಾವ ರೀತಿ ಸೂಚಿಸಿದರು?
ಗಾಂಧೀಜಿಯವರ ಉಪಾಧ್ಯಾಯರು ತಮ್ಮ ಪಾದರಕ್ಷೆಯ ತುದಿಯಿಂದ ಗಾಂಧೀಜಿಯವರನ್ನು ಎಚ್ಚರಿಸಲು ಪ್ರಯತ್ನಿಸಿದರು. ಗಾಂಧೀಜಿಯವರು ಆ ಸೂಚನೆಯಂತೆ ನಡೆಯಲಿಲ್ಲ. ಮುಂದಿನ ಹುಡುಗನ ಸ್ಲೇಟನ್ನು ನೋಡಿಕೊಂಡು ಗಾಂಧೀಜಿಯವರು ತನ್ನ ತಪ್ಪನ್ನು ತಿದ್ದಿಕೊಳ್ಳಬೇಕೆಂಬುದು ಉಪಾಧ್ಯಾಯರ ಉದ್ದೇಶವಾಗಿತ್ತು.
3. ಶ್ರವಣ ಪಿತೃಭಕ್ತಿ ನಾಟಕದಲ್ಲಿನ ಯಾವ ಅಂಶ ಗಾಂಧೀಜಿಯವರ ಮೇಲೆ ಪ್ರಭಾವ ಬೀರಿತು?
ಶ್ರವಣ ತನ್ನ ಕುರುಡು ತಂದೆತಾಯಿಯರನ್ನು ಅಡ್ಡೆಯಲ್ಲಿ ಕೂರಿಸಿಕೊಂಡು, ಅದನ್ನು ಹೆಗಲಿನ ಮೇಲೆ ಹೊತ್ತುಕೊಂಡು ಯಾತ್ರೆಗಾಗಿ ಹೋಗುತ್ತಿದ್ದ ಚಿತ್ರ. ಆ ಪುಸ್ತಕ, ಆ ದೃಶ್ಯ ಎರಡೂ ಗಾಂಧೀಜಿಯವರ ಅಂತರಂಗದಲ್ಲಿ ಶಾಶ್ವತವಾಗಿ ಪ್ರಭಾವ ಬೀರಿತು.
4. ಹರಿಶ್ಚಂದ್ರ ನಾಟಕ ಗಾಂಧೀಜಿಯವರ ಮನಸ್ಸಿನಲ್ಲಿ ಯಾವ ರೀತಿಯ ಸ್ಫೂರ್ತಿ ತುಂಬಿತು?
ಗಾಂಧೀಜಿಯವರು ಲೆಕ್ಕವಿಲ್ಲದಷ್ಟು ಸಲ ತಾನೇ ಹರಿಶ್ಚಂದ್ರನಾಗಿ ಆ ನಾಟಕವನ್ನು ಅಭಿನಯಿಸಿಕೊಂಡರು. ಎಲ್ಲರೂ ಏಕೆ ಹರಿಶ್ಚಂದ್ರನಂತೆ ಸತ್ಯಸಂಧರಾಗಿರಬಾರದು? ಇದೇ ಹಗಲೂ ರಾತ್ರಿ ಗಾಂಧೀಜಿ ತಾನೇ ಕೇಳಿಕೊಳ್ಳುತ್ತಿದ್ದ ಪ್ರಶ್ನೆಯಾಗಿತ್ತು. ಸತ್ಯವನ್ನು ಅನುಸರಿಸಬೇಕು. ಹರಿಶ್ಚಂದ್ರ ಸತ್ಯಕ್ಕಾಗಿ ಪಟ್ಟ ಕ್ಲೇಶವನ್ನೆಲ್ಲ, ಆಪತ್ತುಗಳನ್ನೆಲ್ಲ ನಾನೂ ಪಡಬೇಕು. ಇದೊಂದೇ ಅವರ ಮನಸ್ಸಿನಲ್ಲಿ ಸ್ಫೂರ್ತಿ ತುಂಬಿದ ಆದರ್ಶವಾಗಿತ್ತು.

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**
1. ಗಾಂಧೀಜಿಯವರು ಪ್ರೌಢಶಾಲೆಯಲ್ಲಿ ಓದುತ್ತಿರುವಾಗ ಪರೀಕ್ಷಾ ಕೊಠಡಿಯಲ್ಲಿ ಯಾವ ಘಟನೆ ನಡೆಯಿತು?
ಗಾಂಧೀಜಿಯವರ ಪ್ರೌಢಶಾಲೆಯ ಮೊದಲನೆಯ ವರ್ಷದ ಪರೀಕ್ಷೆಯ ವೇಳೆಯಲ್ಲಿ ನಡೆದ ಘಟನೆಯೊಂದನ್ನು ಹೇಳಬೇಕು. ಇನ್‌ಸ್ಪೆಕ್ಟರ್ ಮಿ. ಗೈಲ್ಸ್ ಪರಿಶೀಲನೆಗಾಗಿ ಶಾಲೆಗೆ ಬಂದಿದ್ದರು. ಅವರು ಮೊದಲನೆಯ ತರಗತಿಯ ವಿದ್ಯಾರ್ಥಿಗಳಿಗೆ ಐದು ಪದಗಳನ್ನು ಬರೆಯಲು ಕೊಟ್ಟರು. ಅವುಗಳ ಪೈಕಿ ಕೆಟಲ್ ಎಂಬ ಪದವೂ ಒಂದು. ಗಾಂಧೀಜಿಯವರು ಅದನ್ನು ತಪ್ಪಾಗಿ ಬರೆದೆ. ನಮ್ಮ ಉಪಾಧ್ಯಾಯರು ತಮ್ಮ ಪಾದರಕ್ಷೆಯ ತುದಿಯಿಂದ ಗಾಂಧೀಜಿಯವರನ್ನು ಎಚ್ಚರಿಸಲು ಪ್ರಯತ್ನಿಸಿದರು. ಅವರು ಆ ಸೂಚನೆಯಂತೆ ನಡೆಯಲಿಲ್ಲ. ಮುಂದಿನ ಹುಡುಗನ ಸ್ಲೇಟನ್ನು ನೋಡಿಕೊಂಡು ತನ್ನ ತಪ್ಪನ್ನು ತಿದ್ದಿಕೊಳ್ಳಬೇಕೆಂಬುದು ನಮ್ಮ ಉಪಾಧ್ಯಾಯರ ಉದ್ದೇಶ. ಅದು ಅವರಿಗೆ ಒಪ್ಪಿಗೆಯಾಗಲಿಲ್ಲ. ಏಕೆಂದರೆ ನಾವು ಕಾಪಿ ಮಾಡದಂತೆ ನೋಡಿಕೊಳ್ಳುವುದೇ ಉಪಾಧ್ಯಾಯರ ಕೆಲಸವೆಂದು ಗಾಂಧೀಜಿಯವರು ತಿಳಿದಿದ್ದರು. ಇದರ ಪರಿಣಾಮವಾಗಿ ಗಾಂಧೀಜಿಯವರನ್ನು ಹೊರತು ಉಳಿದ ಹುಡುಗರೆಲ್ಲ ಐದೂ ಪದಗಳನ್ನೂ ಸರಿಯಾಗಿ ಬರೆದಿದ್ದರು.
2. ಗಾಂಧೀಜಿಯವರಿಗೆ ಬಾಲ್ಯದಲ್ಲಿ ಶ್ರವಣನ ಪಿತೃಭಕ್ತಿ ಹಾಗೂ ಸತ್ಯ ಹರಿಶ್ಚಂದ್ರ ನಾಟಕಗಳು ಯಾವ ರೀತಿ ಪ್ರಭಾವ ಬೀರಿದವು?

ಗಾಂಧೀಜಿಯವರಿಗೆ ಬಾಲ್ಯದಲ್ಲಿ ಶ್ರವಣನ ಪಿತೃಭಕ್ತಿ ಹಾಗೂ ಸತ್ಯ ಹರಿಶ್ಚಂದ್ರ ನಾಟಕಗಳು ಪ್ರಭಾವ ಬೀರಿದವು. ಶ್ರವಣ ತನ್ನ ಕುರುಡು ತಂದೆತಾಯಿಯರನ್ನು ಅಡ್ಡೆಯಲ್ಲಿ ಕೂರಿಸಿಕೊಂಡು, ಅದನ್ನು ಹೆಗಲಿನ ಮೇಲೆ ಹೊತ್ತುಕೊಂಡು ಯಾತ್ರೆಗಾಗಿ ಹೋಗುತ್ತಿದ್ದ ಚಿತ್ರ. ಆ ಪುಸ್ತಕ, ಆ ದೃಶ್ಯ ಎರಡೂ ಗಾಂಧೀಜಿಯವರ ಅಂತರಂಗದಲ್ಲಿ ಶಾಶ್ವತವಾಗಿ ಅಂಕಿತವಾದವು. ಗಾಂಧೀಜಿಯವರು ಲೆಕ್ಕವಿಲ್ಲದಷ್ಟು ಸಲ ತಾನೇ ಹರಿಶ್ಚಂದ್ರನಾಗಿ ಆ ನಾಟಕವನ್ನು ಅಭಿನಯಿಸಿಕೊಂಡರು. ಎಲ್ಲರೂ ಏಕೆ ಹರಿಶ್ಚಂದ್ರನಂತೆ ಸತ್ಯಸಂಧರಾಗಿರಬಾರದು? ಇದೇ ಹಗಲೂ ರಾತ್ರಿ ಗಾಂಧೀಜಿ ತಾನೇ ಕೇಳಿಕೊಳ್ಳುತ್ತಿದ್ದ ಪ್ರಶ್ನೆಯಾಗಿತ್ತು. ಸತ್ಯವನ್ನು ಅನುಸರಿಸಬೇಕು. ಹರಿಶ್ಚಂದ್ರ ಸತ್ಯಕ್ಕಾಗಿ ಪಟ್ಟ ಕ್ಲೇಶವನ್ನೆಲ್ಲ, ಆಪತ್ತುಗಳನ್ನೆಲ್ಲ ತಾನೂ ಪಡಬೇಕು. ಇದೊಂದೇ ಅವರ ಮನಸ್ಸಿನಲ್ಲಿ ಸ್ಫೂರ್ತಿ ತುಂಬಿದ ಆದರ್ಶವಾಗಿತ್ತು.

**ಉ) ಸಂದರ್ಭದೊಡನೆ ವಿವರಿಸಿ.**

1. ಹಿರಿಯರ ಆಣತಿಯನ್ನು ಪಾಲಿಸುವುದು ನಮ್ಮ ಕರ್ತವ್ಯ.

ಈ ವಾಕ್ಯವನ್ನು **ಗಾಂಧೀಜಿ** ಅವರು ಬರೆದಿರುವ **ನನ್ನ ಸತ್ಯಾನ್ವೇಷಣೆ** ಎಂಬ ಕೃತಿಯಿಂದ ಆಯ್ದ **ಗಾಂಧೀಜಿಯ ಬಾಲ್ಯ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಗಾಂಧೀಜಿಯವರು ಹೇಳಿದ್ದಾರೆ. ಗಾಂಧೀಜಿಯವರ ಉಪಾಧ್ಯಾಯರು ತಮ್ಮ ಪಾದರಕ್ಷೆಯ ತುದಿಯಿಂದ ಗಾಂಧೀಜಿಯವರನ್ನು ಎಚ್ಚರಿಸಲು ಪ್ರಯತ್ನಿಸಿದರು. ಗಾಂಧೀಜಿಯವರು ಆ ಸೂಚನೆಯಂತೆ ನಡೆಯಲಿಲ್ಲ. ಏಕೆಂದರೆ ಹಿರಿಯರ ದೋಷಗಳನ್ನು ಎಣಿಸದಿರುವುದು ಮತ್ತು ಹಿರಿಯರ ಆಣತಿಯನ್ನು ಪಾಲಿಸಬೇಕೆಂದು ಗಾಂಧೀಜಿಯವರು ತಿಳಿದಿದ್ದರು ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ವ್ಯಕ್ತವಾಗಿದೆ.

2. ಇಗೋ ಇಲ್ಲಿ ನಿನಗೊಂದು ಆದರ್ಶವಿದೆ. ಅದನ್ನು ಅನುಸರಿಸು.

ಈ ವಾಕ್ಯವನ್ನು **ಗಾಂಧೀಜಿ** ಅವರು ಬರೆದಿರುವ **ನನ್ನ ಸತ್ಯಾನ್ವೇಷಣೆ** ಎಂಬ ಕೃತಿಯಿಂದ ಆಯ್ದ **ಗಾಂಧೀಜಿಯ ಬಾಲ್ಯ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಗಾಂಧೀಜಿಯವರು ತಮ್ಮ ಮನಸ್ಸಿನಲ್ಲೇ ಹೇಳಿಕೊಂಡಿದ್ದಾರೆ. ಗಾಂಧೀಜಿಯವರು ಬಾಲ್ಯದಲ್ಲಿ 'ಶ್ರವಣ ಪಿತೃ ಭಕ್ತಿ' ನಾಟಕದ ಪುಸ್ತಕವನ್ನು ಓದಿದ್ದರು. ಅದೇ ಸಮಯದಲ್ಲಿ ಸಂಚಾರೀ ಬೊಂಬೆ ಪ್ರದರ್ಶಕರು ಗಾಂಧೀಜಿಯವರ ಊರಿಗೆ ಬಂದರು. ಅವರು ಗಾಂಧೀಜಿಯವರಿಗೆ ತೋರಿಸಿದ ಒಂದು ಚಿತ್ರ, "ಇಗೋ ಇಲ್ಲಿ ನಿನಗೊಂದು ಆದರ್ಶವಿದೆ. ಅದನ್ನು ಅನುಸರಿಸು" ಎಂದು ಹೇಳಿಕೊಳ್ಳುವ ಸಮಯದಲ್ಲಿ ಈ ಮೇಲಿನ ಮಾತು ಬಂದಿದೆ.

3. ಎಲ್ಲರೂ ಏಕೆ ಹರಿಶ್ಚಂದ್ರನಂತೆ ಸತ್ಯಸಂಧರಾಗಿರಬಾರದು?

ಈ ವಾಕ್ಯವನ್ನು **ಗಾಂಧೀಜಿ** ಅವರು ಬರೆದಿರುವ **ನನ್ನ ಸತ್ಯಾನ್ವೇಷಣೆ** ಎಂಬ ಕೃತಿಯಿಂದ ಆಯ್ದ **ಗಾಂಧೀಜಿಯ ಬಾಲ್ಯ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಗಾಂಧೀಜಿಯವರು ಹೇಳಿದ್ದಾರೆ. ಗಾಂಧೀಜಿಯವರು ಲೆಕ್ಕವಿಲ್ಲದಷ್ಟು ಸಲ ತಾನೇ ಹರಿಶ್ಚಂದ್ರನಾಗಿ ಆ ನಾಟಕವನ್ನು ಅಭಿನಯಿಸಿಕೊಂಡರು. ಎಲ್ಲರೂ ಏಕೆ ಹರಿಶ್ಚಂದ್ರನಂತೆ ಸತ್ಯಸಂಧರಾಗಿರಬಾರದು? ಇದೇ ಹಗಲೂ ರಾತ್ರಿ ಗಾಂಧೀಜಿ ತಾನೇ ತನ್ನ ಮನಸ್ಸಿನಲ್ಲಿಯೇ ಪ್ರಶ್ನೆಗಳನ್ನು ಕೇಳಿಕೊಳ್ಳುವ ಸಮಯದಲ್ಲಿ ಈ ಮೇಲಿನ ಮಾತು ಬಂದಿದೆ.

**೩. ಭಾಷಾಭ್ಯಾಸ :**

**ಅ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

1. ಅಕ್ಷರಶಃ : ಹರಿಶ್ಚಂದ್ರನು ಸತ್ಯವಂತನೆಂಬುದು ಅಕ್ಷರಶಃ ಸತ್ಯ.
2. ಸೂರೆಗೊಳ್ಳು : ಶಾಮಾಶಾಸ್ತ್ರಿಯವರ ಸಂಗೀತ ನನ್ನ ಮನಸ್ಸನ್ನು ಸೂರೆಗೋಡಿತು.
3. ಸ್ಫೂರ್ತಿ : ಗಾಂಧೀಜಿಯವರ ಆದರ್ಶ ನನಗೆ ಸ್ಫೂರ್ತಿಯಾಗಿದೆ.
4. ಆದರ್ಶ : ನಾವು ಆದರ್ಶ ವ್ಯಕ್ತಿಗಳ ತತ್ವಗಳನ್ನು ಪಾಲಿಸಬೇಕು.
5. ಕರ್ತವ್ಯ. : ನಾವು ಮಾಡುವ ಕರ್ತವ್ಯದಲ್ಲಿ ಪ್ರಾಮಾಣಿಕತೆ ಇರಬೇಕು.

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕಗಳನ್ನು ಬರೆಯಿರಿ.**

ಸತ್ಯ x ಅಸತ್ಯ, ಹಗಲು x ರಾತ್ರಿ, ಯೋಗ್ಯ x ಅಯೋಗ್ಯ,

ದಡ್ಡ x ಜಾಣ, ಪ್ರಶ್ನೆ x ಉತ್ತರ, ಆಸಕ್ತಿ x ನಿರಾಸಕ್ತಿ.

**ಇ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

1) ನ್ಯಾಯಾಲಯ = ನ್ಯಾಯ + ಆಲಯ, 2) ವಿದ್ಯಾಭ್ಯಾಸ = ವಿದ್ಯ + ಅಭ್ಯಾಸ

3) ವಿದ್ಯಾರ್ಥಿ = ವಿದ್ಯಾ + ಅರ್ಥಿ, 4) ಮತ್ತೊಂದು =ಮತ್ತು + ಒಂದು,

5) ಶಾಲೆಯನ್ನು = ಶಾಲೆ + ಅನ್ನು.

**ಈ) ಕೆಳಗಿನ ಪದಗಳಿಗೆ ತತ್ಸಮ–ತದ್ಭವ ರೂಪ ಬರೆಯಿರಿ.**

ಅಕ್ಷರ– ಅಕ್ಕರ, ದೃಶ್ಯ– ದೃಶ, ಮಸ್ತಕ– ಹೊತ್ತಿಗೆ, ವರ್ಷ–ವರುಷ, ನಿತ್ಯ– ನಿಚ್ಚ, ಕಥೆ–ಕತೆ.

**4. ಸೈದ್ಧಾಂತಿಕ ವ್ಯಾಕರಣ :**

**ಸಂಧಿಗಳು :**

*ಎರಡು ಅಕ್ಷರಗಳು ಪರಸ್ಪರ ಕಾಲ ವಿಳಂಬವಾಗದಂತೆ ಅರ್ಥಕ್ಕೆ ಅನುಸಾರವಾಗಿ ಸೇರುವುದನ್ನು 'ಸಂಧಿ' ಎಂದು ಕರೆಯಲಾಗುತ್ತದೆ.

***ಕನ್ನಡ ಸಂಧಿಗಳು** :ಸಂಧಿ ಆಗುವ ಎರಡು ಪದಗಳು ಕನ್ನಡ, ಇಲ್ಲವೇ ಒಂದು ಕನ್ನಡ ಮತ್ತೊಂದು ಸಂಸ್ಕೃತವಾಗಿದ್ದರೆ ಅದನ್ನು **'ಕನ್ನಡ ಸಂಧಿ'** ಎಂದು ಕರೆಯಲಾಗುತ್ತದೆ.

**1. ಲೋಪಸಂಧಿ :**

**ಉದಾ : ಪೂರ್ವಪದ + ಉತ್ತರಪದ = ಸಂಧಿಪದ**

ಮಾತು + ಇಲ್ಲ = ಮಾತಿಲ್ಲ

ಬೇರೆ + ಒಬ್ಬ = ಬೇರೊಬ್ಬ

ನಿನಗೆ + ಅಲ್ಲದೆ = ನಿನಗಲ್ಲದೆ

**2. ಆಗಮ ಸಂಧಿ :**

**ಉದಾ : ಪೂರ್ವಪದ + ಉತ್ತರಪದ = ಸಂಧಿಪದ**

ಗುರು + ಅನ್ನು = ಗುರುವನ್ನು

ಪಿತೃ + ಅನ್ನು = ಪಿತೃವನ್ನು

ಕೈ + ಅಲ್ಲಿ = ಕೈಯಲ್ಲಿ

ಶಾಲೆ + ಇಂದ = ಶಾಲೆಯಿಂದ

**3. ಆದೇಶ ಸಂಧಿ :**

**ಉದಾ : ಪೂರ್ವಪದ + ಉತ್ತರಪದ = ಸಂಧಿಪದ**

ಮಳೆ + ಕಾಲ = ಮಳೆಗಾಲ

ಬೆಟ್ಟ + ತಾವರೆ = ಬೆಟ್ಟದಾವರೆ

ಹೂ + ಮುಟ್ಟಿ = ಹೂಬುಟ್ಟಿ

## 4. ಸುಕ್ರಿ ಬೊಮ್ಮನ ಗೌಡ – ಶಾಂತಿ ನಾಯಕ

**ಕೃತಿಕಾರರ ಪರಿಚಯ :**

- **ಶಾಂತಿ ನಾಯಕ** ಅವರು 1943 ರಂದು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಬೇಲೇಕೇರಿಯಲ್ಲಿ ಜನಿಸಿದರು.
- ಇವರು. ಉತ್ತರ ಕನ್ನಡ ಜಿಲ್ಲೆಯ ಜನಪದ ಆಟಗಳು, ಉತ್ತರಕನ್ನಡ ಜಿಲ್ಲೆಯ ಹವ್ಯಕರ ಕಥೆಗಳು, ಜಾಣೆ ಕನ್ನಡವ ತಿಳಿದ್ಹೇಳೆ, ಜಾನಪದ ಸುಧಾ ಸಂಚಯ, 'ಕಾಗಕ್ಕ ಗುಬ್ಬಕ್ಕ, ಜಾನಪದ ವೈದ್ಯಕೀಯ ಅಡುಗೆಗಳು, ರಂಗೋಲಿ, ಕುಡಿತ ನಿಮಗೆಷ್ಟು ಹಿತ, ದೇವಕಿ ಓದಿದಳು, ಜೀವ ಉಳಿಸುವ ಮರಗಳು, ಸುಕ್ರಿ ಬೊಮ್ಮನಗೌಡ' – ಕೃತಿಗಳನ್ನು ಬರೆದಿದ್ದಾರೆ.
- ಇವರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ, ಜಾನ ಪದ ತಜ್ಞೆ, ಮಲ್ಲಿಕಾ ಪ್ರಶಸ್ತಿ, ಪದ್ಮಭೂಷಣ ಡಾ.ಸರೋಜಾದೇವಿ ಸಾಹಿತ್ಯ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಹಾಗೂ ಹಲವು ಗೌರವಗಳೂ ಲಭಿಸಿವೆ.
- ಪ್ರಸ್ತುತ ಪಾಠವನ್ನು ಇವರ 'ಸುಕ್ರಿ ಬೊಮ್ಮನಗೌಡ' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

**ಟಿಪ್ಪಣಿಗಳು :**

1. **ತಾರ್ಲೆ ಕುಣಿತ** : ಮಳೆ ಬಾರದಿದ್ದಾಗ ಹಾಲಕ್ಕಿ ಒಕ್ಕಲಗಿತ್ತಿಯರು ಮಳೆಗಾಗಿ ದೇವರನ್ನು ಪ್ರಾರ್ಥಿಸುವ ವಿಶಿಷ್ಟ ನರ್ತನ.

**2. ಕುಂಬರಿ ಬೇಸಾಯ** : ಕಾಡು ಕಡಿದು, ನೆಲವನ್ನು ಬೆಂಕಿಯಿಂದ ಸುಟ್ಟು ಬೇಸಾಯ ಮಾಡುವ ಪದ್ಧತಿ. ಕುಂಬರಿ ಬೇಸಾಯದಿಂದಾಗಿ ಕಾಡು ನಾಶವಾಗುತ್ತದೆಯೆಂದು 1885 ರ ಹೊತ್ತಿಗೆ ಬ್ರಿಟೀಷರು ಈ ಪದ್ಧತಿಯನ್ನು ಪ್ರತಿಬಂಧಿಸಿದರು. ಆದರೂ ಸುಕ್ರಿಯ ಇತ್ತೀಚಿನ ಕಾಲಮಾನದವರೆಗೂ ಈ ಬೇಸಾಯ ಜೀವ ಹಿಡಿದುಕೊಂಡಿತ್ತು.

## ಅಭ್ಯಾಸ

**1. ಪದಗಳ ಅರ್ಥ ತಿಳಿಯಿರಿ :**

**ಅಚರ** – ಸ್ಥಿರ; ಅಚಲ.
**ಒಕ್ಕಲ** – ಮನೆತನ; ಬೇಸಾಯ.
**ಗಣಿ** – ಆಶ್ರಯಸ್ಥಾನ
**ಚಣ್ಣಮೊಳೆ** – ಜೋರಾದ ಮಳೆ
**ಪರಂಪರಾಗತ** – ಹಿಂದಿನವರಿಂದ ಬಂದಿರುವ
**ಬಂಜೆತನ** – ಮಕ್ಕಳಾಗದಿರುವುದು
**ಬುಡಕಟ್ಟು** – ಮೂಲ ಜನಾಂಗ
**ಸುಗ್ಗಿ** – ಧಾನ್ಯಗಳ ಕೊಯ್ಲಿನ ಕಾಲ
**ಹಯನಾಗು** – ಸಮೃದ್ಧವಾಗು
**ಹಾಳೆ** – ಗದ್ದೆಯ ಸೀಳು
**ಹೊಟ್ಟೆಪಾಡು** – ಜೀವನೋಪಾಯ
**ಮಕ್ಕಿಕತ್ತಿ** – ಬೆಳೆ ಬೆಳೆದಿರುವ ಎತ್ತರದ ಭೂಮಿ.
**ಅಣಿ** –ಸಿದ್ಧತೆ
**ಗದ್ದೆ** – ಜಮೀನು; ಬೇಸಾಯದ ಭೂಮಿ.
**ಗವಿಯಗಳೆಲ್ಲ** – ಕಾಡಿನ ಜೀವಿಗಳೆಲ್ಲ
**ಚರ** – ಚಲಿಸು
**ಪೂರ್ವಜರು** – ವಂಶದ ಹಿರಿಯರು.
**ಬೆದೆ** – ಬಿತ್ತನೆಗೆ ಹದವಾದ ಕಾಲ.
**ಮುಂಚೂಣಿ** – ಮುಂದಾಳತ್ವ; ನಾಯಕತ್ವ
**ಹನಿಸದೆ** – ಬೀಳದೆ
**ಹಲ್ಗತ್ತಿ** – ಹಲ್ಲುಗಳಿರುವ ಕತ್ತಿ
**ಹೆಕ್ಕಿ** – ಆರಿಸು
**ಹೊಯ್ಯಲೆ** – ಸುರಿಯುವುದು
**ಸವ್ದೆ** – ಉರುವಲು ಕಟ್ಟಿಗೆ

**2. ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಸುಕ್ರಿಯ ತಂದೆ ತಾಯಿಗಳ ಹೆಸರೇನು?
ಸುಕ್ರಿಯ ತಂದೆ ತಾಯಿಗಳ ಹೆಸರು ಸುಬ್ಬ ಮತ್ತು ದೇವಿ.
2. ಸುಕ್ರಿಯ ತಂದೆಯಲ್ಲಿದ್ದ ಜಾನಪದ ಕಲೆಗಳಾವುವು?
ಸುಕ್ರಿಯ ತಂದೆ ಗುಮಟೆ ವಾದ್ಯಗಾರಿಕೆಯನ್ನು, ಸುಗ್ಗಿ ನೃತ್ಯಗಾರಿಕೆಯನ್ನು ಬಲ್ಲವರಾಗಿದ್ದರು.
3. ಲೇಖಕರಿಗೆ ಸುಕ್ರಿ ಪರಿಚಯಿಸಿದ ಉದ್ದದ ಹೆಸರಿನ ಹುಲ್ಲು ಯಾವುದು?
ಲೇಖಕರಿಗೆ ಸುಕ್ರಿ ಪರಿಚಯಿಸಿದ ಉದ್ದದ ಹೆಸರಿನ ಹುಲ್ಲು "ಕಟ್ಟಾಡೇ ಕುಟ್ಟಾಡೆ ಕಟ್ಟಿದ್ರೆ ಚೂಡಾಡೇ".
4. ಸುಕ್ರಿಯವರಿಗೆ ದೊರೆತ ನಾಡಿನ ಅತ್ಯುನ್ನತ ಪ್ರಶಸ್ತಿ ಯಾವುದು?
ಸುಕ್ರಿಯವರಿಗೆ ದೊರೆತ ನಾಡಿನ ಅತ್ಯುನ್ನತ ಪ್ರಶಸ್ತಿ ನಾಡೋಜ ಪ್ರಶಸ್ತಿ.
5. ಸುಕ್ರಿಯವರಲ್ಲಿ ಕಾಣಬರುವ ವಿಶೇಷ ಗುಣ ಯಾವುದು?
ಸುಕ್ರಿಯವರ ಪೂರ್ವಜರು ಕಾಡಿನಲ್ಲಿ ನೆಲೆಸಿ ಪಡೆದ ಅನುಭವವೂ ಪರಂಪರಾಗತವಾಗಿ ಇವರ ಬಳಿಗೆ ಬಂದಿದೆ. ಇದು ಇವರ ವಿಶೇಷ ಗುಣ.
6. ಸುಕ್ರಿ ಯಾವ ಒಕ್ಕಲು ಜನಾಂಗಕ್ಕೆ ಸೇರಿದ ಮಹಿಳೆ?
ಸುಕ್ರಿ ಹಾಲಕ್ಕಿ ಒಕ್ಕಲು ಜನಾಂಗಕ್ಕೆ ಸೇರಿದ ಮಹಿಳೆ.

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಸುಕ್ರಿ ಬಾಲ್ಯದಲ್ಲಿ ಜನಪದ ಆಟಗಳನ್ನು ಹೇಗೆ ಕಲಿತಳು?
ಸುಕ್ರಿ ಚಿಕ್ಕವಳಿರುವಾಗ ತನ್ನ ಕೇರಿಯ ಮಕ್ಕಳ ಜೊತೆಗೆ ಸಗಣಿ ತರಲು ಹೋಗುತ್ತಿದ್ದಳು. ಸಗಣಿ ಹೆಕ್ಕಿ ಸುಸ್ತಾಗದ ಈ ಮಕ್ಕಳು ತಮ್ಮ ಸಗಣಿ ಬುಟ್ಟಿಗಳನ್ನು ಗದ್ದೆ ಬಯಲಿನಲ್ಲಿಟ್ಟು ಗದ್ದೆ ಬಯಲನ್ನೆ ಕ್ರೀಡಾಂಗಣವನ್ನಾಗಿಸಿಕೊಳ್ಳುತ್ತಿದ್ದರು. ಅಟ್ಟೆ ಆಟ; ಕಣ್ಣುಟ್ಟಾಟ; ಹುಳ್ಳಿ ಮಂಡದ ಆಟಗಳಿಗೆ ಈ ಬಯಲುಗಳೇ ಜನಪದ ಆಟಗಳ ತರಬೇತಿ ಶಾಲೆಗಳಾದವು. ಈ ರೀತಿ ಬಾಲ್ಯದಲ್ಲಿಯೇ ಸುಕ್ರಿ ಜನಪದ ಆಟಗಳನ್ನು ಕಲಿತರು.
2. ತಾರ್ಲೆ ಕುಣಿತದ ವಿಶೇಷವೇನು?
ಮಳೆ ಬಾರದಿದ್ದಾಗ ಹಾಲಕ್ಕಿ ಒಕ್ಕಲಗಿತ್ತಿಯರು ಮಳೆಗಾಗಿ ದೇವರನ್ನು ಪ್ರಾರ್ಥಿಸುವ ವಿಶಿಷ್ಟ ನರ್ತನ. ಈ ಹಾಡಿನಲ್ಲಿ ಬೆಳತನಕ ಹಾಡಬಲ್ಲ ಸಾಹಿತ್ಯವಿದೆ. ಜನ ಜೀವನದ ಚಿತ್ರವಿದೆ. ಕೇಳುಗರಿಲ್ಲ ದಾಖಲಿಸುವವರಿಲ್ಲ,
3. ಸುಕ್ರಿಯವರಿಗೆ ಯಾವ ಯಾವ ಸೊಪ್ಪುಗಳ ಜ್ಞಾನವಿದೆ?
ಚಿರಕಲ, ಹಳ್ಚೆರಿ, ಪೆಪೆ, ಸಗಡೆ, ಹಪ್ಸಗಡೆ, ಕುಚುಮಾಲೆ, ಏಕನಾಯಕ, ಅಡಕೋಳಿ ಮುಂತಾದ ಸೊಪ್ಪುಗಳ ಜ್ಞಾನ ಸುಕ್ರಿಯವರಿಗೆ ಇತ್ತು.
4. ಸುಕ್ರಿಯವರು ಪಾಲ್ಗೊಂಡ ಚಳುವಳಿಗಳಾವುವು?

ಸುಕ್ರಿ ರೈತರ ಜೊತೆ ಕಾಲ್ನಡಿಗೆಯಲ್ಲಿಯೇ ಕಾರವಾರಕ್ಕೆ ಹೋಗಿ ಚಳುವಳಿ ನಡೆಸಿದರು. ಸಮಾಜಕ್ಕೆ ಒಳಿತಾಗುವ ಎಲ್ಲ ಚಳುವಳಿಗಳಲ್ಲಿ ಅಗ್ರ ಪಂಕ್ತಿಯಲ್ಲಿ ನಿಂತರು. ಕೋಟೆಬಾವಿ ಚಳುವಳಿ, ಬುಡಕಟ್ಟು ಜಿಲ್ಲಾ ಚಳುವಳಿ, ಸಾಕ್ಷರತಾ ಆಂದೋಲನ, ಮದ್ಯಪಾನ ವಿರೋಧಿ ಚಳುವಳಿಗಳಲ್ಲಿ ಸುಕ್ರಿಯವರ ಕಲಾ ತಂಡ ಪಾಲ್ಗೊಂಡಿರುತ್ತಿತ್ತು.

5. ಸುಕ್ರಿಯವರ ವೇಷಭೂಷಣಗಳು ಹೇಗಿರುತ್ತವೆ?

ಸುಕ್ರಿಯವರು ಕೊರಳ ತುಂಬ ಅಂಕೋಲೆಯ ಪರಂಪರಾಗತ ಶೈಲಿಯಲ್ಲಿ ಮಣಿಸರಗಳನ್ನು ಧರಿಸಿ ಅಲ್ಲಿಯ ಹಾಲಕ್ಕಿ ಒಕ್ಕಲ ಗೇಟ್ಗಿ ಶೈಲಿಯಲ್ಲಿ ಸೀರೆಯುಟ್ಟಿರುತ್ತಾರೆ.

6. ಸುಕ್ರಿಯವರಿಗೆ ದೊರೆತ ಪ್ರಶಸ್ತಿಗಳಾವುವು?

ಸುಕ್ರಿಯವರಿಗೆ ನಾಡಿನ ಬಹುದೊಡ್ಡ ಪ್ರಶಸ್ತಿಗಳಾದ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಜಾನಪದ ಶ್ರೀ ಪ್ರಶಸ್ತಿ ಸುಕ್ರಿಯವರ ಮುಡಿಗೇರಿದವು. ಇವರಿಗೆ ನಾಡಿನ ಅತ್ಯುನ್ನತ ನಾಡೋಜ ಪ್ರಶಸ್ತಿಯು 2007 ರಲ್ಲಿ ದೊರೆತಿದೆ.

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಸುಕ್ರಿಯವರು ಜಾನಪದದ ಗಣಿ ಆದುದು ಹೇಗೆ?

ಸುಕ್ರಿಯ ಅಕ್ಕ ಮತ್ತು ತಾಯಿ ಉತ್ತಮ ಹಾಡುಗಾರರಾಗಿದ್ದರು. ಅಪ್ಪ ಗುಮಟೆ ವಾದ್ಯಗಾರಿಕೆಯನ್ನು ಸುಗ್ಗಿ ನೃತ್ಯಗಾರಿಕೆಯನ್ನು ಬಲ್ಲವರಾಗಿದ್ದರು. ಸುಕ್ರಿಯೂ ಶಾಲೆ ಕಲಿತವಳಲ್ಲ. ಚಿಕ್ಕವಳಿರುವಾಗ ತನ್ನ ಕೇರಿಯ ಮಕ್ಕಳ ಜೊತೆಗೆ ಸಗಣಿ ತರಲು ಹೋಗುತ್ತಿದ್ದಳು. ಸಗಣಿ ಹೆಕ್ಕಿ ಸುಸ್ತಾಗದ ಈ ಮಕ್ಕಳು ತಮ್ಮ ಸಗಣಿ ಬುಟ್ಟಿಗಳನ್ನು ಗದ್ದೆ ಬಯಲಿನಲ್ಲಿಟ್ಟು ಗದ್ದೆ ಬಯಲನ್ನೆ ಕ್ರೀಡಾಂಗಣವನ್ನಾಗಿಸಿಕೊಳ್ಳುತ್ತಿದ್ದರು. ಅಟ್ಟೆ ಆಟ; ಕಣ್ಣುಟ್ಟಾಟ; ಹುಳ್ಕಿ ಮಂಡದ ಆಟಗಳಿಗೆ ಈ ಬಯಲುಗಳೇ ಜನಪದ ಆಟಗಳ ತರಬೇತಿ ಶಾಲೆಗಳಾದವು. ಇಲ್ಲಿಯೇ ಸುಕ್ರಿ ಹೆಣ್ಣುಮಕ್ಕಳ ಜೊತೆ ತಾರ್ಲೆ ಕುಣಿದರು. ಗೊಬ್ಬರಹಾಕಿ ಹಾಳೆ ಕೊಚ್ಚಿ ಹೂಡಿ ಬೀಜಬಿತ್ತಲು ಅಣಿ ಮಾಡಿಕೊಂಡಿರುವಾಗ ಮಳೆರಾಯ ಬೆದೆಬಂದ ಭೂಮಿಗೆ ನೀರು ಹನಿಸದೆ ಮೋಡಗಟ್ಟಿ ಮುನಿಸಿನಲ್ಲಿರುತ್ತಾನೆ. ಆಗ ಮಳೆರಾಯನನ್ನು ಒಲಿಸಿಕೊಳ್ಳಲು ಆಯಾ ಊರಿನ ಹೆಂಗಸರು ಪುರಸೊತ್ತು ಆದ ದಿನ ತಮ್ಮೊಳಗೆ ಮಾತಾಡಿಕೊಂಡು ಕತ್ತಲೆಯಾದ ಬಳಿಕ ಬಯಲಿಗಿಳಿಯುತ್ತಾರೆ; ಹಾಡುತ್ತ ಕುಣಿಯುತ್ತಾರೆ. ಈ ರೀತಿ ಸುಕ್ರಿ ಜಾನಪದ ಗಣಿಯಾದರು.

2. ಸುಕ್ರಿಗೆ ಕಾಡಿನ ಸಸ್ಯಜ್ಞಾನ ಹೇಗೆ ದೊರೆಯಿತು?

ಸುಕ್ರಿ ಪ್ರಾಣಿ, ಪಕ್ಷಿ ಮುಂತಾದ ಚರಜೀವಿಗಳ, ಸಸ್ಯಾದಿ ಅಚರ ಜೀವವೈವಿಧ್ಯದ ಜ್ಞಾನ ನಿಧಿ. ಅಪ್ಪ ಬೆಟ್ಟದಲ್ಲಿರುವ ಒಡೆಯನ ಗದ್ದೆಯನ್ನು ಹೂಡಲು ಹೋಗುತ್ತಿದ್ದಾಗ ತಾಯಿ ಹಾಗೂ ಮನೆಯ ಸದಸ್ಯರು ಕೃಷಿ ಕೆಲಸಕ್ಕೆ ಹೊರಡುತ್ತಿದ್ದರು. ಸುಕ್ರಿ ತನ್ನ ಸುಮಾರು ಹತ್ತನೆಯ ವರ್ಷಕ್ಕೆ ಇವರ ಜೊತೆಗೆ ಕೃಷಿ ಕೆಲಸಕ್ಕೆ ಹೋಗುತ್ತಿದ್ದರು. ಸೊಂಟಕ್ಕೆ ತಾಡಿದ ಚಿಕ್ಕ ಸುಳಿಮುಟ್ಟಿ ; ಈ ಮುಟ್ಟಿಯಲ್ಲೊಂದು ಚಿಕ್ಕ ಹಲ್ಗತ್ತಿ ಇವರ ಜೊತೆಯಲ್ಲಿರುತ್ತಿತ್ತು. ಬೆಟ್ಟದಲ್ಲಿ ನಡೆಯುವಾಗ, ಹಾದಿಯ ಇಕ್ಕೆಲಗಳಲ್ಲಿಯ ಮರಗಿಡಗಳು ಇವರಿಗೆ ಆಪ್ತವಾದವು. ಚಿರಕಲ, ಹಳ್ಚೆರಿ, ಪೆಪೆ, ಸಗಡೆ, ಹಪ್ಸಗಡೆ, ಕುಚುಮಾಲೆ, ಏಕನಾಯಕ, ಅಡಕೋಳಿ ಮುಂತಾದ ಸೊಪ್ಪುಗಳ ಜ್ಞಾನ ಇವರಿಗಾಯಿತು. ದೊಡ್ಡವರಾದ ಮೇಲೆ ಸೌದೆ ತರುವ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಆಗ ಮರಮುಟ್ಟುಗಳ ಇನ್ನಷ್ಟು ಜ್ಞಾನ ಇವರ ಮಡಿಲು ತುಂಬಿದವು. ಸುಕ್ರಿಯವರ ಜೊತೆ ಕಾಡಿನಲ್ಲಿ ನಡೆಯುವುದೊಂದು ಅಪೂರ್ವ ಅನುಭವ. ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಔಷಧಶಾಸ್ತ್ರ ಮುಂತಾದ ಜನಪದ ಶಾಸ್ತ್ರಗಳ ಭಂಡಾರವೇ ನಮ್ಮ ಜೊತೆ ನಡೆಯುತ್ತಿದ್ದಂತೆ ಅನಿಸುತ್ತದೆ. ಸುಕ್ರಿ ಪ್ರತಿ ಗಿಡಕ್ಕೂ ತನ್ನ ಪರಿಸರದ ಕನ್ನಡ ಜನಪದ ಹೆಸರುಗಳನ್ನು ಹೇಳುತ್ತ ಆಯಾ ಸಸ್ಯಗಳನ್ನು ತೋರಿಸುತ್ತ ಸಾಗುತ್ತಾರೆ. ಇವರ ಈ ಸಸ್ಯ ಜ್ಞಾನ ನಿಧಿಯನ್ನು ಅಕ್ಷರಕ್ಕಿಳಿಸಿದರೆ ಹಲವು ಗ್ರಂಥಗಳು ಸಿದ್ಧವಾಗಬಹುದು.

3. ಸುಕ್ರಿ ಬೊಮ್ಮನಗೌಡ ಸಾಮಾಜಿಕ ಕಳಕಳಿ ಹೊಂದಿರುವ ಮಹಿಳೆ ಎಂಬುದನ್ನು ಹೇಗೆ ಹೇಳಬಹುದು?

ಸುಕ್ರಿ ರೈತರ ಜೊತೆ ಕಾಲ್ನಡಿಗೆಯಲ್ಲಿಯೇ ಕಾರವಾರಕ್ಕೆ ಹೋಗಿ ಚಳುವಳಿ ನಡೆಸಿದರು. ಸಮಾಜಕ್ಕೆ ಒಳಿತಾಗುವ ಎಲ್ಲ ಚಳುವಳಿಗಳಲ್ಲಿ ಅಗ್ರ ಪಂಕ್ತಿಯಲ್ಲಿ ನಿಂತರು. ಕೋಟೆಬಾವಿ ಚಳುವಳಿ, ಬುಡಕಟ್ಟು ಜಿಲ್ಲಾ ಚಳುವಳಿ, ಸಾಕ್ಷರತಾ ಆಂದೋಲನ, ಮದ್ಯಪಾನ ವಿರೋಧಿ ಚಳುವಳಿಗಳಲ್ಲಿ ಸುಕ್ರಿಯವರ ಕಲಾ ತಂಡ ಪಾಲ್ಗೊಂಡಿರುತ್ತಿತ್ತು. ಓದು-ಬರಹ ಅರಿಯದವರಾದರೂ ಸಾಮಾಜಿಕ ಕೆಡಕು ಯಾವುದು, ಒಳಿತು ಯಾವುದು ಎಂಬುದರ ಅರಿವುಳ್ಳವರು. ಸಮಾಜಕ್ಕೆ ಒಳಿತಾಗುವ ಚಳುವಳಿಗಳಲ್ಲಿ ಭಾಗವಹಿಸಿ ಜೊತೆಯ ಹೋರಾಟಗಾರರಿಗೆ ಪ್ರೋತ್ಸಾಹ ನೀಡುವಲ್ಲಿ ಸುಕ್ರಿಯದು ಎತ್ತಿದ ಕೈ. ಇವರು ಕೊರಳ ತುಂಬ ಅಂಕೋಲೆಯ ಪರಂಪರಾಗತ ಶೈಲಿಯಲ್ಲಿ ಮಣಿಸರಗಳನ್ನು ಧರಿಸಿ ಅಲ್ಲಿಯ ಹಾಲಕ್ಕಿ ಒಕ್ಕಲ ಗೇಟ್ಗಿ ಶೈಲಿಯಲ್ಲಿ ಸೀರೆಯುಟ್ಟು ಮುಂಚೂಣಿಯಲ್ಲಿದ್ದಾರೆಂದರೆ ಚಳುವಳಿಕಾರರಿಗೆ ಆನೆಬಲ ಬರುತ್ತದೆ.

**ಈ) ಸಂದರ್ಭದೊಡನೆ ವಿವರಿಸಿರಿ.**

1. ಈ ಬಯಲುಗಳೇ ಜನಪದ ಆಟಗಳ ತರಬೇತಿ ಶಾಲೆಗಳಾದವು.

ಈ ವಾಕ್ಯವನ್ನು **ಶಾಂತಿ ನಾಯಕ** ಅವರು ಬರೆದಿರುವ **ಸುಕ್ರಿ ಬೊಮ್ಮನ ಗೌಡ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಲೇಖಕಿಯವರು ಸುಕ್ರಿಯ ಬಾಲ್ಯದ ಬಗ್ಗೆ ತಿಳಿಸುತ್ತಾ ಹೇಳಿದ್ದಾರೆ. ಸುಕ್ರಿಯೂ ಶಾಲೆ ಕಲಿತವಳಲ್ಲ. ಚಿಕ್ಕವಳಿರುವಾಗ ತನ್ನ ಕೇರಿಯ ಮಕ್ಕಳ ಜೊತೆಗೆ ಸಗಣಿ ತರಲು ಹೋಗುತ್ತಿದ್ದಳು. ಸಗಣಿ ಹೆಕ್ಕಿ ಸುಸ್ತಾಗದ ಈ ಮಕ್ಕಳು ತಮ್ಮ ಸಗಣಿ ಬುಟ್ಟಿಗಳನ್ನು ಗದ್ದೆ ಬಯಲಿನಲ್ಲಿಟ್ಟು ಗದ್ದೆ ಬಯಲನ್ನೆ ಕ್ರೀಡಾಂಗಣವನ್ನಾಗಿಸಿಕೊಳ್ಳುತ್ತಿದ್ದರು. ಅಟ್ಟೆ ಆಟ; ಕಣ್ಣಟ್ಟಾಟ; ಹುಳ್ಳಿ ಮಂಡದ ಆಟಗಳಿಗೆ ಈ ಬಯಲುಗಳೇ ಜನಪದ ಆಟಗಳ ತರಬೇತಿ ಶಾಲೆಗಳಾದವು ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

2. ಜನಪದ ಶಾಸ್ತ್ರಗಳ ಭಂಡಾರವೇ ನಮ್ಮ ಜೊತೆ ನಡೆಯುತ್ತಿದ್ದಂತೆ ಅನಿಸುತ್ತದೆ.

ಈ ವಾಕ್ಯವನ್ನು **ಶಾಂತಿ ನಾಯಕ** ಅವರು ಬರೆದಿರುವ **ಸುಕ್ರಿ ಬೊಮ್ಮನ ಗೌಡ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ. ಈ ಮಾತನ್ನು ಲೇಖಕಿಯವರು ಹೇಳಿದ್ದಾರೆ. ಸುಕ್ರಿಯವರೊಡನೆ ಲೇಖಕಿಯವರು ಕಾಡಿನಲ್ಲಿ ಹೆಜ್ಜೆ ಹಾಕುತ್ತಿರುವಾಗ ಸುಕ್ರಿಯವರು ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಔಷಧಶಾಸ್ತ್ರ ಮುಂತಾದವುಗಳ ಬಗ್ಗೆ ಅವರಿಗಿದ್ದ ಜ್ಞಾನ ಕಂಡು ಲೇಖಕಿಯವರು ಈ ಮೇಲಿನ ಮಾತನ್ನು ಹೇಳಿದ್ದಾರೆ.

3. 'ಕಟ್ಟಾಡೆ ಕುಟ್ಟಾಡೆ ಕಟ್ಟಿದ್ರೆ ಚೂಡಾಡೆ'

ಈ ವಾಕ್ಯವನ್ನು **ಶಾಂತಿ ನಾಯಕ** ಅವರು ಬರೆದಿರುವ **ಸುಕ್ರಿ ಬೊಮ್ಮನ ಗೌಡ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ. ಈ ಮಾತನ್ನು ಲೇಖಕಿಯವರು ಹೇಳಿದ್ದಾರೆ. ಸುಕ್ರಿಯವರು ಸಾಮಾನ್ಯ ಹುಲ್ಲುಕಡ್ಡಿಗಳ ಬಗ್ಗೆಯೂ ಚೆನ್ನಾಗಿ ಬಲ್ಲರು. ಒಮ್ಮೆ ನನ್ನ ಜೊತೆ ಬಯಲಿನಲಿ ನಡೆಯುತ್ತಿದ್ದಾಗ ಸುಕ್ರಿ ಒಂದು ಜಾತಿಯ ಹುಲ್ಲಿನ ಉದ್ದದೇಟಿನ ಹತ್ತಾರು ಹೂ ತೆನೆಗಳನ್ನು ಕೊಯ್ದುಕೊಂಡು **'ಕಟ್ಟಾಡೆ ಕುಟ್ಟಾಡೆ ಕಟ್ಟಿದ್ರೆ ಚೂಡಾಡೆ'** ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

4. ಚಳುವಳಿಗಾರರಿಗೆ ಆನೆಬಲ ಬರುತ್ತದೆ.

ಈ ವಾಕ್ಯವನ್ನು **ಶಾಂತಿ ನಾಯಕ** ಅವರು ಬರೆದಿರುವ **ಸುಕ್ರಿ ಬೊಮ್ಮನ ಗೌಡ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ. ಈ ಮಾತನ್ನು ಲೇಖಕಿಯವರು ಹೇಳಿದ್ದಾರೆ. ಸಮಾಜಕ್ಕೆ ಒಳಿತಾಗುವ ಚಳುವಳಿಗಳಲ್ಲಿ ಭಾಗವಹಿಸಿ ಜೊತೆಯ ಹೋರಾಟಗಾರರಿಗೆ ಪ್ರೋತ್ಸಾಹ ನೀಡುವಲ್ಲಿ ಸುಕ್ರಿಯದು ಎತ್ತಿದ ಕೈ. ಸುಕ್ರಿಯವರು ಚಳುವಳಿಗೆ ಮುಂಚೂಣಿಯಲ್ಲಿದ್ದಾರೆಂದರೆ ಚಳುವಳಿಕಾರರಿಗೆ ಆನೆಬಲ ಬರುತ್ತದೆ ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

**3. ಭಾಷಾಭ್ಯಾಸ :**

**ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

ಸುಸ್ತಾಗದ = ಸುಸ್ತು + ಆಗದ, ಕ್ರೀಡಾಂಗಣ = ಕ್ರೀಡಾ + ಅಂಗಣ, ಹಲ್ಗತ್ತಿ = ಹಲ್ಲು + ಕತ್ತಿ,
ಕಣ್ಣಟ್ಟಾಟ = ಕಣ್ಣಟ್ಟು + ಆಟ, ಕಾಲ್ನಡಿಗೆ = ಕಾಲು + ನಡಿಗೆ, ಅತ್ಯುನ್ನತ = ಅತಿ + ಉನ್ನತ.

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.**

ಚರ x ಸ್ಥಿರ, ಜ್ಞಾನ x ಅಜ್ಞಾನ, ಕೆಡಕು x ಒಳಿತು, ಸನ್ಮಾನ x ಅವಮಾನ.

**ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

1. ಹೊಟ್ಟೆಪಾಡು : ಭಿಕ್ಷುಕರು ಹೊಟ್ಟೆಪಾಡಿಗಾಗಿ ಭಿಕ್ಷೆ ಬೇಡುತ್ತಾರೆ.
2. ಆಪ್ತವಾಗು : ನನಗೆ ಆಪ್ತವಾದ ಸ್ನೇಹಿತರಿದ್ದಾರೆ.
3. ಅಪೂರ್ವ ಅನುಭವ: ನಾನು ಶಾಲಾ ಶೈಕ್ಷಣಿಕ ಪ್ರವಾಸ ಹೋದಾಗ ಅಪೂರ್ವ ಅನುಭವ ಆಯಿತು.
4. ಜ್ಞಾನ ನಿಧಿ : ಸುಕ್ರಿ ಬೊಮ್ಮನಗೌಡರವರು ಅಪಾರ ಸಸ್ಯ ಜ್ಞಾನನಿಧಿ ಹೊಂದಿದ್ದರು.
5. ಪರಂಪರಾಗತ : ನಾವು ನಮ್ಮ ಮನೆಯಲ್ಲಿ ಆಚರಿಸುವ ಸಂಪ್ರದಾಯಗಳು ಪರಂಪರಾಗತವಾಗಿ ಬಂದಿವೆ.
5. ಆನೆಬಲ : ಭೀಮನಿಗೆ ಆನೆಯ ಬಲವಿತ್ತು.

**ಈ) ಕೆಳಗಿನ ಪದಗಳಿಗೆ ತತ್ಸಮ-ತದ್ಭವಗಳನ್ನು ಬರೆಯಿರಿ.**

ಸಾಲೆ – ಶಾಲೆ, ಜ್ಞಾನ – ಜಾನ, ಅಕ್ಷರ – ಅಕ್ಕರ, ಮುಖ – ಮೊಗ, ಪಕ್ಷಿ – ಹಕ್ಕಿ.

**ಉ) ಕೆಳಗಿನ ಮಾದರಿಯಂತೆ ಹತ್ತು ಪದಗಳನ್ನು ಬರೆಯಿರಿ.**

**ಮಾದರಿ :** ಹಾಡು + ಗಾರ = ಹಾಡುಗಾರ

| | |
|---|---|
| 1. ನೃತ್ಯ + ಗಾರ = ನೃತ್ಯಗಾರ | 6. ಬಳೆ + ಗಾರ = ಬಳೆಗಾರ |
| 2. ಮೋಜು + ಗಾರ = ಮೋಜುಗಾರ | 7. ಸೊಗಸು + ಗಾರ = ಸೊಗಸುಗಾರ |
| 3. ಮಾಟ + ಗಾರ = ಮಾಟಗಾರ | 8. ಜೂಜು + ಗಾರ = ಜೂಜುಗಾರ |
| 4. ಮೋಸ + ಗಾರ = ಮೋಸಗಾರ | 9. ಕನಸು + ಗಾರ = ಕನಸುಗಾರ |
| 5. ಆಟ + ಗಾರ = ಆಟಗಾರ | 10. ಮೀನು + ಗಾರ = ಮೀನುಗಾರ |

**4. ಸೈದ್ಧಾಂತಿಕ ವ್ಯಾಕರಣ :**

**ನಾಮಪದದ ವಿಧಗಳು:**

**1)ವಸ್ತುವಾಚಕ ಅಥವಾ ನಾಮವಾಚಕ:** ಯಾವುದೇ ವಸ್ತು, ವ್ಯಕ್ತಿ, ಪ್ರಾಣಿ, ಹಾಗೂ ಸ್ಥಳಗಳಿಗೆ ಇರುವ ಹೆಸರುಗಳು

ಎ) **ರೂಢನಾಮ** -- ಅನಾದಿಕಾಲದಿಂದ ರೂಢಿಯಾಗಿ ಬಂದಿರುವ ಸಾಮಾನ್ಯ ಹೆಸರುಗಳು

**ಉದಾ:** ಹೆಂಗಸು, ಗಂಡಸು, ಹುಡುಗ, ಹುಡುಗಿ, ಮಕ್ಕಳು, ಜನರು, ನದಿ, ಬೆಟ್ಟ, ಸಮುದ್ರ, ಕೆರೆ, ಹಳ್ಳ, ಹಳ್ಳಿ, ಗಿಡ, ಮರ, ಹೊಳೆ, ಮುದುಕ, ಮುದುಕಿ, ಹೆಣ್ಣು ಎಲೆ, ಅಡಿಕೆ, ಹಸು ಎಮ್ಮೆ ಬಳ್ಳಿ ಇತ್ಯಾದಿ

ಬಿ) **ಅಂಕಿತನಾಮ** -- ವ್ಯವಹಾರಕ್ಕಾಗಿ ಇಟ್ಟುಕೊಂಡಿರುವ ಹೆಸರುಗಳು

**ಉದಾ:** ಗಣೇಶ, ಕಾವೇರಿ, ಗಂಗಾ, ಬೆಂಗಳೂರು, ಧಾರವಾಡ, ಬೆಳಗಾವಿ, ಕರ್ನಾಟಕ ಇತ್ಯಾದಿ

ಸಿ) **ಅನ್ವರ್ಥನಾಮ:** ವಸ್ತುವಿನ ರೂಪ ಹಾಗೂ ವ್ಯಕ್ತಿಯ ಗುಣಲಕ್ಷಣಗಳನ್ನು ಆಧರಿಸಿ ಅರ್ಥಕ್ಕೆ ಅನುಸಾರ ನೀಡುವ ಹೆಸರುಗಳು

**ಉದಾ:** ಜಾಣ, ಕವಿ, ಕುರುಡ, ಮೂಗ, ಕಿವುಡ, ದಡ್ಡ, ಸಾಧು, ಜಿಪುಣ, ಚಾಲಕ ಇತ್ಯಾದಿ

**2)ಗುಣವಾಚಕ:** ಗುಣ ಸ್ವಭಾವಗಳನ್ನು ತಿಳಿಸುವುದು ಗುಣವಾಚಕ

| ಉದಾ: ವಿಶೇಷಣ | ವಿಶೇಷ್ಯ |
|---|---|
| ಸಿಹಿ | ಹಣ್ಣು |
| ದೊಡ್ಡ | ನದಿ |
| ಒಳ್ಳೆಯ | ಹುಡುಗಿ |

**3)ಸಂಖ್ಯಾವಾಚಕ:** ಸಂಖ್ಯೆಯನ್ನು ಹೇಳುವುದು ಸಂಖ್ಯಾವಾಚಕ

ಉದಾ: ಎರಡು, ಮೂರು, ಐದು, ಹತು,ಸಾವಿರ, ಲಕ್ಷ, ಕೋಟಿ- ಇತ್ಯಾದಿ

**4)ಸಂಖ್ಯೇಯವಾಚಕ:** ಇಬ್ಬರು, ಎರಡನೆಯ, ಮೂವರು, ಮೂರನೆಯ, ಮೂರರಿಂದ, ಐವರು, ಐದನೆಯ

**5)ಭಾವನಾಮ** :- ವಸ್ತುಗಳ ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಶಬ್ದ

ಉದಾ: ಬಿಳಿಯದರ ಭಾವ -ಬಿಳುಪು, ಕರಿಯದರ ಭಾವ -- ಕಪ್ಪು

ಆಡುವುದರ ಭಾವ -ಆಟ, ನೋಡುವುದರ ಭಾವ -ನೋಟ

**6)ಪರಿಮಾಣ ವಾಚಕ** :- ವಸ್ತುಗಳ ಸಾಮಾನ್ಯ ಅಳತೆ, ಪರಿಮಾಣ ಗಾತ್ರಗಳನ್ನು ಹೇಳುವುದು

ಉದಾ: ಪರಿಮಾಣ - ಹಲವು, ಕೆಲವು. ಗಾತ್ರ - ಅಷ್ಟು, ಇಷ್ಟು. ಅಳತೆ - ಅಷ್ಟು, ಇಷ್ಟು.

**7)ಪ್ರಕಾರ ವಾಚಕ** :- ವಸ್ತುಗಳ ಸ್ಥಿತಿ ಅಥವಾ ರೀತಿಗಳನ್ನು ತಿಳಿಸುವ ಶಬ್ದ

ಉದಾ: ಅಂಥ, ಅಂಥದು, ಅಂತಹುದು, ಇಂಥ, ಇಂಥದು, ಎಂತಹ, ಅಂಥವನು - ಇತ್ಯಾದಿ

**8)ದಿಗ್ವಾಚಕಗಳು** :- ದಿಕ್ಕುಗಳ ಹೆಸರನ್ನು ಸೂಚಿಸುವ ಶಬ್ದಗಳು

ಉದಾ: ಮೂಡಣ, ಪಡುವಣ, ತೆಂಕಣ, ಬಡಗಣ, ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಆಗ್ನೇಯ, ಈಶಾನ್ಯ, ಆಚೆ, ಈಚೆ.

**9)ಸರ್ವನಾಮ** : ನಾಮ ಪದಗಳ ಬದಲಾಗಿ ಬಳಸುವ ಪದ

ಉದಾ: ಅವನು, ಅವಳು, ಅದು, ಇದು, ಅವರು, ಇವರು, ಇವುಗಳಿಂದ, ಅದಕ್ಕೆ - ಇತ್ಯಾದಿ

**ವಿಭಕ್ತಿ ಪ್ರತ್ಯಯಗಳು** :

ನಾಮ ಪ್ರಕೃತಿ ಅಥವಾ ಸರ್ವನಾಮಗಳನ್ನು ಬೇರೊಂದು ಪದದೊಡನೆ ಜೋಡಿಸುವಾಗ ಬಳಸುವ ಪ್ರತ್ಯಯಗಳು.

| **ವಿಭಕಿ** | **ನಾಮಪ್ರಕೃತಿ** | **ಪ್ರತ್ಯಯ** | **ನಾಮಪದ** |
|---|---|---|---|
| ಪ್ರಥಮಾ | ಮರ | ಉ | ಮರವು |
| ದ್ವಿತೀಯಾ | ಮರ | ಅನ್ನು | ಮರವನ್ನು |
| ತೃತೀಯಾ | ಮರ | ಇಂದ | ಮರದಿಂದ |
| ಚತುರ್ಥಿ | ಮರ | ಗೆ, ಕೆ, ಇಗೆ, ಅಕ್ಕೆ | ಮರಕ್ಕೆ |
| ಪಂಚಮಿ | ಮರ | ದೆಸೆಯಿಂದ | ಮರದ ದೆಸೆಯಿಂದ |

| | | | |
|---|---|---|---|
| ಷಷ್ಠಿ | ಮರ | ಅ | ಮರದ |
| ಸಪ್ತಮಿ | ಮರ | ಅಲ್ಲಿ | ಮರದಲ್ಲಿ |
| ಸಂಬೋಧನಾ | ಮರ | ಏ, ಓ, ಇರಾ, ಈ | ಮರವೇ, ಮರಗಳಿರಾ |

## 5. ಬ್ಲಡ್ ಗ್ರೂಪ್ – ವಿಜಯಮಾಲಾ ರಂಗನಾಥ್

**ಕೃತಿಕಾರರ ಪರಿಚಯ :**

- **ಡಾ. ವಿಜಯಮಾಲಾ ರಂಗನಾಥ್** ಅವರು ತುಮಕೂರು ಜಿಲ್ಲೆಯ ಶಿರಾದಲ್ಲಿ 1955 ರಲ್ಲಿ ಜನಿಸಿದರು.
- ಇವರ ಚಂದ್ರಮ ಜೊಲ್ಲು ಸುರಿಸ್ಯಾನ, ಋತುಮಾನ, ಬೆಳಕಿನೆಡೆಗೆ, ನಗೆ ನವಿಲ ಜಾಗರ, ಕ್ಷಣಕ್ಷಣದ ಕಥೆಗಳು, ನಗೆ ನರ್ತನ – ಇನ್ನು ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಇವರಿಗೆ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿ ಲಭಿಸಿದೆ.

**ಟಿಪ್ಪಣಿಗಳು :**

1. **ಬ್ಲಡ್ ಗ್ರೂಪ್**: ಇದು ಇಂಗ್ಲೀಷ್ ಭಾಷೆಯ ಪದ. ಅಂದರೆ, ರಕ್ತದ ಗುಂಪು. ಮಾನವನ ದೇಹದಲ್ಲಿರುವ ಕೆಂಪು ರಕ್ತ ಕಣಗಳು 20 ಬಗೆಯಲ್ಲಿದ್ದು ಅವುಗಳನ್ನು ಮುಖ್ಯವಾಗಿ ಎ, ಬಿ, ಎಬಿ, ಹಾಗೂ ಓ ಎಂಬುದಾಗಿ ಗುಂಪುಗಳನ್ನು ಮಾಡಿದ್ದಾರೆ. ಪ್ರತಿಯೊಬ್ಬರೂ ರಕ್ತ ಪರೀಕ್ಷೆಯ ಮೂಲಕ ಬ್ಲಡ್ ಗ್ರೂಪ್ ತಿಳಿದಿದ್ದರೆ ಅಗತ್ಯ ಸಂದರ್ಭಗಳಲ್ಲಿ ತುರ್ತು ಸೇವೆ ನೀಡಲು ಸಹಾಯಕವಾಗುತ್ತದೆ.

2. **ರಕ್ತನಿಧಿ**: ರಕ್ತ ಸಂಗ್ರಹ ಕೇಂದ್ರ, ಇಲ್ಲಿ ವೈಜ್ಞಾನಿಕ ರೀತಿಯಲ್ಲಿ ರಕ್ತವನ್ನು ಕೆಡದಂತೆ ಇಡಲಾಗುತ್ತದೆ. ತುರ್ತು ಸಂದರ್ಭಗಳಲ್ಲಿ ರಕ್ತವನ್ನು ಯಾರು ಬೇಕಾದರೂ ಹಣ ನೀಡಿ ಪಡೆಯಬಹುದು.

### ಅಭ್ಯಾಸ

**I. ಪದಗಳ ಅರ್ಥ ತಿಳಿಯಿರಿ :**

**ಆಳು** – ಸೇವಕ
**ಕೃತಜ್ಞತೆ** – ಉಪಕಾರ ಸ್ಮರಣೆ
**ಧಾವಿಸು** – ಓಡಿ ಬರುವುದು
**ಪೆಚ್ಚಾಗು** – ತಬ್ಬಿಬ್ಬಾಗು; ಕಂಗಾಲಾಗು.
**ಬುದ್ಧಿ** – ಗೌರವ ಸೂಚಕ ಪದ
**ಮಡಿ** – ನೈರ್ಮಲ್ಯ; ಶುಭ್ರ.
**ಶಾನೆ** – ಹೆಚ್ಚು; ಬಹಳ.
**ಕಂಗಾಲು** – ದಿಕ್ಕುತೋಚದಂತಾಗು; ಗಾಬರಿಯಾಗು.
**ದಂಗಾಗು** – ಆಶ್ಚರ್ಯಪಡು
**ನಿಟ್ಟುಸಿರುಬಿಡು** – ದೀರ್ಘವಾಗಿ ಬಿಡುವ ಉಸಿರು.
**ಬಡಕಲು** – ದುರ್ಬಲವಾದ
**ಮಂಕ** – ದಡ್ಡ; ಹೆಡ್ಡ; ತಿಳಿಗೇಡಿ.
**ಮಾಮೂಲು** – ಪರಿಪಾಠ; ರೂಢಿ; ದಿನನಿತ್ಯದ್ದು.
**ಶ್ರೋತ್ರಿ** – ವೇದಾಭ್ಯಾಸ ಮಾಡಿದ ಬ್ರಾಹ್ಮಣ; ವೈದಿಕ.

**2. ಪ್ರಶ್ನೆಗಳು :**
**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**
1. ವೀಣಾಳ ತಾಯಿಗೆ ಅಗತ್ಯವಾಗಿ ಬೇಕಾಗಿದ್ದ ಬ್ಲಡ್ ಗ್ರೂಪ್ ಯಾವುದು?
ವೀಣಾಳ ತಾಯಿಗೆ ಅಗತ್ಯವಾಗಿ ಬೇಕಾಗಿದ್ದ ಬ್ಲಡ್ ಗ್ರೂಪ್ 'ಓ' ನೆಗೆಟಿವ್.
2. ಡಾಕ್ಟರ್ ವೀಣಾಳ ರಕ್ತ ತೆಗೆದುಕೊಳ್ಳಲು ಏಕೆ ನಿರಾಕರಿಸಿದರು?
ಡಾಕ್ಟರ್‌ರವರು ವೀಣಾಳ ಬಡಕಲು ಶರೀರ ನೋಡಿ "ನಿನ್ನಿಂದ ಬ್ಲಡ್ ತೊಗೊಳ್ಳೋಕ್ಕಾಗೋಲ್ಲ ಎಂದು ನಿರಾಕರಿಸಿದರು.
3. ವೀಣಾಳ ತಂದೆ ತಾಯಿಯ ಹೆಸರೇನು?
ವೀಣಾಳ ತಂದೆ ಶ್ರೀನಿವಾಸ ರಾಘವಾಚಾರ್ಯರು ಶ್ರೋತ್ರಿಯರು, ತಾಯಿ ಆಂಡಾಳಮ್ಮ.
4. ವೀಣಾಳ ಟೆನ್ಷನ್ ಯಾವಾಗ ಕಡಿಮೆಯಾಯಿತು?
ಯಾಕೆ ಇಷ್ಟು ಟೆನ್ಷನ್‌ನಲ್ಲಿದ್ದೀಯಾ? ಬ್ಲಡ್ ಅರೇಂಜ್ ಆಯ್ತು ಬಿಡಮ್ಮಾ' ಎಂದಾಗ ವೀಣಾಳ ಟೆನ್ಷನ್ ಕಡಿಮೆಯಾಯಿತು.
5.ಜನರು ರಾಘವಾಚಾರ್ಯರನ್ನು ಏನೆಂದು ಕರೆಯುತ್ತಿದ್ದರು?
ಜನರು ರಾಘವಾಚಾರ್ಯರನ್ನು ವೇದಬ್ರಹ್ಮ ಎಂದು ಕರೆಯುತ್ತಿದ್ದರು.

6.ಆಂಡಾಳಮ್ಮ ಆಸ್ಪತ್ರೆ ಸೇರಿದಾಗ ರಾಘವಾಚಾರ್ಯರು ಮನೆಯಲ್ಲಿರಲಿಲ್ಲ ಏಕೆ?
ಆಂಡಾಳಮ್ಮ ಆಸ್ಪತ್ರೆ ಸೇರಿದಾಗ ರಾಘವಾಚಾರ್ಯರು ಯಾವುದೋ ಕಾರ್ಯಕ್ರಮಕ್ಕೆ ಬಾಂಬೆಗೆ ತೆರಳಿದ್ದರು.
7.ಬ್ಲಡ್ ಗ್ರೂಪ್ – ಕತೆಯಲ್ಲಿ ಬಿಂಬಿತವಾಗಿರುವ ಮೌಲ್ಯ ಯಾವುದು?
ಬ್ಲಡ್ ಗ್ರೂಪ್ – ಕತೆಯಲ್ಲಿ ಬಿಂಬಿತವಾಗಿರುವ ಮೌಲ್ಯ ಮನುಷ್ಯತ್ವ.

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**
1. ರಾಘವಾಚಾರ್ಯರ ವೇಷಭೂಷಣಗಳು ಹೇಗಿದ್ದವು?
ಹಣೆಯಲ್ಲಿ ತಿರುನಾಮ, ಮೇಲುಕೋಟೆ ಕಚ್ಚೆಪಂಚೆ, ಜುಟ್ಟು, ಮಹಾರಾಜರು ಹೊದಿಸಿದ ಶಾಲು. ಇವರ ಮಾಮೂಲು ಉಡುಪು. ಎರಡೂ ಕೈಯಲ್ಲಿ ಒಟ್ಟು ಎಂಟು ಉಂಗುರಗಳು. ಕತ್ತಿನಲ್ಲಿ ಹುಲಿ ಉಗುರಿನ ಪದಕದ ಸರ, ಕಿವಿಗೆ ಒಂಟಿ ಧರಿಸಿರುವುದು ರಾಘವಾಚಾರ್ಯರ ವೇಷಭೂಷಣಗಳಾಗಿವೆ.
2. ಜನರು ರಾಘವಾಚಾರ್ಯರನ್ನು ವೇದಬ್ರಹ್ಮ ಎಂದು ಏಕೆ ಕರೆಯುತ್ತಿದ್ದರು?
ಸಂಸ್ಕೃತ ವಿದ್ವಾಂಸ ರಾಘವಾಚಾರ್ಯರಿಗೆ ಶ್ರಾವಣಮಾಸ ಬಂತೆಂದರೆ ಬಿಡುವಿಲ್ಲದಷ್ಟು ಉಪನ್ಯಾಸಗಳು. ಅವರನ್ನು ಕಂಡವರೆಲ್ಲಾ ದೇವರನ್ನು ಕಂಡಂತೆ ಶಿರಬಾಗಿ ನಮಸ್ಕರಿಸುತ್ತಾರೆ. ಮಡಿವಂತಿಕೆಯ ಸಂಪ್ರದಾಯ ರಕ್ತಗತವಾಗಿ ಬಂದಿದೆ. ಆದ್ದರಿಂದ ಜನರು ಅವರ ಹೆಸರಿನ ಮುಂದೆ ವೇದಬ್ರಹ್ಮ ಎಂದು ಸೇರಿಸಿ ಕರೆಯುತ್ತಾರೆ.
3. ಆಂಡಾಳಮ್ಮ ಆಸ್ಪತ್ರೆ ಸೇರಿದ್ದು ಏಕೆ?
ಪ್ರತಿದಿನ ಅರ್ಧಗಂಟೆ ವಾಕ್ ಮಾಡಬೇಕೆಂದು ಆಂಡಾಳಮ್ಮನಿಗೆ ಡಾಕ್ಟರರು ಸಲಹೆ ನೀಡಿದರು. ಅದರಂತೆ ಹೋಗುವಾಗ ಹಿಂದಿನಿಂದ ಬಂದ ಹಸು ಅವರನ್ನು ಬೀಳಿಸಿತು. ಆಂಡಾಳಮ್ಮ ಮುಂದುಗಡೆ ಇದ್ದ ಚೂಪಾದ ಕಲ್ಲಿನ ಮೇಲೆ ಬಿದ್ದರು. ರಕ್ತಸ್ರಾವವಾಗಿ ಎಚ್ಚರ ತಪ್ಪಿದರು. ಹಾಗಾಗಿ ಆಂಡಾಳಮ್ಮ ಆಸ್ಪತ್ರೆ ಸೇರಿದರು.
4. ಸಿದ್ಲಿಂಗು ರಕ್ತ ನೀಡಲು ಅಳುಕಿದ್ದು ಏಕೆ?
ಸಿದ್ಲಿಂಗು ಅವರ ಮನೇಲಿ ಇರೋ ಆಳು. ಆಚಾರ್ಯರು ಶಾನೆ ದೊಡ್ಡಾವ್ರು, ತುಂಬಾ ಮಡಿ ಮಾಡೋವ್ರು, ಅದರೆ ಸಿದ್ಲಿಂಗು ಮಂಕ ಬುದ್ಧಿ ಇರೋನು. ಅಲ್ದೆ ಅವನು ಮಾಂಸ ತಿನ್ನೋನು. ಅದಕ್ಕಾಗು ಅವನು ರಕ್ತ ನೀಡಲು ಅಳುಕಿದನು.
5.ರಕ್ತ ನೀಡಲು ಅಳುಕಿದ್ದ ಸಿದ್ಲಿಂಗುವಿಗೆ ಡಾಕ್ಟರ್ ಹೇಳಿದ್ದೇನು?
ರಕ್ತ ನೀಡಲು ಅಳುಕಿದ್ದ ಸಿದ್ಲಿಂಗುವಿಗೆ ಡಾಕ್ಟರ್ ಈ ರೀತಿ ಹೇಳಿದರು. "ನೋಡಪ್ಪಾ, ಬದುಕಿಸೋಕ್ಕೆ ಬೇಕಾಗಿರೋದು ರಕ್ತ. ಇಲ್ಲಿ ನಿನ್ನ ಜಾತಿ, ಮತ, ಅಂತಸ್ತು ಯಾವುದೂ ಬರೋಲ್ಲ. ರಕ್ತದಾನ ಎಲ್ಲ ದಾನಕ್ಕಿಂತ ಮುಖ್ಯ. ನೀನು ಅದೆಲ್ಲಾ ಯೋಚ್ನೆ ಮಾಡ್ಬೇಡ ಎಂದರು.
6. ಸಿದ್ಲಿಂಗು ರಕ್ತ ನೀಡಿದ್ದನ್ನು ಯಾರಿಗೂ ಹೇಳಬೇಡಿ ಎಂದು ಡಾಕ್ಟರನ್ನು ಏಕೆ ಕೇಳಿಕೊಂಡನು?
ಸಿದ್ಲಿಂಗು ಅವರ ಮನೇಲಿ ಇರೋ ಆಳು. ಆಚಾರ್ಯರು ಶಾನೆ ದೊಡ್ಡಾವ್ರು, ತುಂಬಾ ಮಡಿ ಮಾಡೋವ್ರು, ಅದರೆ ಸಿದ್ಲಿಂಗು ಮಂಕ ಬುದ್ಧಿ ಇರೋನು. ಅಲ್ದೆ ಅವನು ಮಾಂಸ ತಿನ್ನೋನು. ಇವನು ಆಂಡಾಳಮ್ಮನಿಗೆ ರಕ್ತ ನೀಡಿದನೆಂದು ತಿಳಿದರೆ ಅವರಿಗೆ ಬೇಸರವಾಗುತ್ತದೆ ಅಂತ, ಸಿದ್ಲಿಂಗು ರಕ್ತ ನೀಡಿರುವ ವಿಷಯವನ್ನು ಯಾರಿಗೂ ಹೇಳಬೇಡಿ ಎಂದು ಡಾಕ್ಟರ್‌ಗೆ ಹೇಳುತ್ತಾನೆ.
7.ಸಿದ್ಲಿಂಗು ಕೇಳಿಕೊಂಡರೂ ಡಾಕ್ಟರ್ ಸತ್ಯವನ್ನು ಏಕೆ ಮುಚ್ಚಿಡಲಿಲ್ಲ?
ಆಸ್ಪತ್ರೆಗೆ ಧಾವಿಸಿ ಬಂದ ಆಚಾರ್ಯರು ಡಾಕ್ಟರಿಗೆ ಕೈಮುಗಿದು "ನಿಮ್ಮ ಉಪ್ಕಾರ ನಾನು ಈ ಜನ್ಮದಲ್ಲಿ ಎಂದೂ ಮರೆಯೋಲ್ಲ" ಎಂದರು. ಡಾಕ್ಟರ್ "ನೋಡಿ ನೀವು ಕೃತಜ್ಞತೆ ಹೇಳ್ಬೇಕಾಗಿರೋದು ನಿಮ್ಮ ಆಳು ಸಿದ್ಲಿಂಗುಗೆ". ಸಿದ್ಲಿಂಗು ಮರೇಲಿ ನಿಂತು ಕೈಮುಗಿದು ಡಾಕ್ಟರ್‌ಗೆ ಸನ್ನೆ ಮಾಡಿ ಹೇಳಬಾರದೆಂದ. "ನೀನು ಸುಮ್ನಿರಪ್ಪ, ಇಲ್ಲಿ ಮನುಷ್ಯತ್ವ ಮುಖ್ಯ. ಇವತ್ತು ನೀನು ಬ್ಲಡ್ ಕೊಡದೇ ಇದ್ದಿದ್ದರೆ ಇವರ ಹೆಂಡತಿ ಬದುಕುವ ಸಾಧ್ಯತೆ ಇರ್ಲಿಲ್ಲ". ಎಂದು ಡಾಕ್ಟರ್ ಸತ್ಯವನ್ನು ಮರೆಮಾಚದೆ ತಿಳಿಸಿದರು.
8. ರಾಘವಾಚಾರ್ಯರಿಗೆ ಸಿದ್ಲಿಂಗು ಮೇಲೆ ಕೃತಜ್ಞತಾ ಭಾವ ಏಕೆ ಮೂಡಿತು?
ರಾಘವಾಚಾರ್ಯರ ಹೆಂಡತಿ ಆಸ್ಪತ್ರೆಯಲ್ಲಿ ಇರುವಾಗ ಅವರ ಆಪರೇಷನ್‌ಗಾಗಿ 'ಓ' ನೆಗೆಟಿವ್ ಬ್ಲಡ್ ಅವಶ್ಯಕತೆ ಇತ್ತು. ಅದನ್ನು ಅವರ ಮನೆಯ ಆಳು ಸಿದ್ಲಿಂಗು ತನ್ನ ರಕ್ತ ಕೊಟ್ಟು ರಾಘವಾಚಾರ್ಯರ ಹೆಂಡತಿಯ ಪ್ರಾಣ ಉಳಿಸಿದನು. ಮತ್ತು ಈ ವಿಚಾರವನ್ನು ರಾಘವಾಚಾರ್ಯರಿಗೆ ತಿಳಿಸದಂತೆ ಡಾಕ್ಟರ್ ಬಳಿ ಮನವಿ ಮಾಡಿದ್ದನು. ಈ ಸತ್ಯ ರಾಘವಾಚಾರ್ಯರಿಗೆ ಡಾಕ್ಟರಿಂದಲೇ ತಿಳಿದ ಮೇಲೆ ಅವರಿಗೆ ಸಿದ್ಲಿಂಗು ಮೇಲೆ ಕೃತಜ್ಞತಾ ಭಾವ ಮೂಡಿತು.

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**
1. ರಾಘವಾಚಾರ್ಯರಿಗೆ ಮನುಷ್ಯತ್ವದ ಗುಣ ಮನವರಿಕೆಯಾದುದು ಹೇಗೆ?
ಆಂಡಾಳಮ್ಮ ವಾಕ್‌ಗೆ ಹೋಗಿದ್ದಾಗ ಹಿಂದಿನಿಂದ ಬಂದ ಹಸು ಅವರನ್ನು ಬೀಳಿಸಿತು. ಆಂಡಾಳಮ್ಮ ಮುಂದುಗಡೆ ಇದ್ದ ಚೂಪಾದ ಕಲ್ಲಿನ ಮೇಲೆ ಬಿದ್ದರು. ರಕ್ತಸ್ರಾವವಾಗಿ ಎಚ್ಚರ ತಪ್ಪಿದರು. ಕಂಡವರು ಬಂದು ತಿಳಿಸಿದಾಗ ವೀಣಾ ಮನೆ ಆಳು ಸಿದ್ಲಿಂಗು ಜೊತೆ ಓಡಿ ಬಂದು ಆಟೋ ಹಿಡಿದು ಅವರನ್ನು ಆಸ್ಪತ್ರೆಗೆ ಕರೆತಂದಳು. ಡಾಕ್ಟರ್ ಆಪರೇಷನ್ ಮಾಡ್ಬೇಕು 'ಓ'

ನೆಗೆಟಿವ್ ಬ್ಲಡ್ ಬೇಕು ಎಂದರು. “ಬುದ್ಧಿ ನಾನು ಅವರ ಮನೇಲಿ ಇರೋ ಆಳು. ಅವರು ಶಾನೆ ದೊಡ್ಡಾವ್ರು, ತುಂಬಾ ಮಡಿ ಮಾಡೋವ್ರು, ನಾನು ಮಂಕ ಬುದ್ಧಿ, ಅಲ್ದೆ ನಾನು ಮಾಂಸ ತಿನ್ನೋನು. ನಾನು ರಕ್ತ ಕೊಡ್ಬಾರ್ದಲ್ವ ಬುದ್ಧಿ?”ಎಂದಾಗ “ನೋಡಪ್ಪಾ, ಬದುಕಿಸೋಕ್ಕೆ ಬೇಕಾಗಿರೋದು ರಕ್ತ. ಇಲ್ಲಿ ನಿನ್ನ ಜಾತಿ, ಮತ, ಅಂತಸ್ತು ಯಾವುದೂ ಬರೋಲ್ಲ. ರಕ್ತದಾನ ಎಲ್ಲ ದಾನಕ್ಕಿಂತ ಮುಖ್ಯ. ನೀನು ಅದೆಲ್ಲಾ ಯೋಚ್ನೆ ಮಾಡ್ಬೇಡ ಬೇಗ ಬಾ, ಇಲ್ಲಿ ಬಾ”. ಡಾಕ್ಟರು ಕರೆದು ಸಿದ್ಲಿಂಗು ಬ್ಲಡ್ ಚೆಕ್ ಮಾಡಿದ್ರು, ಮ್ಯಾಚಾಯ್ತು. ಅವನನ್ನು ಮಲಗಿಸಿ ಅವನಿಂದ ಬ್ಲಡ್ ತೆಗೆದು ನೇರವಾಗಿ ಆಂಡಾಳಮ್ಮನಿಗೆ ಬ್ಲಡ್ ಕೊಟ್ರು. “ಡಾಕ್ಟ್ರೇ, ನನ್ಗೊಂದು ದೊಡ್ಡ ಉಪ್ಕಾರ ಮಾಡ್ಬೇಕು. ನಾನು ಬ್ಲಡ್ ಕೊಟ್ಟೇಂತ ಅವರಾರಿಗೂ ಗೊತ್ತಾಗೋದು ಬ್ಯಾಡ” ಸಿದ್ಲಿಂಗು ಕೈ ಮುಗಿದು ಹೇಳಿದ. ಡಾಕ್ಟರು ಮುಗುಳ್ನಕ್ಕು “ಆಯಿತು” ಎಂದರು.

ಧಾವಿಸಿ ಬಂದ ಆಚಾರ್ಯರು ವಾರ್ಡ್‌ನಲ್ಲಿ ಮಲಗಿದ್ದ ಹೆಂಡತೀನ ನೋಡಿ ಕಂಗಾಲಾದರು. ಆ ವೇಳೆಗೆ ಅಲ್ಲಿಗೆ ಬಂದ ಡಾಕ್ಟರು “ಏನೂ ಭಯವಿಲ್ಲ” ಎಂದರು. ಆಚಾರ್ಯರು ಡಾಕ್ಟರಿಗೆ ಕೈಮುಗಿದು “ನಿಮ್ಮ ಉಪ್ಕಾರ ನಾನು ಈ ಜನ್ಮದಲ್ಲಿ ಎಂದೂ ಮರೆಯೋಲ್ಲ” ಎಂದರು. ಡಾಕ್ಟರ್ “ನೋಡಿ ನೀವು ಕೃತಜ್ಞತೆ ಹೇಳ್ಬೇಕಾಗಿರೋದು ನಿಮ್ಮ ಆಳು ಸಿದ್ಲಿಂಗುಗೆ”. ಸಿದ್ಲಿಂಗು ಮರೇಲಿ ನಿಂತು ಕೈಮುಗಿದು ಡಾಕ್ಟರ್‌ಗೆ ಸನ್ನೆ ಮಾಡಿ ಹೇಳಬಾರದೆಂದ. “ನೀನು ಸುಮ್ನಿರಪ್ಪ, ಇಲ್ಲಿ ಮನುಷ್ಯತ್ವ ಮುಖ್ಯ. ಇವತ್ತು ನೀನು ಬ್ಲಡ್ ಕೊಡದೇ ಇದ್ದಿದ್ದರೆ ಇವರ ಹೆಂಡತಿ ಬದುಕುವ ಸಾಧ್ಯತೆ ಇರ್ಲಿಲ್ಲ”. ಡಾಕ್ಟರರ ಮಾತು ಕೇಳಿ ಆಚಾರ್ಯರು ದಂಗಾದರು. ಸಾವಿರಾರು ಜನರಿಗೆ ಉಪನ್ಯಾಸ ಮಾಡುವ ಅವರಿಗೆ ತಮ್ಮ ಎದುರು ಕೈ ಮುಗಿದು ನಿಂತಿದ್ದ ಸಿದ್ಲಿಂಗು ಮನುಷ್ಯತ್ವವನ್ನು ಮನವರಿಕೆ ಮಾಡಿದ್ದ. ಅವನಿಗೆ ಕಣ್ಣಲ್ಲೇ ಕೃತಜ್ಞತೆ ಹೇಳಿದರು.

2. ಡಾಕ್ಟರ್ ಮತ್ತು ಸಿದ್ಲಿಂಗು ಮಾನವೀಯತೆಯ ಎರಡು ಪ್ರತಿರೂಪಗಳಾಗಿ ಹೇಗೆ ಕಾಣುತ್ತಾರೆ?

ವೀಣಾ ಅವರ ತಾಯಿಗೆ ಬ್ಲಡ್ ತರಲೆಂದು ಆಟೋದಲ್ಲಿ ಹೊರಟಾಗ ಸಿದ್ಲಿಂಗು ಡಾಕ್ಟರನ್ನು ಕೇಳಿದ “ಬುದ್ಧಿ ನಾನು ಅವರ ಮನೇಲಿ ಇರೋ ಆಳು. ಅವರು ಶಾನೆ ದೊಡ್ಡಾವ್ರು, ತುಂಬಾ ಮಡಿ ಮಾಡೋವ್ರು, ನಾನು ಮಂಕ ಬುದ್ಧಿ, ಅಲ್ದೆ ನಾನು ಮಾಂಸ ತಿನ್ನೋನು. ನಾನು ರಕ್ತ ಕೊಡ್ಬಾರ್ದಲ್ವ ಬುದ್ಧಿ?”ಎಂದಾಗ “ನೋಡಪ್ಪಾ, ಬದುಕಿಸೋಕ್ಕೆ ಬೇಕಾಗಿರೋದು ರಕ್ತ. ಇಲ್ಲಿ ನಿನ್ನ ಜಾತಿ, ಮತ, ಅಂತಸ್ತು ಯಾವುದೂ ಬರೋಲ್ಲ. ರಕ್ತದಾನ ಎಲ್ಲ ದಾನಕ್ಕಿಂತ ಮುಖ್ಯ. ನೀನು ಅದೆಲ್ಲಾ ಯೋಚ್ನೆ ಮಾಡ್ಬೇಡ ಬೇಗ ಬಾ, ಇಲ್ಲಿ ಬಾ”. ಡಾಕ್ಟರು ಕರೆದು ಸಿದ್ಲಿಂಗು ಬ್ಲಡ್ ಚೆಕ್ ಮಾಡಿದ್ರು, ಮ್ಯಾಚಾಯ್ತು. ಅವನನ್ನು ಮಲಗಿಸಿ ಅವನಿಂದ ಬ್ಲಡ್ ತೆಗೆದು ನೇರವಾಗಿ ಆಂಡಾಳಮ್ಮನಿಗೆ ಬ್ಲಡ್ ಕೊಟ್ರು. “ಡಾಕ್ಟ್ರೇ, ನನ್ಗೊಂದು ದೊಡ್ಡ ಉಪ್ಕಾರ ಮಾಡ್ಬೇಕು. ನಾನು ಬ್ಲಡ್ ಕೊಟ್ಟೇಂತ ಅವರಾರಿಗೂ ಗೊತ್ತಾಗೋದು ಬ್ಯಾಡ” ಸಿದ್ಲಿಂಗು ಕೈ ಮುಗಿದು ಹೇಳಿದ. ಇದು ಸಿದ್ಲಿಂಗುವಿನ ಮಾನವೀಯತೆಯನ್ನು ವ್ಯಕ್ತಪಡಿಸುತ್ತದೆ.

ಡಾಕ್ಟರಿಗೆ ಸಿದ್ಲಿಂಗು ರಕ್ತ ಕೊಡ್ಬಾರ್ದಲ್ವ ಬುದ್ಧಿ?”ಎಂದಾಗ “ನೋಡಪ್ಪಾ, ಬದುಕಿಸೋಕ್ಕೆ ಬೇಕಾಗಿರೋದು ರಕ್ತ. ಇಲ್ಲಿ ನಿನ್ನ ಜಾತಿ, ಮತ, ಅಂತಸ್ತು ಯಾವುದೂ ಬರೋಲ್ಲ. ರಕ್ತದಾನ ಎಲ್ಲ ದಾನಕ್ಕಿಂತ ಮುಖ್ಯ. ನೀನು ಅದೆಲ್ಲಾ ಯೋಚ್ನೆ ಮಾಡ್ಬೇಡ ಬೇಗ ಬಾ, ಇಲ್ಲಿ ಬಾ”. ಡಾಕ್ಟರು ಕರೆದು ಸಿದ್ಲಿಂಗು ಬ್ಲಡ್ ಚೆಕ್ ಮಾಡಿದ್ರು, ಮ್ಯಾಚಾಯ್ತು. ಅವನನ್ನು ಮಲಗಿಸಿ ಅವನಿಂದ ಬ್ಲಡ್ ತೆಗೆದು ನೇರವಾಗಿ ಆಂಡಾಳಮ್ಮನಿಗೆ ಬ್ಲಡ್ ಕೊಟ್ರು. “ಡಾಕ್ಟ್ರೇ, ನನ್ಗೊಂದು ದೊಡ್ಡ ಉಪ್ಕಾರ ಮಾಡ್ಬೇಕು. ನಾನು ಬ್ಲಡ್ ಕೊಟ್ಟೇಂತ ಅವರಾರಿಗೂ ಗೊತ್ತಾಗೋದು ಬ್ಯಾಡ” ಸಿದ್ಲಿಂಗು ಕೈ ಮುಗಿದು ಹೇಳಿದ. ಇಲ್ಲಿ ಸಿದ್ಲಿಂಗುವಿಗೆ ಮನುಷ್ಯತ್ವ ಮುಖ್ಯ. ಇವತ್ತು ನೀನು ಬ್ಲಡ್ ಕೊಡದೇ ಇದ್ದಿದ್ದರೆ ಇವರ ಹೆಂಡತಿ ಬದುಕುವ ಸಾಧ್ಯತೆ ಇರ್ಲಿಲ್ಲ” ಎಂದು ತಿಳಿಸುತ್ತಾರೆ. ಇದು ಡಾಕ್ಟರ್‌ರವರ ಮಾನವೀಯತೆಯನ್ನು ವ್ಯಕ್ತಪಡಿಸುತ್ತದೆ.

3. ಬ್ಲಡ್ ಗ್ರೂಪ್ ಕತೆಯ ಸಂದೇಶವೇನು?

ಸಮಾಜದಲ್ಲಿ ಜಾತಿ ವ್ಯವಸ್ಥೆ ಮೊದಲಿನಿಂದಲೂ ಬಲವಾಗಿ ಬೇರೂರಿದೆ. ಇದನ್ನು ಹೋಗಲಾಡಿಸುವ ಪ್ರಯತ್ನವನ್ನು ಹಲವರು ಮಾಡುತ್ತಲೇ ಬಂದಿದ್ದಾರೆ. ಹುಟ್ಟಿನಿಂದ ಯಾರೂ ಮೇಲು ಕೀಳು ಅಲ್ಲ. ವ್ಯಕ್ತಿಯೊಬ್ಬ ತನ್ನ ಉತ್ತಮ ನಡೆವಳಿಕೆ, ಗುಣಸ್ವಭಾವಗಳಿಂದ ದೊಡ್ಡವನಾಗುತ್ತಾನೆ. ಪ್ರತಿಯೊಬ್ಬರಲ್ಲೂ ಹರಿಯುತ್ತಿರುವ ರಕ್ತ ಒಂದೇ ಆಗಿದ್ದರೂ ಮನುಷ್ಯ ಮನುಷ್ಯರನ್ನು ಕಾಣುವ ದೃಷ್ಟಿ, ಮನೋಭಾವಗಳು ಬೇರೆ ಬೇರೆ ಆಗಿರುವುದು ವಿಪರ್ಯಾಸ. ಜೀವವನ್ನು ಉಳಿಸುವ ರಕ್ತಕ್ಕೆ ಜಾತಿ, ಮತ, ಧರ್ಮಗಳ ಕಟ್ಟಳೆಗಳಿಲ್ಲ. ಇದನ್ನು ಅರಿತು ಮಾನವೀಯತೆಯ ನೆಲೆಗಟ್ಟಿನ ಮೇಲೆ ಸುಂದರ ಸಮಾಜವನ್ನು ನಿರ್ಮಿಸಬೇಕು ಎಂಬುದು ಇಲ್ಲಿಯ ಸಂದೇಶವಾಗಿದೆ.

**ಈ) ಸಂದರ್ಭದೊಡನೆ ವಿವರಿಸಿರಿ.**

1. “ಯಾವ ಅಂಗಡೀಲಿ ಸಿಗ್ತದೆ ಬುದ್ಧಿ”

ಈ ವಾಕ್ಯವನ್ನು **ವಿಜಯಮಾಲಾ ರಂಗನಾಥ್** ಅವರು ಬರೆದಿರುವ **ಬ್ಲಡ್ ಗ್ರೂಪ್** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಸಿದ್ಲಿಂಗು ಡಾಕ್ಟರ್‌ರವರಿಗೆ ಹೇಳಿದ್ದಾನೆ. ಪ್ರತಿದಿನ ಅರ್ಧಗಂಟೆ ವಾಕ್ ಮಾಡಬೇಕೆಂದು ಆಂಡಾಳಮ್ಮನಿಗೆ ಡಾಕ್ಟರರು ಸಲಹೆ ನೀಡಿದರು. ಅದರಂತೆ ಹೋಗುವಾಗ ಹಿಂದಿನಿಂದ ಬಂದ ಹಸು ಅವರನ್ನು ಬೀಳಿಸಿತು. ಆಂಡಾಳಮ್ಮ ಮುಂದುಗಡೆ ಇದ್ದ ಚೂಪಾದ ಕಲ್ಲಿನ ಮೇಲೆ ಬಿದ್ದರು. ರಕ್ತಸ್ರಾವವಾಗಿ ಎಚ್ಚರ ತಪ್ಪಿದರು. ಹಾಗಾಗಿ ಆಂಡಾಳಮ್ಮ ಆಸ್ಪತ್ರೆ ಸೇರಿದರು. ಡಾಕ್ಟರ್ ಆಪರೇಷನ್ ಮಾಡ್ಬೇಕು ‘ಓ’ ನೆಗೆಟಿವ್ ಬ್ಲಡ್ ಬೇಕು ಎಂದಾಗ ಈ ಮೇಲಿನ ಮಾತು ಬಂದಿದೆ.

2. “ನಾನು ರಕ್ತ ಕೊಡ್ಬಾರ್ದಲ್ವ ಬುದ್ಧಿ?”

ಈ ವಾಕ್ಯವನ್ನು **ವಿಜಯಮಾಲಾ ರಂಗನಾಥ್** ಅವರು ಬರೆದಿರುವ **ಬ್ಲಡ್ ಗ್ರೂಪ್** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಸಿದ್ಲಿಂಗು ಡಾಕ್ಟರ್‌ರವರಿಗೆ ಹೇಳಿದ್ದಾನೆ. ಆಂಡಾಳಮ್ಮ ಆಸ್ಪತ್ರೆ ಸೇರಿದಾಗ ವೀಣಾ ಅವರ ತಾಯಿಗೆ ಬ್ಲಡ್ ತರಲೆಂದು ಆಟೋದಲ್ಲಿ ಹೊರಟಾಗ ಸಿದ್ಲಿಂಗು ಡಾಕ್ಟರನ್ನು ಕೇಳಿದ "ಬುದ್ಧಿ ನಾನು ಅವರ ಮನೇಲಿ ಇರೋ ಆಳು. ಅವರು ಶಾನೆ ದೊಡ್ಡಾವ್ರು, ತುಂಬಾ ಮಡಿ ಮಾಡೋವ್ರು, ನಾನು ಮಂಕ ಬುದ್ಧಿ, ಅಲ್ದೆ ನಾನು ಮಾಂಸ ತಿನ್ನೋನು. ನಾನು ರಕ್ತ ಕೊಡ್ಬಾರ್ದಲ್ವ ಬುದ್ಧಿ?"ಎಂದಾಗ ಈ ಮೇಲಿನ ಮಾತು ಬಂದಿದೆ.

3. "ರಕ್ತದಾನ ಎಲ್ಲ ದಾನಕ್ಕಿಂತ ಮುಖ್ಯ."

ಈ ವಾಕ್ಯವನ್ನು **ವಿಜಯಮಾಲಾ ರಂಗನಾಥ್** ಅವರು ಬರೆದಿರುವ **ಬ್ಲಡ್ ಗ್ರೂಪ್** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಡಾಕ್ಟರ್‌ರವರು ಸಿದ್ಲಿಂಗುವಿಗೆ ಹೇಳುತ್ತಾರೆ. ಡಾಕ್ಟರಿಗೆ ಸಿದ್ಲಿಂಗು ನಾನು ಅವರ ಮನೆಯ ಆಳು, ರಕ್ತ ಕೊಡ್ಬಾರ್ದಲ್ವ ಬುದ್ಧಿ?"ಎಂದಾಗ "ನೋಡಪ್ಪಾ, ಬದುಕಿಸೋಕ್ಕೆ ಬೇಕಾಗಿರೋದು ರಕ್ತ. ಇಲ್ಲಿ ನಿನ್ನ ಜಾತಿ, ಮತ, ಅಂತಸ್ತು ಯಾವುದೂ ಬರೋಲ್ಲ. ರಕ್ತದಾನ ಎಲ್ಲ ದಾನಕ್ಕಿಂತ ಮುಖ್ಯ ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

4. "ಇಲ್ಲಿ ಮನುಷ್ಯತ್ವ ಮುಖ್ಯ."

ಈ ವಾಕ್ಯವನ್ನು **ವಿಜಯಮಾಲಾ ರಂಗನಾಥ್** ಅವರು ಬರೆದಿರುವ **ಬ್ಲಡ್ ಗ್ರೂಪ್** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಡಾಕ್ಟರ್‌ರವರು ಸಿದ್ಲಿಂಗುವಿಗೆ ಹೇಳುತ್ತಾರೆ. ಸಿದ್ಲಿಂಗು ರಕ್ತ ಕೊಟ್ಟ ನಂತರ "ಡಾಕ್ಟ್ರೇ, ನನ್ನೊಂದು ದೊಡ್ಡ ಉಪ್ಕಾರ ಮಾಡ್ಬೇಕು. ನಾನು ಬ್ಲಡ್ ಕೊಟ್ಟೇಂತ ಅವರಾರಿಗೂ ಗೊತ್ತಾಗೋದು ಬ್ಯಾಡ" ಸಿದ್ಲಿಂಗು ಕೈ ಮುಗಿದು ಹೇಳಿದ. ಡಾಕ್ಟರು ಮುಗುಳ್ನಕ್ಕು "ಆಯಿತು" ಎಂದರು.ನಂತರ ಆಚಾರ್ಯರು ಡಾಕ್ಟರಿಗೆ ಕೈಮುಗಿದು "ನಿಮ್ಮ ಉಪ್ಕಾರ ನಾನು ಈ ಜನ್ಮದಲ್ಲಿ ಎಂದೂ ಮರೆಯೋಲ್ಲ" ಎಂದರು. ಡಾಕ್ಟರ್ "ನೋಡಿ ನೀವು ಕೃತಜ್ಞತೆ ಹೇಳ್ಬೇಕಾಗಿರೋದು ನಿಮ್ಮ ಆಳು ಸಿದ್ಲಿಂಗುಗೆ" ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

**3. ಭಾಷಾಭ್ಯಾಸ :**

**ಅ) ಕೆಳಗಿನ ಅನ್ಯದೇಶೀಯ ಪದಗಳಿಗೆ ಕನ್ನಡದ ಅರ್ಥ ಬರೆಯಿರಿ.**

ಅರ್ಜೆಂಟ್ – ಬೇಗ, ಬ್ಲಡ್ ಗ್ರೂಪ್– ರಕ್ತದಗುಂಪು, ಡಾಕ್ಟರ್ – ವೈದ್ಯ
ಟೆನ್‌ಷನ್– ಆತಂಕ ಅರೇಂಜ್ – ವ್ಯವಸ್ಥೆ, ಫೋನ್ – ದೂರವಾಣಿ
ಆಪರೇಷನ್– ಶಸ್ತ್ರ ಚಿಕಿತ್ಸೆ, ಮ್ಯಾಚಾಯ್ತು – ಸರಿಹೊಂದಿತು, ವಾರ್ಡ್– ಕೊಠಡಿ

**ಆ) ಕೆಳಗಿನ ಪದಗಳಿಗೆ ಗ್ರಾಂಥಿಕ ರೂಪ ಬರೆಯಿರಿ.**

ತಗೊಂಡ್ಬಾ – ತೆಗೆದುಕೊಂಡು ಬಾ, ತರ್ಬೇಕು –ತೆಗೆದುಕೊಂಡು ಬರಬೇಕು,
ತರ್ಲಿಕ್ಕೆ ಹೇಳೌರೆ – ತೆಗೆದುಕೊಂಡು ಬರುವುದಕ್ಕೆ ಹೇಳಿದ್ದಾರೆ, ಬದುಕಿಸೋಕ್ಕೆ – ಬದುಕಿಸುವುದಕ್ಕೆ,
ಯೋಚ್ನೆ – ಯೋಚನೆ, ಬ್ಯಾಡ – ಬೇಡ,
ಉಪ್ಕಾರ – ಉಪಕಾರ, ಮರೇಲಿ – ಮರೆಯಲ್ಲಿ,
ಸುಮ್ನಿರಪ್ಪ – ಸುಮ್ಮನೆ ಇರಪ್ಪ, ಮಾಡೋವ್ರು – ಮಾಡುವವರು,
ಅಂದ್ಕೊಳ್ದೆಹೋದ್ರೆ – ಅಂದು ಕೊಳ್ಳದೇ ಹೋದರೆ, ಅಲ್ದೆ – ಅಲ್ಲದೆ,
ತೊಗೊಳಕ್ಕಾಗಲ್ಲ – ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ, ಕೊಡ್ಬಾರ್ದಲ್ವ – ಕೊಡಬಾರದಲ್ಲವಾ,

**ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

1. ಕೃತಜ್ಞತೆ : ಉಪಕಾರ ಮಾಡಿದವರಿಗೆ ಕೃತಜ್ಞತೆ ಸಲ್ಲಿಸಬೇಕು.
2. ಮನುಷ್ಯತ್ವ : ಮಾನವನಲ್ಲಿ ಮನುಷ್ಯತ್ವದ ಗುಣ ಇರಬೇಕು.
3. ದಂಗಾಗು : ಡಾಕ್ಟರರ ಮಾತು ಕೇಳಿ ಆಚಾರ್ಯರು ದಂಗಾದರು.
4. ನಿಟ್ಟುಸಿರುಬಿಡು : ಬ್ಲಡ್ ಅರೇಂಜ್ ಆದಾಗ ವೀಣಾ ನಿಟ್ಟುಸಿರು ಬಿಡುವಂತಾಯಿತು.
5. ದೊಡ್ಡವರು : ಚಿಕ್ಕವರು ದೊಡ್ಡವರಿಗೆ ಗೌರವ ಕೊಡಬೇಕು.

**ಈ) ಕೆಳಗಿನ ಪದಗಳಿಗೆ ತತ್ಸಮ–ತದ್ಭವಗಳನ್ನು ಬರೆಯಿರಿ.**

ರಕ್ತ – ರಕುತ,    ಹುಲಿ – ಪುಲಿ,    ಜನ್ಮ – ಜನುಮ,    ಲಗ್ನ – ಲಗುನ

**4. ಸೈದ್ಧಾಂತಿಕ ವ್ಯಾಕರಣ :**
**ತತ್ಸಮ – ತದ್ಭವಗಳು :**

**1. ತತ್ಸಮಗಳು :** ಸಂಸ್ಕೃತದಿಂದ ಬದಲಾವಣೆ ಹೊಂದದೆ ಕನ್ನಡದಲ್ಲಿ ಬಳಸಲ್ಪಡುವ ಶಬ್ದಗಳು ತತ್ಸಮಗಳು. 'ತತ್' ಎಂದರೆ 'ಅದಕ್ಕೆ', 'ಸಮ' ಎಂದರೆ ಸಮಾನವಾದುದು – ಇಲ್ಲಿ ಅದಕ್ಕೆ ಎಂದರೆ ಸಂಸ್ಕೃತಕ್ಕೆ ಸಮಾನವಾದುದು ಎಂದು ಅರ್ಥ. ಇವುಗಳನ್ನು ಸಮಸಂಸ್ಕೃತಗಳೆಂದೂ ಕರೆಯುವುದುಂಟು.

**ಉದಾ :** ರಾಮ, ಭೀಮ, ವಸಂತ, ಚಂದ್ರ, ಶ್ರೀ, ಕರ್ತೃ, ಶತ್ರು, ಕವಿ, ಕಾವ್ಯ, ಶಿಶು, ಪತಿ, ಸತಿ, ಲಿಪಿ, ಶುದ್ಧಿ, ಸಿದ್ಧಿ, ವಿದ್ಯಾರ್ಥಿ, ವಧು, ಸೂರ್ಯ – ಇತ್ಯಾದಿ.

**2. ತದ್ಭವಗಳು :** ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಅಲ್ಪ ಸ್ವಲ್ಪ ಇಲ್ಲವೇ ಪೂರ್ಣ ಬದಲಾವಣೆ ಹೊಂದಿ ಬಂದಿರುವ ಶಬ್ದಗಳನ್ನು ತದ್ಭವಗಳು ಎಂದು ಕರೆಯಲಾಗುತ್ತದೆ. 'ತತ್' ಎಂದರೆ ಅದರಿಂದ ಅಂದರೆ, ಸಂಸ್ಕೃತದಿಂದ, 'ಭವ' ಎಂದರೆ ಹುಟ್ಟಿದ ಎಂದು ಅರ್ಥ.

**ಉದಾ :**

| ಸಂಸ್ಕೃತ ರೂಪ > ವ್ಯತ್ಯಾಸ ರೂಪ | ಸಂಸ್ಕೃತ ರೂಪ > ವ್ಯತ್ಯಾಸ ರೂಪ |
|---|---|
| ಯಾತ್ರೆ > ಜಾತ್ರೆ | ಯೋಧ > ಜೋದ |
| ಘಂಟಾ > ಗಂಟೆ | ಆಕಾಶ > ಆಗಸ |
| ಶರ್ಕರಾ > ಸಕ್ಕರೆ | ಛಂದ > ಚಂದ |
| ವಸತಿ > ಬಸದಿ | ಉದ್ಯೋಗ > ಉಜ್ಜುಗ |
| ರಾಕ್ಷಸ > ರಕ್ಕಸ | |

## 6. ಪರಿವರ್ತನೆ – ಜಿ. ಎಸ್. ಬಸವರಾಜಶಾಸ್ತ್ರಿ

**ಕೃತಿಕಾರರ ಪರಿಚಯ :**

- **ಜಿ.ಎಸ್. ಬಸವರಾಜಶಾಸ್ತ್ರೀ** ಅವರು 1936 ರಲ್ಲಿ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಬೇಡರ ಗಣೇಕಲ್ ಗ್ರಾಮದಲ್ಲಿ ಜನಿಸಿದರು.
- ಇವರು ನಾಮಾವಳಿ, ಕರ್ಮಯೋಗಿ, ಕರುಣಾಮಯಿ, ಜಗದ್ಗುರು ರೇಣುಕ ಚರಿತೆ, ಸಮಾಜಜೀವಿ, ಗಟ್ಟಿಮಾತು, ದಾರಿದೀಪ, ವಚನಾಮೃತಧಾರೆ, ತ್ರಿವೇಣಿ ಸಂಗಮ, ಪ್ರತಿಸ್ಪಂದನ, ಮನುಕುಲತಿಲಕ ಇನ್ನು ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಇವರಿಗೆ ಅವರ ಅಭಿಮಾನಿಗಳು 'ಶಾಸ್ತ್ರಿ ಸಂಪದ' ಎನ್ನುವ ಅಭಿನಂದನಾ ಗ್ರಂಥವನ್ನು ಅರ್ಪಿಸಿದ್ದಾರೆ.
- ಪ್ರಸ್ತುತ ಗದ್ಯಭಾಗವನ್ನು ಜಿ.ಎಸ್. ಬಸವರಾಜಶಾಸ್ತ್ರೀ ಅವರ **'ಶಾಸ್ತ್ರಿ ಕನಸು'** ಕೃತಿಯಿಂದ ಆಯ್ದುಕೊಳ್ಳಲಾಗಿದೆ.

**ಅಭ್ಯಾಸ**

**1. ಪದಗಳ ಅರ್ಥ ತಿಳಿಯಿರಿ :**

**ಅರಿವು** – ತಿಳಿವಳಿಕೆ; ಪ್ರಜ್ಞೆ.
**ಈಚಲ** – ತಾಳೆಯ ಜಾತಿಗೆ ಸೇರಿದ ಮರ.
**ತಕರಾರು** – ಆಕ್ಷೇಪಣೆ
**ಪರಿವರ್ತನೆ** – ಬದಲಾವಣೆ
**ಪಶ್ಚಾತ್ತಾಪ** – ತಪ್ಪು ಮಾಡಿದ ಕೆಲಸಕ್ಕೆ ಮರುಗುವಿಕೆ.
**ಮೈಮರೆ** (ನುಡಿಗಟ್ಟು) – ತಲ್ಲೀನತೆ
**ಸನ್ಮಾರ್ಗ** – ಒಳ್ಳೆಯ ದಾರಿ; ಸರಿಯಾದ ಮಾರ್ಗ
**ಬಯಲಾಟ** – ಬಯಲಲ್ಲಿ ನಡೆಯುವ ಜಾನಪದ ನಾಟಕ ಪ್ರಕಾರಗಳಲ್ಲಿ ಒಂದು ಬಗೆ.
**ಅರೆಷ್ಟು** (ಅನ್ಯ ದೇಶೀಯ) – ಬಂಧಿಸು; ಸೆರೆಹಿಡಿ.
**ಗಂಟುಬೀಳು** (ಕ್ರಿ) – ಬೆನ್ನುಹತ್ತು
**ತಲೆದೂಗು** (ನುಡಿಗಟ್ಟು) – ಮೆಚ್ಚುಗೆ ಸೂಚಿಸು
**ಪರೋಪಕಾರಿ** – ಇತರರಿಗೆ ನೆರವು ನೀಡುವವನು.
**ಸಂಭಾವನೆ** – ಗೌರವಧನ
**ವ್ಯಸನ** – ಚಿಂತೆ; ದುಃಖ.

**2. ಪ್ರಶ್ನೆಗಳು :**

**ಅ) ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿರಿ.**

1. ಜಿ.ಎಸ್. ಬಸವರಾಜಶಾಸ್ತ್ರೀ ಅವರ ತಾತನ ಹೆಸರು **ಗಣೇಕಲ್ ಶಿವಯ್ಯ**
2. ತಾರಾನಾಥರ ಊರು **ರಾಯಚೂರು**

3. ತಾರಾನಾಥರ ವಾಚನ್ನು ಕದ್ದವನು **ಒಬ್ಬ ಬಾಲಕ**
4. 'ಪರಿವರ್ತನೆ' ಪಾಠದ ಆಕರ ಕೃತಿ **ಶಾಸ್ತ್ರಿ ಕನಸು**

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ದುಷ್ಟನ ಮನಸ್ಸು ಯಾವ ಮಾತುಗಳಿಂದ ಪರಿವರ್ತನೆಯಾಗುತ್ತದೆ?
ದುಷ್ಟನ ಮನಸ್ಸು ಮನಸ್ಸಿಗೆ ಹಿತಕರವಾದ, ಆನಂದದಾಯಕವಾದ ಮಾತುಗಳಿಂದ ಪರಿವರ್ತನೆಯಾಗುತ್ತದೆ.
2. ಗಣೇಕಲ್ ಶಿವಯ್ಯನವರು ಯಾವುದಕ್ಕೆ ಪ್ರಸಿದ್ಧರಾಗಿದ್ದರು?
ಗಣೇಕಲ್ ಶಿವಯ್ಯನವರು ಪಿಟೀಲು ವಾದಕ ಮತ್ತು ಬಯಲಾಟದ ನಿರ್ದೇಶಕನಾಗಿ ಪ್ರಸಿದ್ಧರಾಗಿದ್ದರು.
3. ಗಣೇಕಲ್ ಶಿವಯ್ಯನವರ ಸಂಗೀತ ಕೇಳಲು ಕಳ್ಳರು ಏಕೆ ಒಪ್ಪಿಕೊಂಡರು?
ಗಣೇಕಲ್ ಶಿವಯ್ಯನವರು ಅವರ ಹಾಡನ್ನು ಕೇಳಿದರೆ ತಮ್ಮಲ್ಲಿದ್ದ ಹಣವನ್ನು ಕಳ್ಳರಿಗೆ ಕೊಡುತ್ತೇನೆ ಎಂದು ಹೇಳಿದರು. ಅದಕ್ಕೆ ಕಳ್ಳರು ಹಾಡನ್ನು ಕೇಳಲು ಒಪ್ಪಿಕೊಂಡರು.
4. ಗಣೇಕಲ್ ಶಿವಯ್ಯನವರು ಸಂಗೀತ ನಡೆಸಿಕೊಟ್ಟ ಸ್ಥಳದ ವಾತಾವರಣ ಹೇಗಿತ್ತು?
ಗಣೇಕಲ್ ಶಿವಯ್ಯನವರು ಒಂದು ಮರದ ಕೆಳಗೆ ಕುಳಿತುಕೊಳ್ಳುತ್ತಾರೆ. ಮುಂದೆ ಹಳ್ಳದ ನೀರು ಜುಳುಜುಳು ಎಂದು ನಿಧಾನಕ್ಕೆ ಹರಿಯುತ್ತಿತ್ತು. ಇಂತಹ ನಿರ್ಮಲ ವಾತಾವರಣವಿತ್ತು.
5.ಕಳ್ಳರು ಗಣೇಕಲ್ ಶಿವಯ್ಯನವರ ಸಂಗೀತವನ್ನು ಹೇಗೆ ಆಲಿಸಿದರು?
ಬೈಜು ಹಾಡಿದಾಗ ಹಾರವನ್ನು ಹಾಕಿಸಿಕೊಂಡು ಹೋದ ಜಿಂಕೆಯು ಮರಳಿ ಬಂದು ಅವನ ಹಾಡು ಕೇಳುತ್ತಾ ಮೈ ಮರೆತು ನಿಂತಂತೆ ಆ ಕಳ್ಳರೂ ತಾತನ ಹಾಡಿಗೆ ಮೈಮರೆತು, ಕಣ್ಣು ಮುಚ್ಚಿಕೊಂಡು ತಲೆದೂಗುತ್ತಾ ಕುಳಿತುಕೊಂಡರು.
6. ಗಣೇಕಲ್ ಶಿವಯ್ಯನವರು ಕಳ್ಳರನ್ನು ಏನೆಂದು ಆಶೀರ್ವದಿಸಿದರು?
ಗಣೇಕಲ್ ಶಿವಯ್ಯನವರು 'ಇನ್ನು ಮುಂದೆ ಈ ಕೆಟ್ಟ ಕಳ್ಳತನವನ್ನು ಮಾಡಬೇಡಿ, ಸತ್ಯವಂತರಾಗಿ ಬದುಕಿ' ಎಂದು ಹೇಳಿ ಅವರು ಕೊಟ್ಟ ಹಣದೊಂದಿಗೆ ತಮ್ಮ ಹಣವನ್ನು ಕೊಟ್ಟು ನಾಲ್ವರೂ ಒಟ್ಟುಗೂಡಿ ವ್ಯಾಪಾರ ಮಾಡಿ ಎಂದು ಆಶೀರ್ವದಿಸಿ ಕಳುಹಿಸುತ್ತಾರೆ.
7. ತಾರಾನಾಥರು ಆಶ್ರಮವನ್ನು ಏಕೆ ಕಟ್ಟಿದರು?
ಬಡವರು ಉದ್ಧಾರವಾಗಬೇಕಾದರೆ ಮೊದಲು ಅವರ ಮಕ್ಕಳು ವಿದ್ಯಾವಂತರಾಗಬೇಕು. ಆ ಮೂಲಕ ನೌಕರಿಗೆ ಸೇರಿ ಸುಖಜೀವನ ನಡೆಸುವಂತಾಗಬೇಕು. ಅದಕ್ಕಾಗಿ ತಾರಾನಾಥರು ಆಶ್ರಮ ಕಟ್ಟಿದರು.
8. ತಾರಾನಾಥರಿಗೆ ವಾಚನ್ನು ಯಾರು ನೀಡಿದ್ದರು?
ತಾರಾನಾಥರಿಗೆ ವಾಚನ್ನು ವಿದೇಶೀಯರು ನೀಡಿದ್ದರು.

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಗಣೇಕಲ್ ಶಿವಯ್ಯನವರು ಕಳ್ಳರನ್ನು ಏನೆಂದು ಕೇಳಿಕೊಂಡರು?
ಗಣೇಕಲ್ ಶಿವಯ್ಯನವರು ಕಳ್ಳರನ್ನು ಕುರಿತು "ಅಯ್ಯಾ ನಿಮಗೆ ಹಣಬೇಕು, ಅದು ನನ್ನಲ್ಲಿದೆ. ಅದನ್ನು ನಿಮಗೆ ಕೊಡುತ್ತೇನೆ, ಯಾವ ತಕರಾರೂ ಇಲ್ಲ. ಆದರೆ ನೀವು ನನ್ನ ಆಸೆಯನ್ನು ಪೂರೈಸಬೇಕು "ಅದೇನೂ ಕಷ್ಟದಾಯಕವಲ್ಲ, ಕಿವಿಗಳಿಗೆ ಸುಖಕರವಾದುದು. ನೀವು ನಿಶ್ಚಿಂತೆಯಿಂದ ಕುಳಿತು ಅರ್ಧತಾಸು ನನ್ನ ಸಂಗೀತವನ್ನು ಕೇಳಬೇಕು." ಎಂದು ಕೇಳಿಕೊಂಡರು.
2. ಗಣೇಕಲ್ ಶಿವಯ್ಯನವರು ಕಳ್ಳರ ಸಮ್ಮುಖದಲ್ಲಿ ನಡೆಸಿದ ಸಂಗೀತ ಯಾವ ರೀತಿ ಇತ್ತು?
ಗಣೇಕಲ್ ಶಿವಯ್ಯನವರು ಮರದ ಕೆಳಗೆ ಕುಳಿತುಕೊಳ್ಳುತ್ತಾರೆ. ಮುಂದೆ ಹಳ್ಳದ ನೀರು ಜುಳುಜುಳು ಎಂದು ನಿಧಾನಕ್ಕೆ ಹರಿಯುತ್ತಲೇ ಇದೆ. ತಾತನು ಪಿಟೀಲು ಬಾರಿಸುತ್ತಾ ಮಧುರವಾದ ಕಂಠದಿಂದ ಹಾಡತೊಡಗಿದನು. ಬೈಜು ಹಾಡಿದಾಗ ಹಾರವನ್ನು ಹಾಕಿಸಿಕೊಂಡು ಹೋದ ಜಿಂಕೆಯು ಮರಳಿಬಂದು ಅವನ ಹಾಡು ಕೇಳುತ್ತಾ ಮೈ ಮರೆತು ನಿಂತಂತೆ ಆ ಕಳ್ಳರೂ ತಾತನ ಹಾಡಿಗೆ ಮೈಮರೆತು, ಕಣ್ಣು ಮುಚ್ಚಿಕೊಂಡು ತಲೆದೂಗುತ್ತಾ ಕುಳಿತುಕೊಂಡರು.
3. ಗಣೇಕಲ್ ಶಿವಯ್ಯನವರ ಸಂಗೀತ ಕೇಳಿದ ನಂತರ ಕಳ್ಳರು ಏನು ಮಾಡಿದರು?
ಕಳ್ಳರು ತಮ್ಮಲ್ಲಿರುವ ಹಣವನ್ನು ತೆಗೆದು ತಾತನ ಮುಂದೆ ಇಟ್ಟು ತಾತನ ಪಾದಕ್ಕೆ ಎರಗಿ "ತಾತ ನಿಮ್ಮ ಹಣವು ನಮಗೆ ಬೇಡ, ನಿಮ್ಮ ಆಶೀರ್ವಾದವಷ್ಟೇ ಸಾಕು" ಎಂದು ಹೊರಡತೊಡಗಿದರು.
4. ತಾರಾನಾಥರ ವ್ಯಕ್ತಿತ್ವದ ವಿಶೇಷತೆಗಳೇನು?
ತಾರಾನಾಥರು ಬಡವರ ಬಂಧು, ಮಹಾಜ್ಞಾನಿಗಳೂ ದಯಾಳುಗಳೂ ಧೈರ್ಯವಂತರೂ ಪರೋಪಕಾರಿಗಳೂ ಪರರ ಹಿತೈಷಿಗಳೂ ಆತ್ಮವಿಶ್ವಾಸಿಗಳೂ ಆಗಿದ್ದರು. ಅವರಿಗೆ ಅಸಾಧ್ಯವಾದ ಕೆಲಸವೇ ಇಲ್ಲ. ಅದು ಎಂತಹದೇ ಇರಲಿ, ಸಾಧಿಸುವ ಶಕ್ತಿ ಅವರಲ್ಲಿ ಇತ್ತು. ಒಟ್ಟಿನಲ್ಲಿ ಅವರು ಎಲ್ಲರಿಗೂ ಬೇಕಾಗಿದ್ದರು.
5.ಬಾಲಕನು ಶಿಕ್ಷೆ ಅನುಭವಿಸುವುದನ್ನು ತಾರಾನಾಥರು ಹೇಗೆ ತಪ್ಪಿಸಿದರು?ಪೋಲೀಸರು ಬಾಲಕನನ್ನು ಬಂಧಿಸಲು ಬಂದಾಗ ತಾರಾನಾಥರು "ಇವನು ಕಳ್ಳನಲ್ಲ, ತಪ್ಪು ಮಾಡಿಲ್ಲ. ಆದ್ದರಿಂದ ಇವನನ್ನು ಬಂಧಿಸುವ ಅವಶ್ಯಕತೆ ಇಲ್ಲ. ಏಕೆಂದರೆ

ವಾಚನ್ನು ರಿಪೇರಿ ಮಾಡಿಸಲು ನಾನೇ ಅವನ ಕೈಲಿ ಕೊಟ್ಟು ಕಳಿಸಿದ್ದೆ. ನನ್ನ ಸಹೋದರನು ಮತ್ತು ಆ ವ್ಯಾಪಾರಿ ಇಬ್ಬರೂ ಸುಳ್ಳರೇ, ಅವರ ಮಾತನ್ನು ನಂಬಬೇಡಿ" ಎಂದರು.

6. ತಾರಾನಾಥರು ಬಾಲಕನ ತಪ್ಪನ್ನು ಏಕೆ ಕ್ಷಮಿಸಿದರು?

ತಾರಾನಾಥರಿಗೆ ಆ ಬಾಲಕನನ್ನು ಶಿಕ್ಷೆಗೆ ಒಳಪಡಿಸುವುದು ಇಷ್ಟವಿರಲಿಲ್ಲ. ಬಾಲಕನಿಗೆ ಅವನ ತಪ್ಪಿನ ಅರಿವು ಉಂಟಾಗಿ ಪಶ್ಚಾತ್ತಾಪವಾಗುತ್ತದೆ. ಅವನು ಪಂಡಿತ ತಾರಾನಾಥರ ಪಾದಕ್ಕೆ ಬಿದ್ದು ಗೊಳೋ ಎಂದು ಅಳುತ್ತಾನೆ. "ಗುರುಗಳೇ ನನಗೆ ಶಿಕ್ಷೆ ಕೊಡಿಸಬೇಕಿತ್ತು" ಎನ್ನಲು ತಾರಾನಾಥರು "ಮಗು ತಪ್ಪು ಮಾಡುವುದು ಸಹಜ, ಈಗ ನಿನಗೆ ಅದರ ಅರಿವಾಯಿತಲ್ಲ ಅಷ್ಟೇ ಸಾಕು. ಚೆನ್ನಾಗಿ ಓದಿ ಚೆನ್ನಾಗಿ ಬದುಕು. ಅದೇ ನಿನಗೆ ಸಂತಸ ತರುತ್ತದೆ ಎಂದು ಬಾಲಕನ ತಪ್ಪನ್ನು ಕ್ಷಮಿಸಿದರು.

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಗಣೇಕಲ್ ಶಿವಯ್ಯನವರು ಕಳ್ಳರ ಮನಸ್ಸನ್ನು ಹೇಗೆ ಪರಿವರ್ತಿಸಿದರು?

ಗಣೇಕಲ್ ಶಿವಯ್ಯನವರು ಆಟ ಮುಗಿಸಿ ಸಂಭಾವನೆ ಪಡೆದು ಊರಿಗೆ ಮರಳುವಾಗ ದಾರಿಯಲ್ಲಿರುವ ಈಚಲ ಬನದಲ್ಲಿ ನಾಲ್ಕು ಜನ ಕಳ್ಳರು ಗಂಟು ಬೀಳುತ್ತಾರೆ. ಆಗ ನನ್ನ ತಾತನು ಹೆದರದೆ ಧೈರ್ಯದಿಂದ ಕಳ್ಳರನ್ನು ಕುರಿತು "ಅಯ್ಯಾ ನಿಮಗೆ ಹಣಬೇಕು, ಅದು ನನ್ನಲ್ಲಿದೆ. ಅದನ್ನು ನಿಮಗೆ ಕೊಡುತ್ತೇನೆ, ಯಾವ ತಕರಾರೂ ಇಲ್ಲ. ಆದರೆ ನೀವು ನನ್ನ ಆಸೆಯನ್ನು ಪೂರೈಸಬೇಕು." ಆಗ ಕಳ್ಳರು "ಹೇಳಿ ತಾತ ಖಂಡಿತವಾಗಿ ನಿಮ್ಮ ಆಸೆಯನ್ನು ಪೂರೈಸುತ್ತೇವೆ. ಅದೇನು ಹೇಳಿ" ಎನ್ನಲು, ತಾತನು "ಅದೇನೂ ಕಷ್ಟದಾಯಕವಲ್ಲ, ಕಿವಿಗಳಿಗೆ ಸುಖಕರವಾದುದು. ನೀವು ನಿಶ್ಚಿಂತೆಯಿಂದ ಕುಳಿತು ಅರ್ಧತಾಸು ನನ್ನ ಸಂಗೀತವನ್ನು ಕೇಳಬೇಕು." "ಆಗಲಿ ತಾತ ಖಂಡಿತವಾಗಿಯೂ ಕೇಳುತ್ತೇವೆ. ಅದರಿಂದ ನಾವೇನೂ ಕಳೆದುಕೊಳ್ಳುವುದು ಇಲ್ಲವಲ್ಲ" ಎಂದು ಮರದ ಕೆಳಗೆ ಕುಳಿತುಕೊಳ್ಳುತ್ತಾರೆ. ಹಳ್ಳದ ನೀರು ಜುಳುಜುಳು ಎಂದು ನಿಧಾನಕ್ಕೆ ಹರಿಯುತ್ತಲೇ ಇದೆ. ತಾತನು ಪಿಟೀಲು ಬಾರಿಸುತ್ತಾ ಮಧುರವಾದ ಕಂಠದಿಂದ ಹಾಡತೊಡಗಿದನು. ಬೈಜು ಹಾಡಿದಾಗ ಹಾರವನ್ನು ಹಾಕಿಸಿಕೊಂಡು ಹೋದ ಜಿಂಕೆಯು ಮರಳಿಬಂದು ಅವನ ಹಾಡು ಕೇಳುತ್ತಾ ಮೈ ಮರೆತು ನಿಂತಂತೆ ಆ ಕಳ್ಳರೂ ತಾತನ ಹಾಡಿಗೆ ಮೈಮರೆತು, ಕಣ್ಣು ಮುಚ್ಚಿಕೊಂಡು ತಲೆದೂಗುತ್ತಾ ಕುಳಿತುಕೊಂಡರು. ಅರ್ಧ ತಾಸೇನು ಒಂದು ತಾಸು ಆದರೂ ಅವರಿಗೆ ಎಚ್ಚರವಾಗಲೇ ಇಲ್ಲ.

ಕೊನೆಗೆ ಎಚ್ಚೆತ್ತ ಕಳ್ಳರು ತಮ್ಮಲ್ಲಿರುವ ಹಣವನ್ನು ತೆಗೆದು ತಾತನ ಮುಂದೆ ಇಟ್ಟು ತಾತನ ಪಾದಕ್ಕೆ ಎರಗಿ "ತಾತ ನಿಮ್ಮ ಹಣವು ನಮಗೆ ಬೇಡ, ನಿಮ್ಮ ಆಶೀರ್ವಾದವಷ್ಟೇ ಸಾಕು" ಎಂದು ಹೊರಡತೊಡಗಿದರು. ಆಗ ತಾತನು ಅವರನ್ನು ತಡೆದು "ಅಯ್ಯಾ ದಯಾಳುಗಳೇ ನಿಮ್ಮ ಹಣವು ನನಗೆ ಬೇಕಿಲ್ಲ, ನಿಮ್ಮ ಹಣದ ಜತೆಗೆ ನನ್ನ ಹಣವನ್ನೂ ಕೊಡುತ್ತೇನೆ. ಅದರಿಂದ ನಾಲ್ವರೂ ಒಟ್ಟುಗೂಡಿ ವ್ಯಾಪಾರ ಮಾಡುತ್ತಾ ಜೀವನ ನಡೆಸಿ. ಇನ್ನು ಮುಂದೆ ಈ ಕೆಟ್ಟ ಕಳ್ಳತನವನ್ನು ಮಾಡಬೇಡಿ, ಸತ್ಯವಂತರಾಗಿ ಬದುಕಿ" ಎಂದು ಹೇಳಿ, ಅವರು ಕೊಟ್ಟ ಹಣದೊಂದಿಗೆ ತಮ್ಮ ಹಣವನ್ನೂ ಕೊಟ್ಟು ಆಶೀರ್ವದಿಸಿ ಕಳುಹಿಸುತ್ತಾರೆ. ಹೀಗೆ ಗಣೇಕಲ್ ಶಿವಯ್ಯನವರು ಸಂಗೀತದ ಮೂಲಕ ಕಳ್ಳರ ಮನವನ್ನು ಪರಿವರ್ತಿಸಿದರು.

2. ತಾರಾನಾಥರು ವಾಚನ್ನು ಕದ್ದ ಬಾಲಕನ ಮನಸ್ಸನ್ನು ಹೇಗೆ ಪರಿವರ್ತಿಸಿದರು?

ಪೋಲೀಸರು ಬಾಲಕನನ್ನು ಅರೆಸ್ಟು ಮಾಡಲು ಆಶ್ರಮಕ್ಕೆ ಬರುತ್ತಾರೆ. ಅದನ್ನು ಕೇಳಿ ತಾರಾನಾಥರಿಗೆ ಬಾಲಕನ ಮೇಲೆ ಕರುಣೆಯು ಉಕ್ಕಿ ಬರುತ್ತದೆ. ಅವನನ್ನು ಪೋಲೀಸರ ವಶಕ್ಕೆ ಕೊಡಬಾರದೆಂದು ನಿರ್ಧರಿಸಿ ಪೋಲೀಸರು ಬರುವುದನ್ನೇ ಕಾಯುತ್ತಾ ಕುಳಿತರು. ಅವರು ಬಂದು ವಿಚಾರಿಸಿದ ನಂತರ ಆ ಬಾಲಕನನ್ನು ಕರೆದು "ಇವನು ಕಳ್ಳನಲ್ಲ, ತಪ್ಪು ಮಾಡಿಲ್ಲ. ಆದ್ದರಿಂದ ಇವನನ್ನು ಬಂಧಿಸುವ ಅವಶ್ಯಕತೆ ಇಲ್ಲ. ಏಕೆಂದರೆ ವಾಚನ್ನು ರಿಪೇರಿ ಮಾಡಿಸಲು ನಾನೇ ಅವನ ಕೈಲಿ ಕೊಟ್ಟು ಕಳಿಸಿದ್ದೆ. ನನ್ನ ಸಹೋದರನು ಮತ್ತು ಆ ವ್ಯಾಪಾರಿ ಇಬ್ಬರೂ ಸುಳ್ಳರೇ, ಅವರ ಮಾತನ್ನು ನಂಬಬೇಡಿ" ಎಂದು ಹೇಳಿ ಆ ಬಾಲಕನು ಶಿಕ್ಷೆ ಅನುಭವಿಸುವುದನ್ನು ತಪ್ಪಿಸುತ್ತಾರೆ.

ಇದರಿಂದ ಆ ಬಾಲಕನಿಗೆ ಅರಿವು ಉಂಟಾಗಿ ಪಶ್ಚಾತ್ತಾಪವಾಗುತ್ತದೆ. ಅವನು ಪಂಡಿತ ತಾರಾನಾಥರ ಪಾದಕ್ಕೆ ಬಿದ್ದು ಗೊಳೋ ಎಂದು ಅಳುತ್ತಾನೆ. "ಗುರುಗಳೇ ನನಗೆ ಶಿಕ್ಷೆ ಕೊಡಿಸಬೇಕಿತ್ತು" ಎನ್ನಲು ತಾರಾನಾಥರು "ಮಗು ತಪ್ಪು ಮಾಡುವುದು ಸಹಜ, ಈಗ ನಿನಗೆ ಅದರ ಅರಿವಾಯಿತಲ್ಲ ಅಷ್ಟೇ ಸಾಕು. ಚೆನ್ನಾಗಿ ಓದಿ ಚೆನ್ನಾಗಿ ಬದುಕು. ಅದೇ ನಿನಗೆ ಸಂತಸ ತರುತ್ತದೆ ಎಂದು ಅವನ ತಪ್ಪನ್ನು ಕ್ಷಮಿಸಿ ವಾಚನ್ನು ಕದ್ದ ಬಾಲಕನ ಮನಸ್ಸನ್ನು ಪರಿವರ್ತಿಸಿದರು.

**ಉ) ಸಂದರ್ಭದೊಡನೆ ವಿವರಿಸಿರಿ.**

1. "ನೀವು ನಿಶ್ಚಿಂತೆಯಿಂದ ಕುಳಿತು ಅರ್ಧತಾಸು ನನ್ನ ಸಂಗೀತವನ್ನು ಕೇಳಬೇಕು."

ಈ ವಾಕ್ಯವನ್ನು **ಜಿ. ಎಸ್. ಬಸವರಾಜಶಾಸ್ತ್ರಿ** ಅವರು ಬರೆದಿರುವ **'ಶಾಸ್ತ್ರಿ ಕನಸು'** ಎಂಬ ಕೃತಿಯಿಂದ ಆಯ್ದ **ಪರಿವರ್ತನೆ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಗಣೇಕಲ್ ಶಿವಯ್ಯನವರು ಕಳ್ಳರಿಗೆ ಹೇಳಿದ್ದಾರೆ. ಗಣೇಕಲ್ ಶಿವಯ್ಯನವರು ಸಂಭಾವನೆ ಪಡೆದು ಊರಿಗೆ ಮರಳುವಾಗ ದಾರಿಯಲ್ಲಿ ಕಳ್ಳರು ಗಂಟು ಬೀಳುತ್ತಾರೆ. ಆಗ ತಾತನು ಕಳ್ಳರನ್ನು ಕುರಿತು "ಅಯ್ಯಾ ನಿಮಗೆ ಹಣಬೇಕು,

ಅದು ನನ್ನಲ್ಲಿದೆ. ಅದನ್ನು ನಿಮಗೆ ಕೊಡುತ್ತೇನೆ, ಯಾವ ತಕರಾರೂ ಇಲ್ಲ. ಆದರೆ ನೀವು ನನ್ನ ಆಸೆಯನ್ನು ಪೂರೈಸಬೇಕು." ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

2. "ತಾತ ನಿಮ್ಮ ಹಣವು ನಮಗೆ ಬೇಡ. ನಿಮ್ಮ ಆಶೀರ್ವಾದವಷ್ಟೇ ಸಾಕು."

ಈ ವಾಕ್ಯವನ್ನು **ಜಿ. ಎಸ್. ಬಸವರಾಜಶಾಸ್ತ್ರಿ** ಅವರು ಬರೆದಿರುವ **'ಶಾಸ್ತ್ರಿ ಕನಸು'** ಎಂಬ ಕೃತಿಯಿಂದ ಆಯ್ದ **ಪರಿವರ್ತನೆ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕಳ್ಳರು ಗಣೇಕಲ್ ಶಿವಯ್ಯನವರಿಗೆ ಹೇಳುತ್ತಾರೆ. ಗಣೇಕಲ್ ಶಿವಯ್ಯನವರು ಕಳ್ಳರಿಗೆ ನೀವು ಹಾಡನ್ನು ಕೇಳಬೇಕು ಎಂದಾಗ ಕಳ್ಳರು ಒಪ್ಪಿಗೆಯನ್ನು ನೀಡುತ್ತಾರೆ. ಅವರ ಹಾಡನ್ನು ಕೇಳುತ್ತಾ ಕಳ್ಳರು ಮೈಮರೆಯುತ್ತಾರೆ. ನಂತರ ಅವರಿಗೆ ಎಚ್ಚರವಾದ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

3. "ಇವನು ಕಳ್ಳನಲ್ಲ. ತಪ್ಪು ಮಾಡಿಲ್ಲ. ಆದ್ದರಿಂದ ಇವನನ್ನು ಬಂಧಿಸುವ ಅವಶ್ಯಕತೆ ಇಲ್ಲ."

ಈ ವಾಕ್ಯವನ್ನು **ಜಿ. ಎಸ್. ಬಸವರಾಜಶಾಸ್ತ್ರಿ** ಅವರು ಬರೆದಿರುವ **'ಶಾಸ್ತ್ರಿ ಕನಸು'** ಎಂಬ ಕೃತಿಯಿಂದ ಆಯ್ದ **ಪರಿವರ್ತನೆ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ತಾರಾನಾಥರು ಪೊಲೀಸರಿಗೆ ಹೇಳುತ್ತಾರೆ. ಪೋಲೀಸರು ಬಾಲಕನನ್ನು ಅರೆಸ್ಟು ಮಾಡಲು ಆಶ್ರಮಕ್ಕೆ ಬರುತ್ತಾರೆ. ಅದನ್ನು ಕೇಳಿ ತಾರಾನಾಥರಿಗೆ ಬಾಲಕನ ಮೇಲೆ ಕರುಣೆಯು ಉಕ್ಕಿ ಬರುತ್ತದೆ. ಅವನನ್ನು ಪೊಲೀಸರ ವಶಕ್ಕೆ ಕೊಡಬಾರದೆಂದು ನಿರ್ಧರಿಸಿ ಪೊಲೀಸರು ಬರುವುದನ್ನೇ ಕಾಯುತ್ತಾ ಕುಳಿತರು. ಅವರು ಬಂದು ವಿಚಾರಿಸಿದ ನಂತರ ಆ ಬಾಲಕನನ್ನು ಕರೆದು ಈ ಮೇಲಿನ ಮಾತನ್ನು ಹೇಳುತ್ತಾರೆ.

4. "ಗುರುಗಳೇ ನನಗೆ ಶಿಕ್ಷೆ ಕೊಡಿಸಬೇಕಿತ್ತು."

ಈ ವಾಕ್ಯವನ್ನು **ಜಿ. ಎಸ್. ಬಸವರಾಜಶಾಸ್ತ್ರಿ** ಅವರು ಬರೆದಿರುವ **'ಶಾಸ್ತ್ರಿ ಕನಸು'** ಎಂಬ ಕೃತಿಯಿಂದ ಆಯ್ದ **ಪರಿವರ್ತನೆ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ವಾಚನ್ನು ಕದ್ದ ಬಾಲಕ ತಾರಾನಾಥರಿಗೆ ಹೇಳುತ್ತಾನೆ. ಪೊಲೀಸರು ಬಂದಾಗ ತಾರಾನಾಥರು "ಇವನು ಕಳ್ಳನಲ್ಲ, ತಪ್ಪು ಮಾಡಿಲ್ಲ. ಆದ್ದರಿಂದ ಇವನನ್ನು ಬಂಧಿಸುವ ಅವಶ್ಯಕತೆ ಇಲ್ಲ. ಎಂದಾಗ ಆ ಬಾಲಕನಿಗೆ ಅರಿವು ಉಂಟಾಗಿ ಪಶ್ಚಾತ್ತಾಪವಾಗುತ್ತದೆ. ಆಗ ಅವನು ಪಂಡಿತ ತಾರಾನಾಥರ ಪಾದಕ್ಕೆ ಬಿದ್ದು ಗೋಳೋ ಎಂದು ಅಳುತ್ತಾ ಈ ಮೇಲಿನ ಮಾತನ್ನು ಹೇಳುತ್ತಾನೆ.

**ಟಿಪ್ಪಣಿ :**

**ಬೈಜು :** 16 ನೇ ಶತಮಾನದಲ್ಲಿದ್ದ ಗ್ವಾಲಿಯರಿನ ಒಬ್ಬ ಪ್ರಸಿದ್ಧ ಗಾಯಕ. ಈತನ ಪೂರ್ಣ ಹೆಸರು ಬೈಜೂಬಾವರಾ. ತಾನಸೇನನ ಸಮಕಾಲೀನ. ಸಂಗೀತ ವಿದ್ವಾಂಸ. ಈತ ಸ್ವಾಮಿ ಹರಿದಾಸರ ಶಿಷ್ಯನಾಗಿದ್ದನು. ಬೈಜು ಮತ್ತು ತಾನಸೇನನಿಗೂ ಒಮ್ಮೆ ಸಂಗೀತ ಸ್ಪರ್ಧೆ ನಡೆಯಿತೆಂದು ಚಿಕ್ಕ ಕಥೆ ಇದೆ. ಆ ಸ್ಪರ್ಧೆಯಲ್ಲಿ ಅರಮನೆಯಿಂದ ದೂರ ಕಳುಹಿಸಿದ ಜಿಂಕೆಯನ್ನು ಬೈಜು ತನ್ನ ಗಾಯನದ ಮೂಲಕ ಆಕರ್ಷಿಸಿ ಹಿಂತಿರುಗುವಂತೆ ಮಾಡಿದನು ಎಂದು ಹೇಳಲಾಗುತ್ತದೆ.

**3. ಭಾಷಾಭ್ಯಾಸ :**

**ಅ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

1. ಸನ್ಮಾರ್ಗ : ಮಕ್ಕಳಾದ ನಾವು ಸನ್ಮಾರ್ಗದಲ್ಲಿ ನಡೆಯಬೇಕು.
2. ಮೈಮರೆ : ಕಳ್ಳರು ಸಂಗೀತವನ್ನು ಕೇಳುತ್ತಾ ಮೈಮರೆತರು.
4. ತಲೆದೂಗು: ಕಳ್ಳರು ತಾತನ ಸಂಗೀತಕ್ಕೆ ತಲೆದೂಗಿದರು.
5. ದಯಾಳು : ತಾರಾನಾತರು ದಯಾಳುವಂತರಾಗಿದ್ದರು.
6. ಪರೋಪಕಾರಿ: ನಮ್ಮ ತಂದೆಯವರು ಪರೋಪಕಾರಿಗಳಾಗಿದ್ದಾರೆ.
7. ವ್ಯಸನ : ನಾವು ಕಷ್ಟಕ್ಕೀಡಾದಾಗ ವ್ಯಸನ ಪಡಬೇಕಾಗುತ್ತದೆ.
8. ಪರಿವರ್ತನೆ : ಸಂಗೀತದಿಂದ ಕಳ್ಳರ ಮನಸ್ಸು ಪರಿವರ್ತನೆಗೊಂಡಿತು.

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥಗಳನ್ನು ಬರೆಯಿರಿ.**

ನಿಶ್ಚಿಂತೆ x ಚಿಂತೆ, ಸನ್ಮಾರ್ಗ x ದುರ್ಮಾರ್ಗ, ಅಸಾಧ್ಯ x ಸಾಧ್ಯ,

ಧೈರ್ಯ x ಅಧರ್ಮ, ವಿದೇಶಿ x ಸ್ವದೇಶಿ, ವಿದ್ಯಾವಂತ x ಅವಿದ್ಯಾವಂತ.

**ಇ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

1. ಪರೋಪಕಾರಿ = ಪರ + ಉಪಕಾರ, 2. ತಲೆದೂಗು = ತಲೆ + ತೂಗು,

3. ಒಟ್ಟುಗೂಡಿ = ಒಟ್ಟು + ಕೂಡಿ, 4. ಸಹೋದರ = ಸಹ + ಉದರ.

**ಈ) ಕೆಳಗಿನ ಮಾದರಿಯಂತೆ 'ವಂತ' ಪ್ರತ್ಯಯ ಸೇರಿರುವ ಪದಗಳನ್ನು ಪಟ್ಟಿಮಾಡಿರಿ.**

**ಮಾದರಿ :** ಸತ್ಯ + ವಂತ = ಸತ್ಯವಂತ, ನೀತಿ + ವಂತ = ನೀತಿವಂತ, ಗುಣ + ವಂತ =ಗುಣವಂತ,
ಹಣ + ವಂತ= ಹಣವಂತ, ಬುದ್ಧಿ + ವಂತ= ಬುದ್ಧಿವಂತ, ಸಿರಿ + ವಂತ = ಸಿರಿವಂತ,
ಆರೋಗ್ಯ + ವಂತ =ಆರೋಗ್ಯವಂತ, ಐಶ್ವರ್ಯ + ವಂತ = ಐಶ್ವರ್ಯವಂತ

**4. ಸೈದ್ಧಾಂತಿಕ ವ್ಯಾಕರಣ :**

**ವಚನಗಳು :** ವ್ಯಾಕರಣ ಪರಿಭಾಷೆಯಲ್ಲಿ 'ವಚನ' ಎಂದರೆ ಸಂಖ್ಯೆ. ಕನ್ನಡ ಭಾಷೆಯಲ್ಲಿ ಏಕವಚನ ಮತ್ತು ಬಹುವಚನ ಎಂಬುದಾಗಿ ಎರಡು ವಿಧಗಳಿವೆ.

**1. ಏಕವಚನ :** ಒಂದು ಎಂದು ಹೇಳಲಾಗುವ ಶಬ್ದಗಳೆಲ್ಲವೂ 'ಏಕವಚನ' ಎಂದು ಕರೆಸಿಕೊಳ್ಳುತ್ತವೆ.

ಉದಾ : ಹುಡುಗ, ಹುಡುಗಿ, ಅರಸು, ಮರ, ಅಣ್ಣ, ನೀನು, ಅವನು, ಅವಳು.

**2. ಬಹುವಚನ :** ಒಂದಕ್ಕಿಂತ ಹೆಚ್ಚು ಎಂದು ಹೇಳಲಾಗುವ ಶಬ್ದಗಳೆಲ್ಲವೂ 'ಬಹುವಚನ' ಎಂದು ಕರೆಸಿಕೊಳ್ಳುತ್ತವೆ.

**ಬಹುವಚನ ಪದಗಳನ್ನು ಬರೆಯಿರಿ.**

ಉದಾ : ಮನೆ + ಗಳು = ಮನೆಗಳು

ಹುಡುಗ + ಅರು = ಹುಡುಗರು

ಅಣ್ಣ + ಅಂದಿರು = ಅಣ್ಣಂದಿರು

**ವಾಕ್ಯ ರಚನೆ :**

ಕರ್ತೃ, ಕರ್ಮ ಹಾಗೂ ಕ್ರಿಯಾ ಪದಗಳಿಂದ ಕೂಡಿದ ಪದಸಮೂಹವನ್ನು 'ವಾಕ್ಯ' ಎಂದು ಹೇಳಲಾಗುತ್ತದೆ.

**ಈ ಕೆಳಗಿನ ವಾಕ್ಯಗಳಲ್ಲಿರುವ ಕರ್ತೃ, ಕರ್ಮ ಹಾಗೂ ಕ್ರಿಯಾ ಪದಗಳನ್ನು ಗುರುತಿಸಿರಿ.**

| ಕ್ರ.ಸಂ. | ಕರ್ತೃಪದ | ಕರ್ಮಪದ | ಕ್ರಿಯಾಪದ |
|---|---|---|---|
| 1 | ಇಬ್ರಾಹಿಂ | ಬಾವುಟವನ್ನು | ಹಾರಿಸಿದನು |
| 2 | ರೀಟಾ | ಅಡುಗೆಯನ್ನು | ಮಾಡಿದಳು. |
| 3 | ರಾಮ | ಪೂಜೆಯನ್ನು | ಮಾಡಿದನು. |
| 4 | ಮಾನ್‌ಸಿಂಗ್ | ಹಾಡನ್ನು | ಹಾಡಿದನು. |

## 7. ಒಂದು ಮರದ ಬೆಲೆ – ಹಾ. ಮಾ. ನಾಯಕ

**ಕೃತಿಕಾರರ ಪರಿಚಯ :**

- **ಹಾ.ಮಾ. ನಾಯಕ** ಅವರ ಪೂರ್ಣ ಹೆಸರು ಹಾರೋಗದ್ದೆ ಮಾನಪ್ಪನಾಯಕ. ಇವರು ಹಾ.ಮಾ.ನಾ. ಎಂದೇ ಪ್ರಸಿದ್ಧರಾಗಿದ್ದಾರೆ. ಇವರು 1931ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಹಾರೋಗದ್ದೆ ಎಂಬಲ್ಲಿ ಜನಿಸಿದರು.
- ಇವರು ಸಾಹಿತ್ಯ ಸಲ್ಲಾಪ, ಸಂಚಯ, ಸಂವಾದ, ಸಂಪದ, ಸಾಂಪ್ರತ, ಸ್ಮರಣ, ಸಮೂಹ, ಸೃಜನ, ಸೂಲಂಗಿ, ಬಾಳ್ನೋಟಗಳು ಇನ್ನು ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಇವರಿಗೆ ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಲಭಿಸಿವೆ.
- ಪ್ರಸ್ತುತ 'ಒಂದು ಮರದ ಬೆಲೆ' ಲೇಖನವನ್ನು ಅವರ **'ಸಂಪದ'** ಕೃತಿಯಿಂದ ಆಯ್ದುಕೊಳ್ಳಲಾಗಿದೆ.

**ಅಭ್ಯಾಸ**

**I. ಪದಗಳ ಅರ್ಥ ತಿಳಿಯಿರಿ :**

**ಅಂತರ್ಜಲ** – ಭೂಮಿಯ ಆಳದಲ್ಲಿರುವ ನೀರು. **ಕೃತ್ಯ** – ಕೆಲಸ

**ಗೊಡವೆ** – ಉಸಾಬರಿ; ಗೋಜು. **ಜಾಮೀನು** – ಹೊಣೆ; ಒತ್ತೆ.

**ಡಾಲರ್** – ಅಮೆರಿಕಾದ ರೂಪಾಯಿ
**ತೆತ್ತು** (ಕ್ರಿ) – ನೀಡಿ; ಕೊಟ್ಟು.
**ದೂರು** – ಅಹವಾಲು; ಮೊರೆ.
**ದೇಣಿಗೆ** – ಚಂದಾ; ವಂತಿಕೆ; ದಾನ.
**ಲಭಿಸು** (ಕ್ರಿ) – ದೊರಕು; ಪ್ರಾಪ್ತವಾಗು.
**ಸಸ್ಯನಾಶಕ** – ಗಿಡಗಳನ್ನು ಕೊಲ್ಲುವ ರಾಸಾಯನಿಕ.
**ತೊಗಟೆ** – ಸಿಪ್ಪೆ
**ದಿಮ್ಮಿ** – ಕತ್ತರಿಸಿದ ಮರ; ಕೊರಡು.
**ದೃಷ್ಟಿಕೋನ** – ನೋಡುವ ರೀತಿ
**ಪ್ರವಾಹ** – ನೀರು ತುಂಬಿ ಹರಿಯುವುದು.
**ವೃಕ್ಷ** – ಮರ; ತರು.
**ಸಜೆ** – ಶಿಕ್ಷೆ; ಸೆರೆಮನೆವಾಸ; ದಂಡನೆ.

**2. ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಪಾಲ್‌ಕೆಲನ್ ಮಾಡಿದ ಅಪರಾಧವೇನು?
ಪಾಲ್‌ಕೆಲನ್ 'ಐನೂರು ವರ್ಷ ಹಳೆಯದಾದ ಮರವೊಂದನ್ನು ಸಸ್ಯನಾಶಕ ಬಳಸಿ ಕೊಂದದ್ದು ಅಪರಾಧವಾಗಿದೆ.

2. ಪಾಲ್‌ಕೆಲನ್‌ಗೆ ಅಮೇರಿಕೆಯ ನ್ಯಾಯಾಲಯ ಯಾವ ಶಿಕ್ಷೆ ನೀಡಿತು?
ಪಾಲ್ ಕೆಲೆನ್‌ಗೆ ಅಮೇರಿಕೆಯ  ಜಿಲ್ಲಾ ನ್ಯಾಯಾಲಯ ಒಂಬತ್ತು ವರ್ಷ ಸಜೆ ಹಾಗೂ ಒಂದು ಸಾವಿರ ಡಾಲರ್ ದಂಡ ವಿಧಿಸಿದೆ!.

3. ಮರವನ್ನು ಉಳಿಸಲು ಹೌಸ್ಟನ್ ನಗರಪಾಲಿಕೆಗೆ ಎಷ್ಟು ದೇಣಿಗೆ ಬಂತು?
ಮರವನ್ನು ಉಳಿಸಲು ಅಗತ್ಯವಾದ ಕ್ರಮ ಕೈಗೊಳ್ಳುವ ಸಲುವಾಗಿ ಹೌಸ್ಟನ್ ನಗರಪಾಲಿಕೆಗೆ ಒಂದು ಲಕ್ಷಕ್ಕೂ ಹೆಚ್ಚು ಡಾಲರ್‌ಗಳ ದೇಣಿಗೆ ಬಂದಿದೆ.

4. ಭಾರತ ಹಾಗೂ ಅಮೇರಿಕದ ಭಾರತ ಸಂಸ್ಕೃತಿಗಳಿಗೆ ಎಷ್ಟು ವರ್ಷಗಳ ಇತಿಹಾಸವಿದೆ?
ಭಾರತದ ಸಂಸ್ಕೃತಿಗೆ ಎರಡು ಸಾವಿರ ವರ್ಷಗಳ ಇತಿಹಾಸವಿದೆ ಹಾಗೂ ಅಮೇರಿಕದ ಸಂಸ್ಕೃತಿಗೆ ಇನ್ನೂರು ವರ್ಷಗಳ ಇತಿಹಾಸವಿದೆ.

5.ಅಮೇರಿಕದ ಜನ ಮರಗಳನ್ನು ಉಳಿಸಲು ಏಕೆ ಮುಂದಾಗುತ್ತಾರೆ?
ಅಮೇರಿಕಾದ ಜನರಿಗೆ ಭವಿಷ್ಯದ ಬಗ್ಗೆ ಚಿಂತೆಯಿದೆ. ಮರದ ಬೆಲೆ ಅವರಿಗೆ ತಿಳಿದಿದೆ. ಈ ಕಾರಣದಿಂದ ಮರಗಳನ್ನು ಉಳಿಸಲು ಮುಂದಾಗುತ್ತಾರೆ.

6. ಹಾ. ಮಾ. ನಾಯಕರು ಹೇಳುವಂತೆ ಎಲ್ಲವನ್ನೂ ಮೀರಿದ ಮರದ ಬೆಲೆ ಯಾವುದು?
ಹಾ. ಮಾ. ನಾಯಕರು ಹೇಳುವಂತೆ ಮನುಕುಲವನ್ನು ಕಾಪಾಡಲು ಮರಗಳಿಲ್ಲದೆ ಸಾಧ್ಯವಿಲ್ಲ ಎಂಬ ಸತ್ಯವೇ ಆ ಬೆಲೆ!

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಮರವನ್ನು ಉಳಿಸಲು ಅಮೇರಿಕಾದ ವೃಕ್ಷಪ್ರೇಮಿಗಳು ಯಾವ ರೀತಿ ಸ್ಪಂದಿಸಿದರು?
ಮರವನ್ನು ಉಳಿಸಲು, ಆ ಮರಕ್ಕೆ ಬೇಗನೆ ಪೂರ್ಣ ಆರೋಗ್ಯ ಲಭಿಸಲೆಂದು ಹಾರೈಸಿ ಸಾವಿರಾರು ಜನ ವೃಕ್ಷಪ್ರೇಮಿಗಳು ಮರದ ಬುಡದಲ್ಲಿ ಶುಭಾಶಯ ಪತ್ರಗಳನ್ನಿಡುತ್ತಿದ್ದಾರೆ ; ಮರಕ್ಕೆ ದೀರ್ಘಾಯಸ್ಸು ಕೋರಿ ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ.'

2. ಬೆಂಗಳೂರಿನಲ್ಲಿ ಗಣ್ಯವ್ಯಕ್ತಿಯೊಬ್ಬರು ತಮ್ಮ ಮನೆಯ ಬಳಿಯಲ್ಲಿನ ಮರ ತೆಗೆಸಲು ಹೇಗೆ ಪ್ರಯತ್ನಿಸಿದರು?
'ಬೆಂಗಳೂರು ಮಹಾನಗರದಲ್ಲಿ ಒಂದು ಹಳೆಯ ಆಲದ ಮರ. ಅದರ ಪಕ್ಕದಲ್ಲಿಯೇ ಗಣ್ಯ ವ್ಯಕ್ತಿಯೊಬ್ಬರ ಮನೆ. ಈ ಮರದಿಂದ ತಮಗೆ ತೊಂದರೆಯಾಗುತ್ತಿದೆ ಎಂದು ಆ ಪ್ರಭಾವಿ ಗಣ್ಯರ ದೂರು. ಸಂಬಂಧಪಟ್ಟ ಆಡಳಿತ ವರ್ಗದವರು ಈಗ ಆ ಮರವನ್ನು ಕಡಿದುಹಾಕಲು ಯೋಚಿಸುತ್ತಿದ್ದಾರೆ' ಇಷ್ಟರಲ್ಲಿಯೇ ಆ ಮರವನ್ನು ಕಡಿದು ಉರುಳಿಸಿದ್ದರೆ ಆಶ್ಚರ್ಯವೇನೂ ಇಲ್ಲ!

3. ಭಾರತದಲ್ಲಿ ಮರಗಳ ನಾಶ ಹೇಗೆ ನಿರಾತಂಕವಾಗಿ ನಡೆಯುತ್ತಿದೆ?
ನಮ್ಮಲ್ಲಿ ಮರ ಕತ್ತರಿಸುವುದು ತೀರ ಸಾಮಾನ್ಯವಾದ ವಿಚಾರ. ಕಾನೂನಿಗೆ ವಿರುದ್ಧವಾಗಿದ್ದರೂ, ಮರ ಕತ್ತರಿಸಲು ನಮ್ಮ ಜನ ಮುಂದಾಗುತ್ತಾರೆ. ರಾಜ್ಯದ, ರಾಷ್ಟ್ರದ ಹೆದ್ದಾರಿಗಳಲ್ಲಿಯೇ, ಹಾಡುಹಗಲಿನಲ್ಲಿ ಈ ಕೊಲೆಗಳು ನಡೆಯುವುದನ್ನು ನಾವೆಲ್ಲರೂ ನಿತ್ಯ ನೋಡುತ್ತಿದ್ದೇವೆ. ಕೆಲವು ಕೊಲೆಗಳು ನೇರವಾಗಿಯೇ ಬಹಿರಂಗವಾಗಿಯೇ ನಡೆಯುತ್ತವೆ. ಮತ್ತೆ ಕೆಲವು ಕೊಲೆಗಳು ಮೋಸದಿಂದ, ಉಪಾಯದಿಂದ ನಡೆಯುತ್ತವೆ.

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಆರೋಗ್ಯವಂತ ಮರವೊಂದರ ಬೆಲೆ ಏನೆಂಬುದನ್ನು ವಿಜ್ಞಾನಿಯೊಬ್ಬರು ಹೇಗೆ ಲೆಕ್ಕ ಹಾಕಿದ್ದಾರೆ?
ಐವತ್ತು ವರ್ಷ ತುಂಬಿದ ಆರೋಗ್ಯವಂತ ಮರವೊಂದರ ಬೆಲೆ ಏನು ಎಂಬುದನ್ನು ವಿಜ್ಞಾನಿಯೊಬ್ಬರು ಲೆಕ್ಕ ಹಾಕಿ ಹೇಳಿದ್ದಾರೆ. ಅವರ ಪ್ರಕಾರ ಅಂಥ ಮರವೊಂದರ ಬೆಲೆ ಹದಿನಾರು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಎಂದರೆ ಯಾರು ನಂಬುತ್ತಾರೆ? ಈ ವಿವರ ನೋಡಿ–ಒಂದು ಮರ ಉತ್ಪಾದಿಸುವ ಆಮ್ಲಜನಕದ ಬೆಲೆ ಎರಡೂವರೆ ಲಕ್ಷ; ಅದು ಹೀರಿಕೊಳ್ಳುವ ಇಂಗಾಲ ಜನಕದ ಬೆಲೆ ಐದು ಲಕ್ಷ; ಮಣ್ಣಿನ ಸವೆತ ತಡೆಯುವುದರ ಬೆಲೆ ಎರಡೂವರೆ ಲಕ್ಷ; ನೀರು ಭೂಮಿಯಲ್ಲಿ ಇಂಗಿ ಅಂತರ್ಜಲ ಹೆಚ್ಚಿ ಪ್ರವಾಹವನ್ನು ತಡೆಗಟ್ಟುವುದರ ಬೆಲೆ ಮೂರು ಲಕ್ಷ; ಆಹಾರ ಹಾಗೂ ಗೊಬ್ಬರದ

ಬೆಲೆ ಅರ್ಧ ಲಕ್ಷ; ಪಶುಪಕ್ಷಿಗಳಿಗೆ, ಕ್ರಿಮಿಕೀಟಗಳಿಗೆ ಆಶ್ರಯ ಹಾಗೂ ರಕ್ಷಣೆ ನೀಡುವುದರ ಬೆಲೆ ಎರಡೂವರೆ ಲಕ್ಷ. ಇದರ ಮೇಲೆ ಬೇಕಾದರೆ ನೀವು ದಿಮ್ಮಿಗಳ ಬೆಲೆ ಏನಾಗುತ್ತದೆಂಬುದನ್ನು ಲೆಕ್ಕ ಹಾಕಿಕೊಳ್ಳಬಹುದು.

2. ಮರಗಳ ಸಂರಕ್ಷಣೆಯಲ್ಲಿ ಭಾರತ ಹಾಗೂ ಅಮೆರಿಕಾದ ಜನರ ನಡುವೆ ಇರುವ ವ್ಯತ್ಯಾಸಗಳೇನು?

'ಐನೂರು ವರ್ಷ ಹಳೆಯದಾದ ಮರವೊಂದನ್ನು ಸಸ್ಯನಾಶಕ ಬಳಸಿ ಕೊಂದ ಅಪರಾಧಕ್ಕಾಗಿ, ಅಮೆರಿಕೆಯ ಪ್ರಜೆಯಾದ ಪಾಲ್ ಕೆಲೆನ್ ಎಂಬುವವನಿಗೆ ಜಿಲ್ಲಾ ನ್ಯಾಯಾಲಯ ಒಂಬತ್ತು ವರ್ಷ ಸಜೆ ಹಾಗೂ ಒಂದು ಸಾವಿರ ಡಾಲರ್ ದಂಡ ವಿಧಿಸಿದೆ! ಮರವನ್ನು ಉಳಿಸಲು ಅಗತ್ಯವಾದ ಕ್ರಮ ಕೈಗೊಳ್ಳುವ ಸಲುವಾಗಿ ಹೌಸ್ಟನ್ ನಗರಪಾಲಿಕೆಗೆ ಒಂದು ಲಕ್ಷಕ್ಕೂ ಹೆಚ್ಚು ಡಾಲರ್‌ಗಳ ದೇಣಿಗೆ ಬಂದಿದೆ. ಆದರೇನು? ಮರ ಹೆಚ್ಚು ಕಾಲ ಬದುಕುವ ಸಾಧ್ಯತೆ ಇಲ್ಲ. ಆ ಮರಕ್ಕೆ ಬೇಗನೆ ಪೂರ್ಣ ಆರೋಗ್ಯ ಲಭಿಸಲೆಂದು ಹಾರೈಸಿ ಸಾವಿರಾರು ಜನ ವೃಕ್ಷಪ್ರೇಮಿಗಳು ಮರದ ಬುಡದಲ್ಲಿ ಶುಭಾಶಯ ಪತ್ರಗಳನ್ನಿಡುತ್ತಿದ್ದಾರೆ ; ಮರಕ್ಕೆ ದೀರ್ಘಾಯಸ್ಸು ಕೋರಿ ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ. ಸಾಯುತ್ತಿರುವ ಮರವನ್ನು ಉಳಿಸುವ ಸಲುವಾಗಿ ಜನರು ಪ್ರಾರ್ಥನೆ ಮಾಡುತ್ತಾರೆ, ಮಾತ್ರವಲ್ಲ ತಮ್ಮ ಕೈಲಾದುದನ್ನೆಲ್ಲ ಮಾಡುತ್ತಾರೆ–ಇನ್ನೂರು ವರ್ಷಗಳ ಸಂಸ್ಕೃತಿಯ ಅಮೆರಿಕಾ ದೇಶದಲ್ಲಿ!

ಯಾರಿಗೋ ತೊಂದರೆಯಾಗುತ್ತಿದೆ ಎಂಬುದನ್ನು ಕೇಳಿ, ಆ ತೊಂದರೆ ಯಾವ ಬಗೆಯದು ಎಂಬುದನ್ನು ತಿಳಿಯುವ ಗೊಡವೆಗೇ ಹೋಗದೆ, ಅನೇಕ ಕಾಲ ಬದುಕಬಹುದಾದ ಮರವನ್ನು ಕತ್ತರಿಸಲು ಮುಂದಾಗುತ್ತಾರೆ, ಎರಡು ಸಾವಿರ ವರ್ಷಗಳಿಗೂ ಮಿಕ್ಕ ಸಂಸ್ಕೃತಿಯ ನಮ್ಮ ದೇಶದಲ್ಲಿ! ಎರಡೂ ತೀರ ಭಿನ್ನವಾದ ದೃಷ್ಟಿಕೋನಗಳು. ಆ ಅಮೇರಿಕೆಯ ಜನರಲ್ಲಿ ತಮ್ಮ ಭವಿಷ್ಯದಲ್ಲಿ ಆಸಕ್ತಿಯಿದೆ. ಈ ನಮಗಾದರೋ ಇಂದಷ್ಟೇ ಮುಖ್ಯವಾದದ್ದು. ನಾಳೆ ಅಲ್ಲ. ನಮ್ಮಲ್ಲಿ ಮರ ಕತ್ತರಿಸುವುದು ತೀರ ಸಾಮಾನ್ಯವಾದ ವಿಚಾರ. ಕಾನೂನಿಗೆ ವಿರುದ್ಧವಾಗಿದ್ದರೂ, ಮರ ಕತ್ತರಿಸಲು ನಮ್ಮ ಜನ ಮುಂದಾಗುತ್ತಾರೆ. ರಾಜ್ಯದ, ರಾಷ್ಟ್ರದ ಹೆದ್ದಾರಿಗಳಲ್ಲಿಯೇ, ಹಾಡುಹಗಲಿನಲ್ಲಿ ಈ ಕೊಲೆಗಳು ನಡೆಯುವುದನ್ನು ನಾವೆಲ್ಲರೂ ನಿತ್ಯ ನೋಡುತ್ತಿದ್ದೇವೆ. ಕೆಲವು ಕೊಲೆಗಳು ನೇರವಾಗಿಯೇ ಬಹಿರಂಗವಾಗಿಯೇ ನಡೆಯುತ್ತವೆ. ಮತ್ತೆ ಕೆಲವು ಕೊಲೆಗಳು ಮೋಸದಿಂದ, ಉಪಾಯದಿಂದ ನಡೆಯುತ್ತವೆ.

**ಈ) ಸಂದರ್ಭದೊಡನೆ ವಿವರಿಸಿರಿ.**

1. ಮರದ ಬುಡದಲ್ಲಿ ಶುಭಾಶಯ ಪತ್ರಗಳನ್ನಿಡುತ್ತಿದ್ದಾರೆ.

ಈ ವಾಕ್ಯವನ್ನು **ಹಾ. ಮಾ. ನಾಯಕ** ಅವರು ಬರೆದಿರುವ **'ಸಂಪದ'** ಎಂಬ ಕೃತಿಯಿಂದ ಆಯ್ದ **ಒಂದು ಮರದ ಬೆಲೆ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಲೇಖಕರು ಹೇಳಿದ್ದಾರೆ. ಅಮೇರಿಕೆಯ ಜನರು ಮರವನ್ನು ಉಳಿಸಲು, ಆ ಮರಕ್ಕೆ ಬೇಗನೆ ಪೂರ್ಣ ಆರೋಗ್ಯ ಲಭಿಸಲೆಂದು ಹಾರೈಸಿ ಸಾವಿರಾರು ಜನ ವೃಕ್ಷಪ್ರೇಮಿಗಳು ಮರದ ಬುಡದಲ್ಲಿ ಶುಭಾಶಯ ಪತ್ರಗಳನ್ನಿಡುತ್ತಿದ್ದಾರೆ; ಮರಕ್ಕೆ ದೀರ್ಘಾಯಸ್ಸು ಕೋರಿ ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ.' ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

2. ನಮ್ಮಲ್ಲಿ ಮರ ಕತ್ತರಿಸುವುದು ತೀರಾ ಸಾಮಾನ್ಯ ವಿಚಾರ.

ಈ ವಾಕ್ಯವನ್ನು **ಹಾ. ಮಾ. ನಾಯಕ** ಅವರು ಬರೆದಿರುವ **'ಸಂಪದ'** ಎಂಬ ಕೃತಿಯಿಂದ ಆಯ್ದ **ಒಂದು ಮರದ ಬೆಲೆ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಲೇಖಕರು ಹೇಳಿದ್ದಾರೆ. ಅಮೇರಿಕಾದಲ್ಲಿ ಐನೂರು ವರ್ಷದ ಹಳೆಯ ಮರವನ್ನು ಉಳಿಸಲು ಅಗತ್ಯವಾದ ಕ್ರಮ ಕೈಗೊಳ್ಳುವ ಸಲುವಾಗಿ ಹೌಸ್ಟನ್ ನಗರಪಾಲಿಕೆಗೆ ಒಂದು ಲಕ್ಷಕ್ಕೂ ಹೆಚ್ಚು ಡಾಲರ್‌ಗಳ ದೇಣಿಗೆ ಬಂದಿದೆ. ಆ ಅಮೇರಿಕೆಯ ಜನರಲ್ಲಿ ತಮ್ಮ ಭವಿಷ್ಯದಲ್ಲಿ ಆಸಕ್ತಿಯಿದೆ. ಈ ನಮಗಾದರೋ ಇಂದಷ್ಟೇ ಮುಖ್ಯವಾದದ್ದು. ನಾಳೆ ಅಲ್ಲ, ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

3. ಮನುಕುಲವನ್ನು ಕಾಪಾಡಲು ಮರಗಳಿಲ್ಲದೆ ಸಾಧ್ಯವಿಲ್ಲ.

ಈ ವಾಕ್ಯವನ್ನು **ಹಾ. ಮಾ. ನಾಯಕ** ಅವರು ಬರೆದಿರುವ **'ಸಂಪದ'** ಎಂಬ ಕೃತಿಯಿಂದ ಆಯ್ದ **ಒಂದು ಮರದ ಬೆಲೆ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಲೇಖಕರು ಹೇಳಿದ್ದಾರೆ. ವಿಜ್ಞಾನಿಯೊಬ್ಬರು ಐವತ್ತು ವರ್ಷ ತುಂಬಿದ ಆರೋಗ್ಯವಂತ ಮರವೊಂದರ ಬೆಲೆ ಹದಿನಾರು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಎಂದು ಹೇಳಿದ್ದಾರೆ. ಅದರಿಂದ ನಮಗೆ ಬಹಳ ಉಪಯೋಗವಿದೆ. ಅದರಲ್ಲೂ ಎಲ್ಲವನ್ನು ಮೀರಿದ ಒಂದು ಬೆಲೆಯಿದೆ ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

**3. ಭಾಷಾಭ್ಯಾಸ :**

**ಅ) ಕೆಳಗಿನ ಪದಗಳಿಗೆ ಸಮಾನಾರ್ಥಕಗಳನ್ನು ಬರೆಯಿರಿ.**

ಮರ – ವೃಕ್ಷ; ತರು, ಭೂಮಿ – ಧರೆ; ವಸುಧೆ, ದೇಣಿಗೆ – ಚಂದಾ; ದಾನ, ಸಜೆ – ಶಿಕ್ಷೆ; ದಂಡನೆ.

**ಆ) ಕೆಳಗಿನ ಪದಗಳಿಗೆ ತತ್ಸಮ ತದ್ಭವ ರೂಪ ಬರೆಯಿರಿ.**

ವರ್ಷ – ವರುಷ, ದೃಷ್ಟಿ – ದಿಟ್ಟಿ, ಆಶ್ಚರ್ಯ– ಅಚ್ಚರಿ.

**ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

1. ದೃಷ್ಟಿಕೋನ : ನಮ್ಮ ಗುರಿ ಉತ್ತಮ ದೃಷ್ಟಿಕೋನ ಹೊಂದಿರಬೇಕು.
2. ಸಂಸ್ಕೃತಿ : ಭಾರತೀಯ ಸಂಸ್ಕೃತಿ ಅತೀ ಪ್ರಾಚೀನವಾದುದು.
3. ಪ್ರಾರ್ಥನೆ : ನಾವು ಪ್ರತಿದಿನ ದೇವರಿಗೆ ಪ್ರಾರ್ಥನೆ ಸಲ್ಲಿಸುತ್ತೇವೆ.
4. ದೇಣಿಗೆ : ನಾವು ದೇವಸ್ಥಾನಕ್ಕೆ ದೇಣಿಗೆ ಕೊಡುತ್ತೇವೆ.
5. ಸುದ್ದಿ : ಪತ್ರಿಕೆಗಳಿಂದ ಸುದ್ಧಿಸಮಾಚಾರಗಳನ್ನು ತಿಳಿಯುತ್ತೇವೆ.

**ಈ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

ಬಹಿರಂಗ x ಅಂತರಂಗ, ನಿಧಾನ x ವೇಗ, ಆರೋಗ್ಯ x ಅನಾರೋಗ್ಯ,

ಉಳಿಸು x ಅಳಿಸು, ಆಸಕ್ತಿ x ನಿರಾಸಕ್ತಿ

**ಉ) ಕೆಳಗಿನ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.**

**ಮಾದರಿ :** ದೀರ್ಘಾಯುಸ್ಸು = ದೀರ್ಘ + ಆಯುಸ್ಸು

1. ಪತ್ರಗಳನ್ನಿಡು = ಪತ್ರಗಳನ್ನು + ಇಡು
2. ಸಾವಿರಾರು = ಸಾವಿ + ಆರು
3. ಶುಭಾಶಯ = ಶುಭ + ಆಶಯ
4. ಮರವೊಂದು = ಮರ + ಒಂದು
5. ವಿಜ್ಞಾನಿಯೊಬ್ಬ = ವಿಜ್ಞಾನಿ + ಒಬ್ಬ

**ಊ) 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆದಿದೆ.**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| 1) ಅಲ್ಪವಿರಾಮ | ಇ) , |
| 2) ಪ್ರಶ್ನಾರ್ಥಕ | ಅ) ? |
| 3) ಆಶ್ಚರ್ಯ | ಉ) ! |
| 4) ಅರ್ಧವಿರಾಮ | ಆ) ; |
| 5) ಉದ್ಧರಣ | ಈ) "....." |

**4. ಸೈದ್ಧಾಂತಿಕ ವ್ಯಾಕರಣ :**

**1. ಲಿಂಗಗಳು :**

ಕನ್ನಡ ಭಾಷೆಯಲ್ಲಿ ಮೂರು ಲಿಂಗಗಳನ್ನು ಗುರುತಿಸುತ್ತೇವೆ. ಅವುಗಳೆಂದರೆ

1. ಪುಲ್ಲಿಂಗ 2. ಸ್ತ್ರೀಲಿಂಗ 3. ನಪುಂಸಕಲಿಂಗ

**1. ಪುಲ್ಲಿಂಗ :**

**ಉದಾ :** ಮುದುಕ, ಶಂಕರ, ಅವನು, ಚಿಕ್ಕಪ್ಪ, ತಂದೆ, ಅಣ್ಣ, ಮಾವ, ಸಚಿವ, ಕವಿ, ಒಳ್ಳೆಯವ, ಜಾಣ, ಶಕ್ತಿವಂತ, ಗಟ್ಟಿಗ.

**2. ಸ್ತ್ರೀಲಿಂಗ :**

**ಉದಾ :** ದೊಡ್ಡವಳು, ಅಕ್ಕ, ಅರಸಿ, ರಾಣಿ, ಚೆಲುವೆ, ತಾಯಿ, ಒಳ್ಳೆಯವಳು, ಸ್ನೇಹಿತೆ, ಮಗಳು, ಸಹೋದರಿ, ತಂಗಿ, ಗೆಳತಿ, ಸಚಿವೆ, ಬಾಲಕಿ, ಶಿಕ್ಷಕಿ.

**3. ನಪುಂಸಕಲಿಂಗ :**

**ಉದಾ :** ಮಗು, ಹೂವು, ಹಣ್ಣು, ಕಾಯಿ, ಮರ, ಹಾವು, ಇಲಿ, ಎತ್ತು, ಹುಲಿ, ಕಲ್ಲು, ಮಣ್ಣು, ನದಿ, ಬೆಟ್ಟ, ಪುಸ್ತಕ, ಆಕಾಶ, ಕತ್ತೆ, ಕುದುರೆ, ಜನ.

# 8. ಆಸನದ ಮೇಲೆ ಆಸನ – ರಾಶಿ (ಡಾ॥ ಎಂ. ಶಿವರಾಂ)

**ಕೃತಿಕಾರರ ಪರಿಚಯ :**

- ‘ರಾಶಿ’ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ **ಡಾ. ಎಂ. ಶಿವರಾಮ್** ಅವರು 1905 ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು.
- ಇವರು ನಗು ಸಮಾಜ, ನಗು ದರ್ಬಾರಿಗಳು, ನಗು ಸಂಸಾರಿಗಳು, ಒಂದಾನೊಂದು ಕಾಲದಲ್ಲಿ, ಮನೋನಂದನ, ಮನಮಂಥನ ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಲಭಿಸಿದೆ.
- ‘ಬೆಸ್ಟ್ ಆಫ್ ರಾಶಿ’ ಎಂಬ ಸಂಕಲನದಿಂದ ‘ಆಸನದ ಮೇಲೆ ಆಸನ’ ಗದ್ಯವನ್ನು ಆಯ್ಕೆ ಮಾಡಲಾಗಿದೆ.

**ಅಭ್ಯಾಸ**

**I. ಪದಗಳ ಅರ್ಥ ತಿಳಿಯಿರಿ :**

**ಆಸನ** – ಯೋಗಾಸನ; ದೇಹದ ಭಂಗಿಗಳು.
**ಉಸ್ತಾದ್** – ಗರಡಿಯ ಗುರು
**ದಮ್ಮು** – ಮೇಲುಸಿರು; ಉಬ್ಬಸ.
**ಪೈಲ್ವಾನ** – ಜಟ್ಟಿ; ಕುಸ್ತಿ ಮಾಡುವವ; ಬಲಶಾಲಿ.
**ಮದ್ದು** – ಔಷಧ
**ಸಂತುಷ್ಟಿ** – ತೃಪ್ತಿ
**ಉಂಗುಷ್ಠ** – ಅಂಗುಷ್ಠ; ಹೆಬ್ಬೆರಳು.
**ದಫ್ತರ** – ಫೈಲು; ಕಡತ; ದಾಖಲೆ.
**ಪಶ್ಚಾತ್ತಾಪ** – ದುಃಖ
**ಬೊಂಬೆ** – ಚಿತ್ರ; ಪುತ್ಥಳಿ.
**ರೆಕಾರ್ಡ್‌ರೂಮು** – ದಾಖಲೆಗಳ ಕೊಠಡಿ

**ಗಮನಿಸಿ ತಿಳಿಯಿರಿ :**

1. **‘ಸರ್ವನಾಶೇ ಸಮುತ್ಪನ್ನೇ ಸತ್ಯಂ ವದತಿ ಕಿಂಕರಃ’** – ಕೆಟ್ಟ ಕಾಲ ಬಂದಾಗ ಸೇವಕನು ಸತ್ಯವನ್ನು ನುಡಿಯುತ್ತಾನೆ.
2. **ಲಬ್ ಡಬ್** – ಆರೋಗ್ಯವಂತ ಹೃದಯದ ಬಡಿತದ ಸದ್ದು.
3. **ಲಸ್ ಡಸ್** – ಹೃದಯ ಸರಿಯಿಲ್ಲದಾಗಿನ ಬಡಿತದ ಸದ್ದು.
4. **ಹೃದಯ ಪರಿವರ್ತನೆ** – ಹೃದಯದ ಆರೋಗ್ಯ ಹೆಚ್ಚುವುದು(ಮನಃಪರಿವರ್ತನೆ. ಇಲ್ಲಿ ವ್ಯಂಗ್ಯಾರ್ಥದಲ್ಲಿ ಬಳಕೆಯಾಗಿದೆ)

**2. ಪ್ರಶ್ನೆಗಳು :**

**ಅ) ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ರಾಶಿಯವರು ರೆಕಾರ್ಡ್ ರೂಮಿನಲ್ಲಿ ಏನನ್ನು ತಲೆದಿಂಬಾಗಿ ಮಾಡಿಕೊಂಡು ಮಲಗಿದರು?
ರಾಶಿಯವರು ರೆಕಾರ್ಡ್ ರೂಮಿನಲ್ಲಿ ದಫ್ತರವನ್ನೇ (ಫೈಲು) ತಲೆದಿಂಬಾಗಿ ಮಾಡಿಕೊಂಡು ಮಲಗಿದರು.
2. ತೇಗು ಯಾವುದರ ಸೂಚಕ ಎಂದು ರಾಶಿ ತಿಳಿದಿದ್ದರು?
ತೇಗು ಹೊಟ್ಟೆ ತುಂಬಿದುದಕ್ಕೆ ಸೂಚಕ ಎಂದು ರಾಶಿ ತಿಳಿದಿದ್ದರು.
3. ಕೊಬ್ಬು ಎಲ್ಲೆಲ್ಲಿ ತುಂಬಿಕೊಳ್ಳುತ್ತದೆಂದು ಚಿಕ್ಕ ಸಾಹೇಬರು ಹೇಳಿದರು?
ಕೊಬ್ಬು ಜಾಸ್ತಿಯಾಗಿ ಎಲ್ಲಿ ಬೇಡವೋ ಅಲ್ಲೆಲ್ಲಾ ತುಂಬಿಕೊಳ್ಳುತ್ತದೆ ಹಾಗೂ ಹೃದಯದ ಸುತ್ತಲೂ ತುಂಬಿಕೊಳ್ಳುತ್ತದೆ ಎಂದು ಚಿಕ್ಕ ಸಾಹೇಬರು ಹೇಳಿದರು.
4. ಆಸನ ಹಾಕುವ ಪುಸ್ತಕವನ್ನು ರಾಶಿಯವರು ಏಕೆ ಕೊಂಡುತಂದರು?
ರಾಶಿಯವರು ಪ್ರಕಾಶಕನಿಗಾದರೂ ಒಂದು ತುತ್ತು ಅನ್ನ ಕೊಡೋಣ ಎಂದು ಆಸನ ವಿಧಾನದ ಪುಸ್ತಕವನ್ನು ಕೊಂಡು ತಂದರು.
5.ಉಸ್ತಾದ್ ಹಮಾನ್ ಖಾನ್ ಯಾವ ರೀತಿ ಪ್ರಸಿದ್ಧನಾಗಿದ್ದನು?
ಉಸ್ತಾದ್ ಹಮಾನ್‌ಖಾನ್ ಜಗಜಟ್ಟಿಗಳನ್ನು ಸೋಲಿಸುವುದರ ಮೂಲಕ ಪ್ರಸಿದ್ಧನಾಗಿದ್ದನು.
6. ಉಸ್ತಾದ್ ಹಮಾನ್ ಖಾನ್ ರಾಶಿಯವರಿಗೆ ಕುತ್ತಿಗೆ ಸರಿಯಾಗಲು ಏನೆಂದು ಸಲಹೆ ನೀಡಿದನು?
ಉಸ್ತಾದ್ ಹಮಾನ್ ಖಾನ್ ರಾಶಿಯವರಿಗೆ ಕತ್ತಿಗೆ ಮೂರು ದಿನ ತೈಲ ಹಾಕಿ ತಿಕ್ಕಿದರೆ ಸರಿಹೋಗುತ್ತೆ ಎಂದು ಸಲಹೆ ನೀಡಿದನು.
7.ಚಿಕ್ಕಸಾಹೇಬರು ರಾಶಿಯವರ ಸ್ಥಿತಿ ಕಂಡು ಏನು ಹೇಳಿದರು?
ಚಿಕ್ಕಸಾಹೇಬರು ರಾಶಿಯವರಿಗೆ ‘ಹಿಮಾಲಯದಲ್ಲಿ ಒಬ್ಬ ಗೋಸಾಯಿ ಹೀಗೆಯೇ ಮಾಡಿ ಲಯವಾದನು’ ಎಂದು ಹೇಳಿದರು.
8. ಕೈಬಿಡಿಸಲು ಬಂದ ವೈದ್ಯರು ಏನೆಂದು ಪ್ರತಿಕ್ರಿಯಿಸಿದರು?

ಕೈಬಿಡಿಸಲು ಬಂದ ವೈದ್ಯರು "ಇದು ಪೈಲ್ವಾನರ ಕೆಲಸ ನನ್ನದಲ್ಲ. ಸಾಯುವ ಹಾಗಾದರೆ ಹೇಳಿ ಕಳುಹಿಸಿ. ಬಂದು ಇಂಜಕ್ಷನ್ ಕೊಡುತ್ತೇನೆ" ಎಂದರು.

**ಆ) ಈ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಚಿಕ್ಕ ಸಾಹೇಬರು ಲೇಖಕ ರಾಶಿ ಅವರನ್ನು ಪಶ್ಚಾತ್ತಾಪದಿಂದ ಏನು ಕೇಳಿದರು?
ಚಿಕ್ಕ ಸಾಹೇಬರು ಲೇಖಕ ರಾಶಿ ಅವರನ್ನು "ಜೋರಾಗಿ ನಡೆದರೆ ಉಬ್ಬಸ ಬರುತ್ತದೆಯೇ?" ಎಂದರು. "ಬಿಸಿಲಿನಲ್ಲಿ ಬೆವರುತ್ತದೆಯೇ?" ಎಂದರು. "ಊಟವಾದ ಮೇಲೆ ಎದೆ ಒತ್ತುತ್ತದೆಯೇ?" ಎಂದರು. "ತೇಗು ಬರುತ್ತದೆಯೇ?" ಎಂದು ಕೇಳಿದರು.
2. ಆಸನ ಮಾಡುವುದರಿಂದ ಆಗುವ ಅನುಕೂಲಗಳನ್ನು ಚಿಕ್ಕ ಸಾಹೇಬರು ಹೇಗೆ ವಿವರಿಸಿದರು?
"ಆಸನಗಳನ್ನು ಮಾಡುವುದರಿಂದ ಹೆಚ್ಚಿನ ಕೊಬ್ಬೆಲ್ಲಾ ಕರಗಿ ನೀರಾಗಿ ಜಿಂಕೆಯಂತೆ ದೇಹ ಚಿಮ್ಮುತ್ತದೆ. ಹೃದಯ ಪರಿವರ್ತನೆಯಾಗುತ್ತದೆ" ಎಂಬ ಅನುಕೂಲಗಳನ್ನು ಚಿಕ್ಕ ಸಾಹೇಬರು ವಿವರಿಸಿದರು.
3. ಲೇಖಕ ರಾಶಿ ಅವರು ಆರಂಭದಲ್ಲಿ ಹಾಕಿದ ಆಸನಗಳು ಯಾವುವು?
ಲೇಖಕ ರಾಶಿ ಅವರು ಆರಂಭದಲ್ಲಿ ಪದ್ಮಾಸನ, ಕುಕ್ಕುಟಾಸನ, ಮತ್ಸ್ಯಾಸನ, ಸಿಂಹಾಸನ, ಗಜಾಸನ ಎಲ್ಲವನ್ನೂ ಹಾಕಿದರು.
4. ರಾಶಿಯವರ ಎರಡು ಕೈಗಳೂ ಕತ್ತಿನ ಮೇಲೆ ಸಿಕ್ಕಿಕೊಂಡದ್ದು ಹೇಗೆ?
ಲೇಖಕರು ಪದ್ಮಾಸನದಲ್ಲಿ ಕುಳಿತುಕೊಂಡು. ಬಲಗಾಲುಂಗುಷ್ಟವನ್ನು ಬಲಗೈಯಲ್ಲಿ ಹಿಡಿದು, ಕಾಲನ್ನೆತ್ತಿ ಕತ್ತಿನ ಹಿಂದೆ ಹಾಕಿದರು. ಎಡಗಾಲನ್ನೂ ಪ್ರಯಾಸಪಟ್ಟು ಕತ್ತಿನ ಹಿಂದೆ ದೂಡಿದರು. ಹೀಗೆ ಮಾಡುವಾಗ ಎರಡೂ ಕೈಗಳ ಸಹಾಯ ತೆಗೆದುಕೊಂಡರು. ಹಾಗಾಗಿ ಎರಡೂ ಕೈಗಳೂ ಕಾಲಿನ ಕೆಳಗೆ ಕತ್ತಿನ ಮೇಲೆ ಸಿಕ್ಕಿಹಾಕಿಕೊಂಡವು.
5.ಲೇಖಕ ರಾಶಿ ಅವರ ಹೆಂಡತಿ ಏಕೆ ನಗಲಾರಂಭಿಸಿದರು?
ಲೇಖಕರ ಎರಡೂ ಕೈಗಳೂ ಕಾಲಿನ ಕೆಳಗೆ ಕತ್ತಿನ ಮೇಲೆ ಸಿಕ್ಕಿಹಾಕಿಕೊಂಡವು. ಎರಡು ನಿಮಿಷ ಆಯಿತು. ಕಾಲುಗಳು ನೋಯಲಾರಂಭಿಸಿತು. ಕತ್ತು ಮುರಿಯುವಂತಾಯಿತು. ನೋವು ಹೆಚ್ಚಾಗಿ ಬಾಯಿ ಬಡಿದುಕೊಳ್ಳಲು ಕೈಗಳು ಇಲ್ಲದೆ ಲಬೋ ಲಬೋ ಎಂದು ಜೋರಾಗಿ ಕೂಗಿಕೊಂಡಾಗ ಒಳಗಿನಿಂದ ಹೆಂಡತಿಯು ಬಂದು ಲೇಖಕರ ಪರಿಸ್ಥಿತಿ ಕಂಡು ನಗಲಾರಂಭಿಸಿದಳು.
6. ಉಸ್ತಾದ್ ಹಮಾನ್‌ಖಾನ್ ಸಿಕ್ಕಿಹಾಕಿಕೊಂಡ ಲೇಖಕರ ಕೈಗಳನ್ನು ಹೇಗೆ ಬಿಡಿಸಿದರು?
ಉಸ್ತಾದ್ ಹಮಾನ್‌ಖಾನ್ ಮಣ್ಣು ಕೈಗೆ ಬಳಿದುಕೊಂಡು, ಲೇಖಕರ ಕಾಲು ಹಿಡಿದು ಸೀಬೇಕಾಯಿಯನ್ನು ಮರದಿಂದ ಕೀಳುವ ಹಾಗೆ ಕತ್ತಿನ ಹಿಂದಿನಿಂದ ಕಿತ್ತ. ಒಂದು ಕಾಲು ನೆಲದ ಮೇಲೆ ಬಿತ್ತು, ಕೈ ಸಡಿಲವಾಯಿತು. ಇನ್ನೊಂದು ಕಾಲು ಕಿತ್ತ, ಅದೂ ಬಿತ್ತು ನೆಲದ ಮೇಲೆ. ಈ ರೀತಿ ಸಿಕ್ಕಿಹಾಕಿಕೊಂಡ ಕೈಗಳನ್ನು ಬಿಡಿಸಿದರು.

**ಇ) ಈ ಕೆಳಗಿನ ಮಾತುಗಳನ್ನು ಸಂದರ್ಭದೊಡನೆ ವಿವರಿಸಿರಿ.**

1. "ಏನ್ರೀ ಇದೇನು ಮಲಗುವ ಮನೆಯೋ?"
ಈ ವಾಕ್ಯವನ್ನು **ರಾಶಿ (ಡಾ॥ ಎಂ. ಶಿವರಾಂ)** ಅವರು ಬರೆದಿರುವ 'ಬೆಸ್ಟ್ ಆಫ್ ರಾಶಿ' ಎಂಬ ಕೃತಿಯಿಂದ ಆಯ್ದ **ಆಸನದ ಮೇಲೆ ಆಸನ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಚಿಕ್ಕಸಾಹೇಬರು ಲೇಖಕರಿಗೆ ಹೇಳುತ್ತಾರೆ. ಲೇಖಕರು ರೆಕಾರ್ಡ್ ರೂಮಿನಲ್ಲಿ ವಿಶ್ರಾಂತಿ ಪಡೆಯಲು ಕೆಲಹೊತ್ತು ಮಲಗಿದ್ದರು.ಈ ಸಮಯದಲ್ಲಿ ಯಾರೋ ಬಂದು ಲೇಖಕರನ್ನು ಎಬ್ಬಿಸಿದಂತಾಯಿತು.ಎಚ್ಚೆತ್ತು ಕುಳುತು ಕೊಂಡಾಗ ಎದುರಿಗಿದ್ದ ಚಿಕ್ಕಸಾಹೇಬರು 'ಏನ್ರೀ ಇದೇನು ಮಲಗುವ ಮನೆಯೋ' ಎಂದು ತಿಳಿಸಿದ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.
2. "ಒಂದಲ್ಲಾ ಒಂದು ದಿನ ಲಬ್ ಡಬ್ ಎನ್ನುವುದು ಲಸ್ ಡಸ್ ಎನ್ನುತ್ತದೆ."
ಈ ವಾಕ್ಯವನ್ನು **ರಾಶಿ (ಡಾ॥ ಎಂ. ಶಿವರಾಂ)** ಅವರು ಬರೆದಿರುವ 'ಬೆಸ್ಟ್ ಆಫ್ ರಾಶಿ' ಎಂಬ ಕೃತಿಯಿಂದ ಆಯ್ದ **ಆಸನದ ಮೇಲೆ ಆಸನ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಚಿಕ್ಕಸಾಹೇಬರು ಲೇಖಕರಿಗೆ ಹೇಳುತ್ತಾರೆ. ಚಿಕ್ಕಸಾಹೇಬರು ಒಮ್ಮೆ ಲೇಖಕರಿಗೆ ಕೊಬ್ಬು ಜಾಸ್ತಿಯಾದರೆ ಎಲ್ಲಿ ಬೇಡವೋ ಅಲ್ಲೆಲ್ಲಾ ತುಂಬಿಕೊಳ್ಳುತ್ತದೆ ಹಾಗೂ ಹೃದಯದ ಸುತ್ತಲೂ ತುಂಬಿಕೊಳ್ಳುತ್ತದೆ. ಒಂದಲ್ಲಾ ಒಂದು ದಿನ ಲಬ್ ಡಬ್ ಎನ್ನುವುದು ಲಸ್ ಡಸ್ ಎನ್ನುತ್ತದೆ. ಎಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.
3. "ನಿಮ್ಮ ಟೊಂಕ ನೋವು ಹಾಗಿರಲಿ, ನನಗೆ ಬಂತು ಈಗ."
ಈ ವಾಕ್ಯವನ್ನು **ರಾಶಿ (ಡಾ॥ ಎಂ. ಶಿವರಾಂ)** ಅವರು ಬರೆದಿರುವ 'ಬೆಸ್ಟ್ ಆಫ್ ರಾಶಿ' ಎಂಬ ಕೃತಿಯಿಂದ ಆಯ್ದ **ಆಸನದ ಮೇಲೆ ಆಸನ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಲೇಖಕರ ಹೆಂಡತಿಯು ಲೇಖಕರಿಗೆ ಹೇಳಿದ್ದಾರೆ. ಲೇಖಕರ ಎರಡೂ ಕೈಗಳೂ ಕಾಲಿನ ಕೆಳಗೆ ಕತ್ತಿನ ಮೇಲೆ ಸಿಕ್ಕಿಹಾಕಿಕೊಂಡವು. ನೋವು ಹೆಚ್ಚಾಗಿ ಬಾಯಿ ಬಡಿದುಕೊಳ್ಳಲು ಕೈಗಳು ಇಲ್ಲದೆ ಲಬೋ ಲಬೋ ಎಂದು ಜೋರಾಗಿ

ಕೂಗಿಕೊಂಡಾಗ ಒಳಗಿನಿಂದ ಹೆಂಡತಿಯು ಬಂದು ಲೇಖಕರ ಕೈಕಾಲುಗಳನ್ನು ಬಿಡಿಸಲು ಹೋಗಿ ದೊಪ್ಪನೆ ಮೂಲೆಯಲ್ಲಿ ಬಿದ್ದಾಗ ಈ ಮೇಲಿನ ಮಾತು ಬಂದಿದೆ.

4. "ಮಧ್ಯಾಹ್ನ ಮೂರು ಗಂಟೆ ಆದರೆ ರೆಕಾರ್ಡು ರೂಮೇ ಬಾ ಎನ್ನುತ್ತದೆ."

ಈ ವಾಕ್ಯವನ್ನು **ರಾಶಿ (ಡಾ॥ ಎಂ. ಶಿವರಾಂ)** ಅವರು ಬರೆದಿರುವ 'ಬೆಸ್ಟ್ ಆಫ್ ರಾಶಿ' ಎಂಬ ಕೃತಿಯಿಂದ ಆಯ್ದ **ಆಸನದ ಮೇಲೆ ಆಸನ** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಲೇಖಕರು ಹೇಳಿದ್ದಾರೆ. ಲೇಖಕರು ಒಮ್ಮೆ ತಮ್ಮ ಸೊಂಟ ನೋವಿನ ನಿವಾರಣೆಗಾಗಿ ರೆಕಾರ್ಡು ರೂಮಿನಲ್ಲಿ ಮಲಗಿದ್ದಾಗ ಚಿಕ್ಕ ಸಾಹೇಬರು ಬಂದರು. ಲೇಖಕರ ನೋವಿಗೆ ಪರಿಹಾರವಾಗಿ ಆಸನ ಮಾಡಲು ತಿಳಿಸಿದರು. ಲೇಖಕರು ಆಸನ ಮಾಡಲು ಹೋಗಿ ಕೈಕಾಲು ಸಿಕ್ಕಿಹಾಕಿಕೊಂಡು, ಅದರಿಂದ ಪಾರಾಗಿ ಕಛೇರಿಗೆ ಬಂದು ಮಧ್ಯಾಹ್ನ ರೆಕಾರ್ಡು ರೂಮು ನೋಡಿದಾಗ ಈ ಮೇಲಿನ ಮಾತು ಬಂದಿದೆ.

**3. ಭಾಷಾಭ್ಯಾಸ :**

**ಅ) ಈ ಕೆಳಗಿನ ವಾಕ್ಯಗಳನ್ನು ಸೂಚನೆಯಂತೆ ಬದಲಿಸಿ ಬರೆಯಿರಿ.**

1. ಸಾಹೇಬರು **ಸಂತುಷ್ಟಿಯಿಂದ** ನಕ್ಕರು (ಗೆರೆಯೆಳೆದ ಪದದ ಬದಲಿಗೆ ಅದೇ ಅರ್ಥ ಬರುವ ಪದವನ್ನು ಬಳಸಿ ಬರೆಯಿರಿ)

ಸಾಹೇಬರು **ಸಂತೃಪ್ತಿಯಿಂದ** ನಕ್ಕರು.

2. ಕೊಬ್ಬು **ಜಾಸ್ತಿಯಾಗಿ** ಎಲ್ಲಿ ಬೇಡವೋ ಅಲ್ಲೆಲ್ಲ ತುಂಬಿಕೊಂಡು ಬಿಡುತ್ತದೆ. (ಗೆರೆ ಎಳೆದ ಪದದ ಬದಲಿಗೆ ಕಡಿಮೆಯಾಗಿ ಪದವನ್ನು ಬಳಸಿ ವಾಕ್ಯದ ರೂಪ ಬದಲಿಸಿರಿ)

ಕೊಬ್ಬು **ಕಡಿಮೆಯಾಗಿ** ಎಲ್ಲಿ ಬೇಡವೋ ಅಲ್ಲೆಲ್ಲ ತುಂಬಿಕೊಂಡು ಬಿಡುತ್ತದೆ.

3. ಬೆಳಗ್ಗೆ ಏಳುತ್ತಲೂ ಆಸನಗಳನ್ನು ಪುಸ್ತಕ ನೋಡಿಕೊಂಡು ಹಾಕಲು ಪ್ರಾರಂಭಿಸಿದೆ. (ಅರ್ಥ ಕೆಡದಂತೆ ಪದಗಳನ್ನು ಹಿಂದೆ ಮುಂದೆ ಮಾಡಿ ವಾಕ್ಯವನ್ನು ಪುನಃ ರಚಿಸಿ.)

ಬೆಳಿಗ್ಗೆ ಎದ್ದ ತಕ್ಷಣ ಪುಸ್ತಕ ನೋಡಿಕೊಂಡು ಆಸನಗಳನ್ನು ಹಾಕಲು ಪ್ರಾರಂಭಿಸಿದೆ.

4. ಒಂದು ಆಸನದ ರೀತಿಯನ್ನು **ಲೇಖಕ** ಚೆನ್ನಾಗಿ ವಿವರಿಸಿದ್ದನು. (ವಾಕ್ಯವನ್ನು ಸ್ತ್ರೀಲಿಂಗಕ್ಕೆ ಬದಲಿಸಿ ಬರೆಯಿರಿ.)

ಒಂದು ಆಸನದ ರೀತಿಯನ್ನು ಲೇಖಕಿ ಚೆನ್ನಾಗಿ ವಿವರಿಸಿದ್ದಳು.

**ಆ) ಈ ಕೆಳಗಿನ ವಾಕ್ಯಗಳಲ್ಲಿ ಬಿಟ್ಟ ಅಕ್ಷರಗಳನ್ನು ತುಂಬಿ ಸರಿಪಡಿಸಿ ಬರೆಯಿರಿ.**

1. ಒಂದು ಆಸನದ ರೀತಿಯ ನ್ನು ಚೆ ನ್ನಾ ಗಿ ವಿವರಿ ಸಿ ದ್ದ.
2. ಕೈಗಳನ್ನು ಬಿಡಿ ಸಿ ಕೊಳ್ಳ ಲೇ ಆಗದು.
3. ಇದು ಪೈಲ್ವಾ ನ ರ ಕೆ ಲಸ. ನ ನ್ನ ದ ಲ್ಲ.
4. ಜಟ್ಟಿಗಳೆಲ್ಲರೂ ಮು ಗ್ಗ ರಿಸು ತ್ತಿದ್ದ ರು.

**ಇ) ಮಾದರಿಯಂತೆ ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆಯಿರಿ.**

**ಮಾದರಿ : ಮೂಲೆಯಲ್ಲಿ = ಮೂಲೆ + ಅಲ್ಲಿ**

| | | |
|---|---|---|
| ಒಮ್ಮೊಮ್ಮೆ = ಒಮ್ಮೆ + ಒಮ್ಮೆ, | ಕೊಬ್ಬೆಲ್ಲಾ = ಕೊಬ್ಬು + ಎಲ್ಲಾ, | ಪದ್ಮಾಸನ =ಪದ್ಮ + ಆಸನ, |
| ಬಲಗಾಲು = ಬಲ + ಕಾಲು, | ಬಲಗೈ = ಬಲ + ಕೈ, | ಕಾಲನ್ನೆತ್ತಿ = ಕಾಲನು + ಎತ್ತಿ. |

**ಈ) ಈ ಕೆಳಗಿನ ಪದಗಳಲ್ಲಿ ದೀರ್ಘಸ್ವರಗಳಿರುವ ಅಕ್ಷರಗಳನ್ನು ಗುರುತಿಸಿರಿ.**

1. ಸುಮಾರು ಮೂರು ಗಂಟೆ
2. ಯಾರಿಗೂ ಕಾಣದ ಮೂಲೆ
3. ಹೇಳಿದ ಕೂಡಲೆ
4. ಸಾಹೇಬರು
5. ಓಹೋ ಏನೋ ಬಂತು

**ಉ) ವಾಕ್ಯಗಳಲ್ಲಿರುವ ಒತ್ತಕ್ಷರಗಳನ್ನು ಗುರುತಿಸಿರಿ.**

1. ನನ್ನ ಟೊಂಕನೋವು ಅದಕ್ಕೆ ಮದ್ದು ಎಲ್ಲವನ್ನೂ ಹೇಳಿದೆ.
2. ನಾನು ಸ್ವಾಭಾವಿಕವಾಗಿ ಮುಚ್ಚುಮರೆ ಇಲ್ಲದೇ ಉಣ್ಣುವವನು.
3. ಆಯಕಟ್ಟು ಸ್ವಲ್ಪ ನನ್ನಂತೆಯೇ. ಹೊಟ್ಟೆಯ ಸುತ್ತ ಹೆಚ್ಚಳತೆ.

**4. ಸೈದ್ಧಾಂತಿಕ ವ್ಯಾಕರಣ :**

**ದ್ವಿರುಕ್ತಿ – ಜೋಡುನುಡಿ – ನುಡಿಗಟ್ಟು (ಪಡೆನುಡಿ)**

**1.ದ್ವಿರುಕ್ತಿ :**

ಹೌದುಹೌದು, ಮನೆಮನೆ, ನಿಲ್ಲುನಿಲ್ಲು, ಬನ್ನಿಬನ್ನಿ, ಬೇಡಬೇಡ, ಓಡುಓಡು, –ಹೀಗೆ ಒಂದೇ ಪದ ಮಾತು ಇಲ್ಲವೇ ಬರೆವಣಿಗೆಯಲ್ಲಿ ಎರಡು ಸಾರಿ ಬಳಕೆಯಾದರೆ ಅದನ್ನು 'ದ್ವಿರುಕ್ತಿ' ಎನ್ನುತ್ತಾರೆ. 'ದ್ವಿ' ಎಂದರೆ 'ಎರಡು', 'ಉಕ್ತಿ' ಎಂದರೆ 'ಹೇಳು', 'ದ್ವಿರುಕ್ತಿ' ಎಂದರೆ 'ಎರಡುಬಾರಿ ಹೇಳು' ಎಂದು ಅರ್ಥ.

**ಉದಾ :** ಕಡೆ + ಕಡೆ = ಕಟ್ಟಕಡೆ.

ಮೊದಲು + ಮೊದಲು = ಮೊತ್ತಮೊದಲು.

ಕೆಳಗೆ + ಕೆಳಗೆ = ಕೆಳಕೆಳಗೆ.

ಹೊಸದು + ಹೊಸದು = ಹೊಚ್ಚಹೊಸದು.

ತುದಿ + ತುದಿ = ತುತ್ತತುದಿ.

ಒಂದು + ಒಂದು = ಒಂದೊಂದು.

**2.ಜೋಡುನುಡಿ :**

ಅರ್ಥವಿರುವ ಪದದೊಂದಿಗೆ ಸಮಾನಾರ್ಥ, ವಿರುದ್ಧಾರ್ಥ ಇಲ್ಲವೇ ಅರ್ಥರಹಿತ ಪದಗಳನು ಜೋಡಿಸಿ ಬಳಸುವುದುಂಟು. ಇವುಗಳನ್ನೇ 'ಜೋಡುನುಡಿ' ಎಂದು ಕರೆಯಲಾಗುತ್ತದೆ.

ಉದಾಹರಣೆಗಳು :

1. **ಸಮಾನಾರ್ಥಕ ಜೋಡುನುಡಿ :** ಉಡುಗೆತೊಡುಗೆ, ಅವಳಿಜವಳಿ, ಟಾಪ್‌ಮೇಲೆ.
2. **ವಿರುದ್ಧಾರ್ಥಕ ಜೋಡುನುಡಿ :** ಸಿಹಿಕಹಿ, ನೋವುನಲಿವು, ಆದಿಅಂತ್ಯ.
3. **ಎರಡನೇ ಪದ ಅರ್ಥ ರಹಿತವಾಗಿರುವ ಜೋಡುನುಡಿ :** ಕೂಲಿನಾಲಿ, ಗಿಡಗಂಟೆ, ಕಾಳುಕಡ್ಡಿ, ಹುಳುಹುಪ್ಪಟೆ.

**3.ಪಡೆನುಡಿ–ನುಡಿಗಟ್ಟು :**

ವಿಶೇಷಾರ್ಥ ನೀಡುವ ಪದ ಪುಂಜವನ್ನು 'ಪಡೆನುಡಿ' ಅಥವಾ 'ನುಡಿಗಟ್ಟು' ಎಂದು ಕರೆಯಲಾಗುತ್ತದೆ. ಇಲ್ಲಿ ಪದಗಳ ಬಾಹ್ಯ ಅರ್ಥಕ್ಕಿಂತ ಸೂಚ್ಯಾರ್ಥ ಇಲ್ಲವೇ ಒಳ ಅರ್ಥ ಪ್ರಧಾನವಾಗಿರುತ್ತದೆ.

**ಉದಾ: ಕತ್ತಿಮಸೆ** – ದ್ವೇಷ ಸಾಧಿಸು. **ಕೈಕೊಡು** – ಮೋಸ ಮಾಡು,

**ಬೆನ್ನುತಟ್ಟು** – ಪ್ರೋತ್ಸಾಹಿಸು. **ಹೊಂಚುಹಾಕು** – ಸಮಯ ಸಾಧಿಸು.

**ನಾಯಿಜನ್ಮ** – ಹೀನಬಾಳು **ತಲೆದೂಗು** – ಮೆಚ್ಚುಗೆ ಸೂಚಿಸು

# 1. ಅನ್ವೇಷಣೆ – ಜಿ.ಎಸ್. ಶಿವರುದ್ರಪ್ಪ

**ಕೃತಿಕಾರರ ಪರಿಚಯ :**

- **ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ** ಅವರು 1926 ರಲ್ಲಿ ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನ ಈಸೂರು ಎಂಬ ಗ್ರಾಮದಲ್ಲಿ ಜನಿಸಿದರು.
- ಇವರು ಸೌಂದರ್ಯ ಸಮೀಕ್ಷೆ, ದೀಪದ ಹೆಜ್ಜೆ, ಸಾಮಗಾನ, ಕಾರ್ತೀಕ, ಅನಾವರಣ, ಚೆಲುವು–ಒಲವು, ಗೋಡೆ, ತೆರೆದದಾರಿ, ಮಾಸ್ಕೋದಲ್ಲಿ ಇಪ್ಪತ್ತೆರಡು ದಿನಗಳು, ಕಾವ್ಯಾರ್ಥ ಚಿಂತನ –ಇನ್ನು ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಶ್ರೀಯುತರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ನೃಪತುಂಗ ಪ್ರಶಸ್ತಿ ಹಾಗೂ ರಾಷ್ಟ್ರಕವಿ ಪ್ರಶಸ್ತಿಗಳು ಲಭಿಸಿದೆ.
- ಪ್ರಸ್ತುತ 'ಅನ್ವೇಷಣೆ' ಕವಿತೆಯನ್ನು ಅವರ **'ಗೋಡೆ'** ಕವನ ಸಂಕಲನದಿಂದ ಆಯ್ಕೆಮಾಡಲಾಗಿದೆ.

**ಅಭ್ಯಾಸ**

**I. ಪದಗಳ ಅರ್ಥ ತಿಳಿಯಿರಿ :**

**ಅನ್ವೇಷಣೆ**– ಹುಡುಕು; ಶೋಧಿಸು.
**ಕಲಕು** – ಕದಡು
**ಗುರುತಿಸು** – ಗೊತ್ತು ಹಚ್ಚು
**ಬಂಧನ** – ಸೆರೆ; ಕಟ್ಟು.
**ಅಹಂ** – ಗರ್ವ; ಪ್ರತಿಷ್ಠೆ.
**ಕೋಟೆ** – ಕಲ್ಲಿನ ರಕ್ಷಣಾ ಗೋಡೆ.
**ನಂದನ** – ಉದ್ಯಾನವನ
**ಹೆಮ್ಮೆ** – ಅಭಿಮಾನ; ಹಿರಿಮೆ; ಸಂತೋಷ.

**2. ಪ್ರಶ್ನೆಗಳು :**

**ಅ) ಕೆಳಗೆ ನೀಡಿರುವ ಪದ್ಯದ ಸಾಲುಗಳನ್ನು ಪೂರ್ಣಗೊಳಿಸಿರಿ.**

1. ಎಲ್ಲೋ ಹುಡುಕಿದೆ ಇಲ್ಲದ ದೇವರ <u>**ಕಲ್ಲು ಮಣ್ಣುಗಳ**</u> ಗುಡಿಯೊಳಗೆ
2. ಒಳಗಿನ ತಿಳಿಯನು ಕಲಕದೆ ಇದ್ದರೆ <u>**ಅಮೃತದ ಸವಿಯಿದೆ**</u> ನಾಲಗೆಗೆ
3. ಹತ್ತಿರವಿದ್ದೂ <u>**ದೂರ**</u> ನಿಲ್ಲುವೆವು
4. ಎಷ್ಟು ಕಷ್ಟವೋ <u>**ಹೊಂದಿಕೆ**</u> ಎಂಬುದು ನಾಲ್ಕು ದಿನದ ಈ ಬದುಕಿನಲಿ.

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಕವಿ ಜಿ.ಎಸ್. ಶಿವರುದ್ರಪ್ಪನವರು ಮೊದಲು ದೇವರನ್ನು ಎಲ್ಲಿ ಹುಡುಕಿ ವಿಫಲರಾದರು?
ಕವಿ ಜಿ.ಎಸ್. ಶಿವರುದ್ರಪ್ಪನವರು ಮೊದಲು ದೇವರನ್ನು ಕಲ್ಲು ಮಣ್ಣುಗಳ ಗುಡಿಯೊಳಗೆ ಹುಡುಕಿ ವಿಫಲರಾದರು.
2.ಕವಿ ಜಿ.ಎಸ್.ಎಸ್. ಅವರು ನಿಜವಾದ ದೇವರನ್ನು ಕಂಡದ್ದು ಎಲ್ಲಿ? ಯಾವ ರೂಪದಲ್ಲಿ?
ಕವಿ ಜಿ.ಎಸ್.ಎಸ್. ಅವರು ನಿಜವಾದ ದೇವರನ್ನು ನಮ್ಮೊಳಗೆ ಕಂಡರು. ಪ್ರೀತಿ ಸ್ನೇಹಗಳ ರೂಪದಲ್ಲಿ ಕಂಡರು.
3.ನಂದನ ಮತ್ತು ಬಂಧನ ಎಂದರೇನು? ಅವು ಎಲ್ಲಿವೆ?
ನಂದನ ಎಂದರೆ ಉದ್ಯಾನವನ, ಬಂಧನ ಎಂದರೆ ಸೆರೆ. ಅವು ನಮ್ಮೊಳಗೆ ಇವೆ.
4. ಅಮೃತದ ಸವಿ ನಾಲಗೆಗೆ ಯಾವಾಗ ಸಿಗುತ್ತದೆ?
ಅಮೃತದ ಸವಿ ನಾಲಗೆಗೆ ತಿಳಿಯನು ಕಲಕದೆ ಇದ್ದರೆ ಸಿಗುತ್ತದೆ.
5.ಮಾನವನಲ್ಲಿ ಅಹಂ ತುಂಬಿದಾಗ ಹೇಗೆ ವರ್ತಿಸುತ್ತಾನೆ?
ಮಾನವನಲ್ಲಿ ಅಹಂ ತುಂಬಿದಾಗ ಹತ್ತಿರವಿದ್ದರೂ ದೂರ ನಿಲ್ಲುವವನಂತೆ ವರ್ತಿಸುತ್ತಾನೆ.
6. ನಾಲ್ಕು ದಿನದ ಬದುಕಿನಲ್ಲಿ ಯಾವುದು ಕಷ್ಟವಾಗಿದೆ?
ನಾಲ್ಕು ದಿನದ ಬದುಕಿನಲ್ಲಿ ಹೊಂದಾಣಿಕೆ ಎಂಬುದು ಕಷ್ಟವಾಗಿದೆ.

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಕವಿ ಜಿ.ಎಸ್.ಎಸ್. ಅವರು ದೇವರನ್ನು ಅನ್ವೇಷಿಸಿದ ಬಗೆ ಹೇಗೆ?
ಕವಿ ಜಿ.ಎಸ್.ಶಿವರುದ್ರಪ್ಪನವರು ದೇವರನ್ನು ಮೊದಲು ಮಾನವರು ನಿರ್ಮಿಸಿರುವ ಗುಡಿ–ಗೋಪುರಗಳಲ್ಲಿ ಅನ್ವೇಷಿಸಿದರು. ಅಲ್ಲಿ ದೇವರು ಸಿಗದೆ ವ್ಯರ್ಥ ಸಮಯ ಹಾಳಾಯಿತು. ಆದರೆ ಆ ದೇವರು ನಮ್ಮ ಸುತ್ತಲಿನ ನಮ್ಮೊಳಗಿನ ಮನುಷ್ಯರ

ಮನುಷ್ಯತ್ವದಲ್ಲಿದೆ. ಅವರ ಪ್ರೀತಿ ಸ್ನೇಹಗಳ ರೂಪದಲ್ಲಿ ಅದನ್ನು ನಾವು ಕಾಣಬಹುದಾಗಿದೆ ಎಂಬ ಬಗೆಯನ್ನು ಕವಿ ಆನಂತರ ಅರಿತುಕೊಂಡರು.

2. ಕವಿ ಹೇಳುವಂತೆ ಬದುಕಿನಲ್ಲಿ ಯಾವುದು ಕಷ್ಟ? ಅದನ್ನು ಪಡೆಯುವುದು ಹೇಗೆ?

ಕವಿ ಹೇಳುವಂತೆ ಬದುಕಿನಲ್ಲಿ ಎಲ್ಲೋ ಇರುವ ದೇವರನ್ನು ಹುಡುಕುವುದು, ಎಲ್ಲೋ ಇರುವ ನಂದನವನವನ್ನು ಹುಡುಕುವುದು, ಅಮೃತದ ಸವಿಗಾಗಿ ಹಾತೊರೆಯುವುದು, ಹೊಂದಾಣಿಕೆಗಾಗಿ ಪರಿತಪಿಸುವುದು ಕಷ್ಟಕರವಾಗಿದೆ. ಇವುಗಳನ್ನು ಪಡೆಯಲು ಪ್ರೀತಿ ಸ್ನೇಹಗಳ ಗುರುತಿಸಬೇಕು. ಒಳಗಿನ ತಿಳಿಯನು ಅರಿಯಬೇಕು. ನಾಲ್ಕು ದಿನದ ಬದುಕಿನಲ್ಲಿ ಹೊಂದಾಣಿಕೆಯೊಂದಿಗೆ ಎಲ್ಲವೂ ನಮ್ಮೊಳಗೆ ಇದೆ ಎಂದು ಭಾವಿಸಿದಾಗ ಎಲ್ಲವೂ ಪಡೆಯಬಹುದಾಗಿದೆ ಎಂದು ಕವಿ ಹೇಳಿದ್ದಾರೆ.

**ಈ) ಸಂದರ್ಭದೊಡನೆ ವಿವರಿಸಿರಿ.**

1. ಪ್ರೀತಿ ಸ್ನೇಹಗಳ ಗುರುತಿಸದಾದೆವು ನಮ್ಮೊಳಗೆ

ಈ ವಾಕ್ಯವನ್ನು **ಜಿ.ಎಸ್. ಶಿವರುದ್ರಪ್ಪ** ಅವರು ಬರೆದಿರುವ **'ಗೋಡೆ'** ಎಂಬ ಕೃತಿಯಿಂದ ಆಯ್ದ **ಅನ್ವೇಷಣೆ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕವಿ ಹೇಳಿದ್ದಾರೆ. ಎಲ್ಲೋ ಇರುವ ದೇವರ ಹುಡುಕಲು ಗುಡಿಗೋಪುರಗಳನ್ನು ಅರಸುವ ಬದಲು ನಮ್ಮ ಸುತ್ತಲಿರುವ ಪ್ರೀತಿ, ಸ್ನೇಹಗಳ ಗುರುತಿಸಿ ಎಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

2.ಅಮೃತದ ಸವಿಯಿದೆ ನಾಲಗೆಗೆ

ಈ ವಾಕ್ಯವನ್ನು **ಜಿ.ಎಸ್. ಶಿವರುದ್ರಪ್ಪ** ಅವರು ಬರೆದಿರುವ **'ಗೋಡೆ'** ಎಂಬ ಕೃತಿಯಿಂದ ಆಯ್ದ **ಅನ್ವೇಷಣೆ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕವಿ ಹೇಳಿದ್ದಾರೆ. ನಾವು ನಮ್ಮೊಳಗಿನ ಅಂತರಾಳವನ್ನು ಕಲಕಿ ರಾಡಿ ಮಾಡದೆ ಇದ್ದರೆ ಅಮೃತದ ಸವಿ ನಾಲಗೆಗೆ ಸಿಗುತ್ತದೆ ಎಂದು ಕವಿ ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

3.ಹತ್ತಿರವಿದ್ದೂ ದೂರ ನಿಲ್ಲುವೆವು

ಈ ವಾಕ್ಯವನ್ನು **ಜಿ.ಎಸ್. ಶಿವರುದ್ರಪ್ಪ** ಅವರು ಬರೆದಿರುವ **'ಗೋಡೆ'** ಎಂಬ ಕೃತಿಯಿಂದ ಆಯ್ದ **ಅನ್ವೇಷಣೆ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕವಿ ಹೇಳಿದ್ದಾರೆ. ಮನುಷ್ಯರು ನಮ್ಮ ನಡುವಿನ ಅಡ್ಡಗೋಡೆಯಂತೆ ಅಹಂಕಾರವನ್ನು ಬೆಳೆಸಿಕೊಂಡಿದ್ದಾರೆ. ಈ ಅಹಂಕಾರದಿಂದ ಹತ್ತರವಿದ್ದೂ ದೂರ ನಿಲ್ಲುವೆವು ನಾವುಗಳು, ಎಂದು ತಿಳಿಸುವ ಸಮಯದಲ್ಲಿ ಈ ಮೇಲಿನ ಮಾತು ಬಂದಿದೆ.

**ಉ) ಬಿಟ್ಟ ಸ್ಥಳಗಳನ್ನು ನೀಡಿರುವ ನಾಲ್ಕು ಆಯ್ಕೆಯ ಉತ್ತರಗಳಿಂದ ಸರಿಯಾದುದನ್ನು ಆಯ್ದು ಬರೆಯಿರಿ.**

1. ಕವಿ ಜಿ.ಎಸ್.ಎಸ್. ಅವರು ದೇವರನ್ನು ______________ ರೂಪದಲ್ಲಿ ಕಂಡರು.

ಅ) ಗುಡಿ ಆ) ಕಲ್ಲು ಮಣ್ಣು ಇ) <u>ಪ್ರೀತಿ ಸ್ನೇಹ</u> ಈ) ಕೋಟೆ

2. ಬದುಕಿನಲ್ಲಿ ____________ ಎಂಬುದು ಕಷ್ಟ ಎಂದು ಕವಿ ಹೇಳುತ್ತಾರೆ.

ಅ) ಹೊಂದಾಣಿಕೆ ಆ) <u>**ಅಹಂ**</u> ಇ) ಹಿರಿಮೆ ಈ) ಮೋಹ

3. ನಮ್ಮೊಳಗಿನ ತಿಳಿಯನು ಕಲಕದೆ ಇದ್ದರೆ ನಾಲಗೆಗೆ __________ ಇದೆ.

ಅ) ಹುಳಿ ಆ) ವಿಷ ಇ) ಒಗರು ಈ) <u>**ಅಮೃತ**</u>

4. ಅಹಂ ಇರುವ ವ್ಯಕ್ತಿ ಜನರಿಗೆ ____________ ಆಗುತ್ತಾನೆ.

ಅ) ಉಪಕಾರಿ ಆ) ಹತ್ತಿರ ಇ) <u>**ದೂರ**</u> ಈ) ಒಳ್ಳೆಯವನು

**3. ಭಾಷಾಭ್ಯಾಸ :**

**ಅ) ಕೆಳಗಿನ ಪದಗಳಿಗೆ ಸಮಾನಾರ್ಥಕಗಳನ್ನು ಬರೆಯಿರಿ.**

ಗುಡಿ – ದೇವಸ್ಥಾನ, ಹತ್ತಿರ – ಸನಿಹ, ಬಂಧನ– ಸೆರೆ, ಸ್ನೇಹ – ಗೆಳೆತನ.

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಬರೆಯಿರಿ.**

ಪ್ರೀತಿ x ದ್ವೇಷ, ದೂರ x ಹತ್ತಿರ, ಅಮೃತ x ವಿಷ, ಸಿಹಿ x ಕಹಿ, ಕಷ್ಟ x ಸುಖ, ಬಂಧನ x ಬಿಡುಗಡೆ.

**ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

1. ದೇವರು : ನಾವು ಪ್ರತಿದಿನ ದೇವರನ್ನು ಪೂಜಿಸುತ್ತೇವೆ.
2. ಪ್ರೀತಿಸ್ನೇಹ: ನಾವು ನಮ್ಮ ಮನೆಯಲ್ಲಿ ಪ್ರೀತಿಸ್ನೇಹದಿಂದ ಇದ್ದೇವೆ.

3. ಬಂಧನ : ನಿರಪರಾಧಿಗಳು ಬಂಧನದಿಂದ ಬಿಡುಗಡೆ ಹೊಂದಿದರು.
4. ಅಮೃತ : ಹಾಲು ಅಮೃತಕ್ಕೆ ಸಮಾನ.
5. ಹೊಂದಿಕೆ : ಶಾಲಾ ಮಕ್ಕಳಲ್ಲಿ ಹೊಂದಿಕೆ ಇರಬೇಕು.
6. ಅಹಂ : ಮನುಷ್ಯ ತನ್ನಲ್ಲಿರುವ ಅಹಂ ಅನ್ನು ಬಿಡಬೇಕು.

**ಈ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

ಹತ್ತಿರವಿದ್ದು = ಹತ್ತಿರ + ಇದ್ದು, ಗುಡಿಯೊಳಗೆ = ಗುಡಿ + ಒಳಗೆ,
ಸವಿಯಿದೆ = ಸವಿ + ಇದೆ, ನಮ್ಮೊಳಗೆ = ನಮ್ಮ + ಒಳಗೆ.

**ಉ) ಸುಳಿವು ಪದಗಳನ್ನು ಬಳಸಿ ಜೋಡಿ ಪದಗಳನ್ನು ಬರೆಯಿರಿ.**

**ಉದಾ :** ಕಲ್ಲು – ಮಣ್ಣು, ಪ್ರೀತಿ – ಸ್ನೇಹ

| | |
|---|---|
| ಹೊಲ – ಗದೆ | ಹೂವು – ಹಣ್ಣು |
| ಗಿಡ – ಮರ | ಕಳ್ಳ – ಸುಳ್ಳ |
| ಗುಡ್ಡ – ಬೆಟ್ಟ | ಮಳೆ – ಬೆಳೆ |
| ಎಡ – ಬಲ | ರೀತಿ – ನೀತಿ |

## 2. ಹಾರಿದ ಹಕ್ಕಿಗಳು – ಆರ್.ವಿ. ಭಂಡಾರಿ

**ಕೃತಿಕಾರರ ಪರಿಚಯ :**

- **ರೋಹಿದಾಸ ವಿಠ್ಠಲ ಭಂಡಾರಿ** ಅವರು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಕೆರೆಕೋಣ ಎಂಬಲ್ಲಿ 1936 ರಲ್ಲಿ ಜನಿಸಿದರು.
- ಇವರು ಕಣ್ಣೇಕಟ್ಟೆ ಕಾಡೇಗೂಡೆ, ಕೊಲೆಗಾರ ಪತ್ತೆಯಾಗಲಿಲ್ಲ, ಹದ್ದುಗಳು, ಬೆಂಕಿಯ ಮಧ್ಯೆ, ಬಿರುಗಾಳಿ, ತಲೆಮಾರು –ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಇವರಿಗೆ 'ವಾಜಂತ್ರಿ ಶಿಕ್ಷಕ ಪ್ರಶಸ್ತಿ', 'ಜಿಲ್ಲೆ ಹಾಗೂ ರಾಜ್ಯ ಶಿಕ್ಷಕ ಪ್ರಶಸ್ತಿಗಳು' 'ಸಿಸು ಸಂಗಮೇಶ ದತ್ತಿ ಪ್ರಶಸ್ತಿ', ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ದೊರೆತಿವೆ.
- ಪ್ರಸ್ತುತ 'ಹಾರಿದ ಹಕ್ಕಿಗಳು' ಕವನವನ್ನು ಅವರ **'ಹದ್ದುಗಳು'** ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

### ಅಭ್ಯಾಸ

**1. ಪದಗಳ ಅರ್ಥ ತಿಳಿಯಿರಿ :**

**ಅಲೆದು** – ತೂಗಿ; ಬಳುಕಿ. **ಉಲಿ** – ಮಾತು; ಧ್ವನಿ.
**ಕುಲುಕು** – ಅಲುಗಾಡು; ಒಯ್ಯಾರ. **ಮಾತೃಸ್ಥಾನ** – ಮೂಲ ನೆಲೆ
**ಚಿಟಬಿಲ್ಲು** – ಹಕ್ಕಿಗೆ ಗುರಿಯಿಟ್ಟು ಕಲ್ಲು ಬೀರುವ ಸಾಧನ.

**2. ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಉದ್ಯಾನದ ಗಿಡಗಳು ಹೇಗೆ ಬೆಳೆದುನಿಂತಿದ್ದವು?
ಉದ್ಯಾನದ ಗಿಡಗಳು ಹೂವು ಅರಳುವ ರೀತಿಯಲ್ಲಿ ತೂಗುತ್ತಾ ಬೆಳೆದು ನಿಂತಿದ್ದವು.
2. ಬಣ್ಣ ಬಣ್ಣದ ಹಕ್ಕಿಗಳು ಏಕೆ ಉಲಿಯುತ್ತಿದ್ದವು?
ಬಣ್ಣ ಬಣ್ಣದ ಹಕ್ಕಿಗಳು ಉದ್ಯಾನವನದಲ್ಲಿ ಅರಳಿ ನಿಂತ ಗಿಡಗಳ ಹೂವಿನಿಂದಾಗಿ ಉಲಿಯುತ್ತಿದ್ದವು.
3. ಬಣ್ಣ ಬಣ್ಣದ ಹಕ್ಕಿಗಳಿಗೆ ಚಿಟಬಿಲ್ಲು ಹೊಡೆದದ್ದು ಏಕೆ?
ಬಣ್ಣ ಬಣ್ಣದ ಹಕ್ಕಿಗಳ ಮಾಂಸಕ್ಕಾಗಿ ಚಿಟಬಿಲ್ಲು ಹೊಡೆದರು.
4. ಬಣ್ಣ ಬಣ್ಣದ ಹಕ್ಕಿಗಳು ಉದ್ಯಾನದಿಂದ ಹಾರಿ ಹೋದದ್ದು ಎಲ್ಲಿಗೆ? ಏಕೆ?
ಬಣ್ಣ ಬಣ್ಣದ ಹಕ್ಕಿಗಳು ಉದ್ಯಾನದಿಂದ ಹಾರಿ ಹೋದದ್ದು ಬೇರೆ ಕಡೆಗೆ, ಏಕೆಂದರೆ ತಮ್ಮ ಪ್ರಾಣ ರಕ್ಷಣೆಗಾಗಿ.
5. ಹಾರಿ ಹೋದ ಹಕ್ಕಿಗಳು ಸಮಯ ಬಂದರೆ ಏನು ಮಾಡಬಹುದು?
ಹಾರಿ ಹೋದ ಹಕ್ಕಿಗಳು ಸಮಯ ಬಂದರೆ ತಿರುಗಿ ಬೀಳಬಹುದು.

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಕವಿ ಆರ್.ವಿ. ಭಂಡಾರಿಯವರು 'ಹಾರಿದ ಹಕ್ಕಿಗಳು' ಕವಿತೆಯ ಮೂಲಕ ಯಾವ ಸಂದೇಶ ನೀಡಿದ್ದಾರೆ?

ಸಮೃದ್ಧ ನಾಡಿನಲ್ಲಿ ಸುಖ ಸಂತೋಷದಿಂದ ಸ್ವಚ್ಛಂದವಾಗಿ ದುಡಿಯುವವರಿಗೆ ತೊಂದರೆಗಳಾದರೆ ಅವರು ಸುಖದ ನೆಲೆಯನ್ನು ಹುಡುಕಿಕೊಂಡು ಬೇರೆಡೆ ಹೋಗುತ್ತಾರೆ. ಇದರಿಂದ ಸಮೃದ್ಧ ನಾಡನ್ನು ಕಟ್ಟಲು ಸಾಧ್ಯವಿಲ್ಲ. ಆದ್ದರಿಂದ ವ್ಯವಸ್ಥೆಗಳು, ಸಂಪನ್ಮೂಲಗಳು ಸರ್ವರ ಹಿತವನ್ನು ಕಾಪಾಡುವಂತಿರಬೇಕು ಎಂಬ ಸಂದೇಶವನ್ನು ಕವಿ ಈ ಪದ್ಯದ ಮೂಲಕ ನೀಡಿದ್ದಾರೆ.

2. ಉದ್ಯಾನದ ಹಕ್ಕಿಗಳು ತೊಂದರೆಗೆ ಒಳಗಾದದ್ದು ಏಕೆ? ಅದರ ಪರಿಣಾಮವೇನಾಯಿತು?

ಉದ್ಯಾನದ ಹಕ್ಕಿಗಳು ತೊಂದರೆಗೆ ಒಳಗಾದದ್ದು ಜನರಿಂದ, ಏಕೆಂದರೆ ಅವರೆಲ್ಲ ತಪಸ್ಸಿಗೆ ಕುಳಿತವರಂತೆ ಹಕ್ಕಿಗಳ ಮಾಂಸಕ್ಕಾಗಿ ಚಿಟಬಿಲ್ಲು ತೆಗೆದುಕೊಂಡು ಗುರಿಯಿಟ್ಟು ಹೊಡೆಯತೊಡಗಿದರು. ಇದರ ಪರಿಣಾಮವಾಗಿ ಹಕ್ಕಿಗಳು ಉದ್ಯಾನವನವನ್ನು ಬಿಟ್ಟು ಪ್ರಾಣರಕ್ಷಣೆಗಾಗಿ ಬೇರೆ ಕಡೆಗೆ ಹಾರಿಹೋದವು. ಈಗ ಉದ್ಯಾನವನದಲ್ಲಿ ಬರುವವರಿಗೆ ಹಕ್ಕಿಗಳ ಕಲರವೇ ಇಲ್ಲದಂತೆ ಆಗಿದೆ.

**ಇ) ಸಂದರ್ಭದೊಡನೆ ವಿವರಿಸಿರಿ.**

1. ಬಣ್ಣ ಬಣ್ಣದ ಹಕ್ಕಿಗಳು ಉಲಿಯುತ್ತಿದ್ದವು.

ಈ ವಾಕ್ಯವನ್ನು **ಆರ್.ವಿ. ಭಂಡಾರಿ** ಅವರು ಬರೆದಿರುವ **'ಹದ್ದುಗಳು'** ಎಂಬ ಕೃತಿಯಿಂದ ಆಯ್ದ **ಹಾರಿದ ಹಕ್ಕಿಗಳು** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕವಿ ಹೇಳಿದ್ದಾರೆ. ಉದ್ಯಾನವನದಲ್ಲಿ ಬೆಳೆದು ನಿಂತು ತೂಗಾಡುತ್ತಿದ್ದ ಗಿಡಗಳಲ್ಲಿ ಅರಳಿ ನಿಂತ ಹೂವುಗಳನ್ನು ನೋಡಿ ಬಣ್ಣ ಬಣ್ಣದ ಹಕ್ಕಿಗಳು ಉಲಿಯುತ್ತಿದ್ದವು ಎಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

2.ಗುರಿಯಿಟ್ಟು ಹೊಡೆದು ಮಾಂಸ ತಪಸ್ಸಿಗೆ ಕುಳಿತಿರಿ.

ಈ ವಾಕ್ಯವನ್ನು **ಆರ್.ವಿ. ಭಂಡಾರಿ** ಅವರು ಬರೆದಿರುವ **'ಹದ್ದುಗಳು'** ಎಂಬ ಕೃತಿಯಿಂದ ಆಯ್ದ **ಹಾರಿದ ಹಕ್ಕಿಗಳು** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕವಿ ಹೇಳಿದ್ದಾರೆ. ಹಕ್ಕಿಗಳು ಕಲರವ ಮಾಡುತ್ತಾ ಉದ್ಯಾನವನದಲ್ಲಿ ಹಾರುತ್ತಾ ಇರುವಾಗ ಮಾಂಸದ ತಪಸ್ಸಿಗೆ ಚಿಟಬಿಲ್ಲುಗಳಿಂದ ಅವುಗಳನ್ನು ಕೊಲ್ಲಲು ಮುಂದಾಗುತ್ತಾರೆ ಎಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

3.ಸಮಯ ಬಂದರೆ ತಿರುಗಿಬೀಳುತ್ತವೆ.

ಈ ವಾಕ್ಯವನ್ನು **ಆರ್.ವಿ. ಭಂಡಾರಿ** ಅವರು ಬರೆದಿರುವ **'ಹದ್ದುಗಳು'** ಎಂಬ ಕೃತಿಯಿಂದ ಆಯ್ದ **ಹಾರಿದ ಹಕ್ಕಿಗಳು** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕವಿ ಹೇಳಿದ್ದಾರೆ. ಹಾರುವ ಹಕ್ಕಿಗಳನ್ನು ಮಾಂಸದ ಆಸೆಗಾಗಿ ಕೊಲ್ಲಲು ಮುಂದಾದಾಗ ಹಕ್ಕಿಗಳು ಹಾರಿಹೋದವು. ಉದ್ಯಾನದಲ್ಲಿ ಹಕ್ಕಿಗಳ ಕಲರವ ದೂರವಾಯಿತು. ಹೀಗೆ ಹಾರಿಹೋದ ಹಕ್ಕಿಗಳು ತಿರುಗಿ ಬಿದ್ದರೆ ಅವ್ಯವಸ್ಥೆ ಉಂಟಾಗುತ್ತದೆ ಎಂದು ಹೇಳುವಾಗ ಈ ಮೇಲಿನ ಮಾತು ಬಂದಿದೆ.

**3. ಭಾಷಾಭ್ಯಾಸ :**

**ಅ) ಈ ಕೆಳಗಿನ ಪದಗಳಿಗೆ ತತ್ಸಮ-ತದ್ಭವ ರೂಪಗಳನ್ನು ಬರೆಯಿರಿ.**

ಸ್ಥಾನ – ಠಾಣ, ಬಣ್ಣ – ವರ್ಣ, ಹಕ್ಕಿ – ಪಕ್ಷಿ, ತಪಸ್ಸು – ತಪಸ್

**ಆ) ಕೆಳಗಿನ ಪದಗಳ ಅರ್ಥ ವ್ಯತ್ಯಾಸ ತಿಳಿಯಿರಿ.**

| | | |
|---|---|---|
| 1. ಗಿಡ – ಗಿಡಗ | 2. ಅಲೆ – ಆಲೆ | 3. ಹಕ್ಕಿ – ಅಕ್ಕಿ |
| 4. ಉಲಿ – ಹುಲಿ | 5. ಹುಡುಕಿ – ಹುಡುಗಿ | 6. ಹೂವು – ಹಾವು |

**ಇ) ಕೆಳಗಿನ ಪದಗಳ ಕಾಗುಣಿತ ದೋಷಗಳನ್ನು ಸರಿಪಡಿಸಿ ಬರೆಯಿರಿ.**

ಉದ್ದಾನ – ಉದ್ಯಾನ, ಗುರಿಹಿಟ್ಟು – ಗುರಿಯಿಟ್ಟು, ಅಕ್ಕಿ – ಹಕ್ಕಿ,
ಹುಲಿಯುತ್ತಿದ್ದವು = ಉಲಿಯುತ್ತಿದ್ದವು, ಹಾವು-ಅಣ್ಣು – ಹೂವು-ಹಣ್ಣು.

# 3. ಜ್ಯೋತಿಯೇ ಆಗು ಜಗಕೆಲ್ಲ – ಜನಪದಗೀತೆ

**ಕೃತಿಕಾರರ ಪರಿಚಯ :**

- ನಿರಕ್ಷರಸ್ಥರಾದ ಗ್ರಾಮೀಣ ಜನರು ತಮ್ಮ ಜೀವನಾನುಭವಗಳನ್ನು ಸಹಜವಾಗಿಯೇ ಅಭಿವ್ಯಕ್ತಿಸುವ ಜನಪದ ಸಾಹಿತ್ಯ ಕಂಠಸ್ಥ ಸಂಪ್ರದಾಯದಲ್ಲಿ ಬೆಳೆದುಬಂದಿದೆ. ಶುದ್ಧ ದೇಸೀಯ ಸೊಗಡನ್ನು ಹೊಂದಿರುವ ಜನಪದ ಗೀತೆಗಳು ಸತ್ವಯುತವಾಗಿದ್ದು ವಿವೇಕವನ್ನು ಹೇಳುವ ನೀತಿ ವಾಕ್ಯಗಳಾಗಿವೆ.
- ಪ್ರಕೃತ ತ್ರಿಪದಿಗಳನ್ನು ದೇ. ಜವರೇಗೌಡ ಸಂಪಾದಿಸಿರುವ **'ಜನಪದ ಗೀತಾಂಜಲಿ'** ಹಾಗೂ ಹಲಸಂಗಿ ಗೆಳೆಯರು ಸಂಪಾದಿಸಿರುವ **'ಗರತಿಯ ಹಾಡು'** ಸಂಕಲನಗಳಿಂದ ಆಯ್ಕೆಮಾಡಿಕೊಳ್ಳಲಾಗಿದೆ.

**ಅಭ್ಯಾಸ**

**I. ಪದಗಳ ಅರ್ಥ ತಿಳಿಯಿರಿ :**

**ಅಡವಿ** – ಕಾಡು; ಅರಣ್ಯ.
**ಆಚಾರ** – ಒಳ್ಳೆಯ ನಡತೆ; ಸಂಪ್ರದಾಯ.
**ಕುದಿ** (ಕ್ರಿ) – ಸಂಕಟಪಡು; ಕೋಪದಿಂದ ಕೆರಳು.
**ಚೂಡಾಮಣಿ** – ರತ್ನದ ಆಭರಣ; ಶ್ರೇಷ್ಠವಾದುದು.
**ಪ್ರಭು** – ರಾಜ; ಯಜಮಾನ; ಒಡೆಯ.
**ಭಾವ** – ಸಹೋದರಿಯ ಗಂಡ
**ಸಂಸಾರ** – ಕುಟುಂಬ; ಲೌಕಿಕ ಜೀವನ
**ಹೊರಳು** (ಕ್ರಿ) – ಉರುಳು; ಬದಲಾಗು; ಬಾಗು.
**ಹಂಗಿಸು** (ಕ್ರಿ) – ಹೀಯಾಳಿಸು; ವ್ಯಂಗ್ಯಮಾಡು.
**ಅರಸ** – ರಾಜ; ಶ್ರೇಷ್ಠ.
**ಇಟ್ಟು** (ಕ್ರಿ) – ಇಡುವುದು; ಊಟಕ್ಕೆ ನೀಡಿ.
**ಕೈಲಾಸ** – ಶಿವನ ನೆಲೆ
**ಜ್ಯೋತಿ** – ಬೆಳಕು; ದೀಪ.
**ಬಂಗಾರ** – ಚಿನ್ನ; ಹೇಮ; ಕನಕ.
**ಮದ್ದಿನ** – ಮಧ್ಯಾಹ್ನ; ನಡು ಹಗಲು.
**ರೊಕ್ಕ** – ಹಣ; ರೂಪಾಯಿ.
**ಸಾಗರ** – ಸಮುದ್ರ ; ಕಡಲು.
**ಹೊತ್ತು** – ಸಮಯ; ಕಾಲ.
**ಹಡೆದವ್ವ** – ಜನ್ಮ ನೀಡಿದ ತಾಯಿ.
**ಸಾಂರಾಜ್ಯ** – ಸಾಮ್ರಾಜ್ಯ; ರಾಜನ ಆಡಳಿತಕ್ಕೆ ಒಳಪಟ್ಟ ವಿಸ್ತಾರವಾದ ರಾಜ್ಯ.
***ಸಂತೆ*** – *ನಿಯಮಿತ ಸ್ಥಳ ಹಾಗೂ ದಿನದಲ್ಲಿ ಕೊಂಡುಕೊಳ್ಳುವುದಕ್ಕೆ ಜನ ಸೇರುವುದು.*

**2.ಪ್ರಶ್ನೆಗಳು :**

**ಅ) ಕೆಳಗೆ ನೀಡಿರುವ 'ಅ' ಪಟ್ಟಿಯೊಂದಿಗೆ 'ಬ' ಪಟ್ಟಿಯನ್ನು ಹೊಂದಿಸಿ ಬರೆದಿದೆ.**

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| 1) ಅಕ್ಕ | ಈ) ಭಾವ |
| 2) ಮಕ್ಕಳು | ಉ) ಮನೆಮಾರು |
| 3) ರೊಕ್ಕ | ಆ) ಸಂತೆ |
| 4) ಸಂಸಾರ | ಅ) ಸಾಗರ |

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ತಾಯಿ ತನ್ನ ಮಗನು ಯಾವ ಗುಣಗಳಿಗೆ ಒಡೆಯನಾಗಬೇಕೆಂದು ಬಯಸುತ್ತಾಳೆ?
ತಾಯಿ ತನ್ನ ಮಗನು ಆಚಾರಕ್ಕೆ, ನೀತಿಗೆ, ಮಾತಿಗೆ, ಜಗತ್ತಿಗೆ, ಒಡೆಯನಾಗಬೇಕೆಂದು ಬಯಸುತ್ತಾಳೆ.
2. ಜನಪದರು ಸಂಸಾರವನ್ನು ಯಾವುದಕ್ಕೆ ಹೋಲಿಸಿದ್ದಾರೆ?
ಜನಪದರು ಸಂಸಾರವನ್ನು ಸಾಗರಕ್ಕೆ ಹೋಲಿಸಿದ್ದಾರೆ.
3. ಈಸಬಲ್ಲವನಿಗೆ ಸಂಸಾರವೆಂಬ ಸಾಗರ ಹೇಗೆ ಕಾಣಿಸುತ್ತದೆ?
ಈಸಬಲ್ಲವನಿಗೆ ಸಂಸಾರವೆಂಬ ಸಾಗರ ಹೊಳೆಯಂತೆ ಕಾಣಿಸುತ್ತದೆ.
4. ಸಂಸಾರವೆಂಬ ಸಾಗರದಲ್ಲಿ ಈಸುವುದು ಎಂದರೇನು?
ಸಂಸಾರದಲ್ಲಿ ಎಷ್ಟೇ ನೋವು ದುಃಖಗಳಿದ್ದರೂ ಈಸಿ ಜಯಿಸಬೇಕು ಎಂಬುದು ಇದರ ಅರ್ಥ.
5. ಜನಪದರ ಪ್ರಕಾರ ಜನರೆಲ್ಲ ನೆಂಟರಾಗುವುದು ಯಾವಾಗ?
ಜನಪದರ ಪ್ರಕಾರ ಉಂಡಾಗ, ಉಡುವಾಗ ಜನರೆಲ್ಲ ನೆಂಟರಾಗುವರು.

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ತಾಯಿ ತನ್ನ ಮಗು ಯಾವ ಗುಣಗಳಿಂದ ಜಗಕ್ಕೆ ಜ್ಯೋತಿಯಾಗಬೇಕೆಂದು ಬಯಸುತ್ತಾಳೆ?

ತಾಯಿ ತನ್ನ ಮಗ ಆಚಾರಕ್ಕೆ ಅರಸನೂ, ನೀತಿಗೆ ಪ್ರಭುವಾಗಿ, ಮಾತಿನಲ್ಲಿ ಚೂಡಾಮಣಿಯಾಗಿ, ಜ್ಯೋತಿಯೇ ಆಗಬೇಕು ಜಗಕ್ಕೆಲ್ಲ ಎಂದು ಬಯಸುತ್ತಾಳೆ.

2. ತಾಯಿ ತನ್ನ ಮಗುವಿನಲ್ಲಿ ಒಳ್ಳೆಯ ಗುಣಗಳು ಇರಬೇಕೆಂದು ಏಕೆ ಬಯಸುತ್ತಾಳೆ?
ಮಗುವು ಮಾನವೀಯ ಮೌಲ್ಯಗಳಿಂದ ಕೂಡಿದ ಬದುಕನ್ನು ಸಮಾಜದಲ್ಲಿ ನಡೆಸಬೇಕಾದರೆ ತನ್ನ ಮಗನಿಗೆ ಗೌರವಾದಾರಗಳು ದೊರೆಯಬೇಕಾದರೆ ಎಲ್ಲರ ತಾಯಿಯಂತೆ ತನ್ನ ಮಗನು ಶ್ರೇಷ್ಠನೆನಿಸಿಕೊಳ್ಳಬೇಕಾದರೆ ಮಗುವಿನಲ್ಲಿ ಒಳ್ಳೆಯ ಗುಣಗಳು ಇರಬೇಕೆಂದು ಬಯಸುತ್ತಾಳೆ.

3. ಜನಪದರು ಸಂಸಾರವನ್ನು ಸಾಗರಕ್ಕೆ ಏಕೆ ಹೋಲಿಸಿದ್ದಾರೆ?
ಸಂಸಾರವು ಸಾಗರದಂತೆ ಇಲ್ಲಿ ಉಂಟಾಗುವ ಅಲೆಗಳ ರೌದ್ರ ನರ್ತನ ಕಷ್ಟ ದುಃಖಗಳಿಗೆ ಸಮಾನವಾದುದು. ಯಾರಲ್ಲಿ ಎಲ್ಲವನ್ನು ಎದುರಿಸುವ ಧೈರ್ಯ, ಸ್ವಾಭಿಮಾನ, ಆತ್ಮವಿಶ್ವಾಸವಿರುವುದೊ ಅವರು ಈ ಸಂಸಾರವೆಂಬ ಸಾಗರದಲ್ಲಿ ಈಜಿ ದಡ ಸೇರುತ್ತಾರೆ ಎಂದು ಜನಪದರು ಹೇಳಿದ್ದಾರೆ.

4. ಓದಿನ ಮಹತ್ವವನ್ನು ಜನಪದರು ಯಾವ ರೀತಿ ತಿಳಿಸಿದ್ದಾರೆ?
ಜನಪದರು ಓದಿಗೆ ಹೆಚ್ಚಿನ ಮಹತ್ವವನ್ನು ನೀಡಿದ್ದಾರೆ. ಓದುವುದರಿಂದ ಮಾತ್ರ ಅವನು ಜ್ಞಾನಿಯಾಗಬಲ್ಲ. ಕಷ್ಟಪಟ್ಟವನಿಗೆ ಸುಖ ಸಿಗುವಂತೆ ಓದಿದವನಿಗೆ ಮಾತ್ರ ಕೈಲಾಸದ ಸ್ವರ್ಗಸುಖ ಸಿಗಲು ಸಾಧ್ಯ ಎಂದು ತಿಳಿಸಿದ್ದಾರೆ.

5. 'ಬಂಗಾರದ ಬಳೆತೊಟ್ಟು ಬೈಬೇಡ ಬಡವರ'– ಎನ್ನುವ ಮಾತಿನಲ್ಲಿ ಜನಪದರ ಯಾವ ಭಾವನೆಗಳಿವೆ?
ನಮ್ಮ ಜೀವನದಲ್ಲಿ ಸಿಗುವ ಶ್ರೀಮಂತಿಕೆ ಅಲ್ಪಕಾಲದ್ದಾಗಿರುತ್ತದೆ. ಅದು ನೀರಿನ ಮೇಲೆ ಇರುವ ಗುಳ್ಳೆಯಂತೆ ಇರುತ್ತದೆ. ಇದನ್ನು ಅರ್ಥಮಾಡಿಕೊಳ್ಳದ ಶಿವಕೊಟ್ಟ ಸಂಪತ್ತನ್ನು ದರ್ಪ ತೋರುವ ಸಲುವಾಗಿ ಕೈಯಲ್ಲಿ ಬಂಗಾರದ ಬಳೆ ತೊಟ್ಟು, ಬಡವರ ಶೋಷಣೆ ಮಾಡುವುದು ಸರಿಯಲ್ಲ. ಏಕೆಂದರೆ ಶ್ರೀಮಂತಿಕೆ ಸ್ಥಿರವಾದುದಲ್ಲ ಎಂಬ ಭಾವನೆ ಜನಪದರಲ್ಲಿದೆ.

6. ಶ್ರೀಮಂತಿಕೆಯ ದರ್ಪವನ್ನು ಬಡವರ ಮೇಲೆ ಏಕೆ ತೋರಬಾರದು?
ದೇವರ ಸೃಷ್ಟಿಯಲ್ಲಿ ಎಲ್ಲರೂ ಸಮಾನರು, ಯಾರೂ ದೊಡ್ಡವರಲ್ಲ, ಯಾರೂ ಚಿಕ್ಕವರಲ್ಲ. ಸಿರಿತನ ಬಂದಾಗ ಇರುವವರು ಇಲ್ಲದವರಿಗೆ ದಾನ, ಧರ್ಮ ಮಾಡಿ ಬದುಕುವುದೇ ನಿಜವಾದ ಜೀವನ. ಇದನ್ನು ಬಿಟ್ಟು ಬಡವರ ಮೇಲೆ ದರ್ಪ ತೋರಿದರೆ ಅದು ಎಂದಿಗೂ ಒಳ್ಳೆಯ ಫಲ ನೀಡುವುದಿಲ್ಲ. ಆದ್ದರಿಂದ ಶ್ರೀಮಂತಿಕೆಯ ದರ್ಪವನ್ನು ಬಡವರ ಮೇಲೆ ತೋರಬಾರದು.

7. ನಮ್ಮ ಯಾವ ವರ್ತನೆಗಳು ಶಿವನಿಗೆ ಒಪ್ಪಿಗೆಯಾಗುವುದಿಲ್ಲ ಎಂಬುದು ಜನಪದರ ಅಭಿಪ್ರಾಯವಾಗಿದೆ?
ಇನ್ನೊಬ್ಬರಿಗೆ ಕೊಟ್ಟು ಸಂಕಟಪಡುವುದು, ಇಟ್ಟು ಹಂಗಿಸುವುದು, ಎಷ್ಟೊಂದು ತಿಂದರೆನ್ನುವ ಈ ಮೂರು ಶಿವನಿಗೆ ಒಪ್ಪಿಗೆಯಾಗುವುದಿಲ್ಲ ಎಂಬುದು ಜನಪದರ ಅಭಿಪ್ರಾಯವಾಗಿದೆ.

8. ಭಾವ, ಸಂತೆ ಹಾಗೂ ಮನೆ ಇವುಗಳ ಇರುವಿಕೆ ಸಾಧ್ಯವಾಗುವುದು ಯಾವಾಗ?
ಮನೆಯಲ್ಲಿ ಅಕ್ಕ ಇದ್ದರೆ ಭಾವ ಆಕೆಯನ್ನು ವಿವಾಹವಾಗಿ ಹೊಸ ಸಂಬಂಧ ಬೆಳೆಯುವಂತೆ, ಕೈಯಲ್ಲಿ ಹಣವಿದ್ದರಷ್ಟೇ ಸಂತೆಯಲ್ಲಿ ಎಲ್ಲ ವಸ್ತುಗಳ ಪರಿಚಯವಾಗುವಂತೆ ಒಂದು ಮನೆ ಮನೆಯೆಂದು ತಿಳಿಯಬೇಕಾದರೆ ಅಲ್ಲಿ ಮಕ್ಕಳಿರುವಂತೆ, ನಮಗೆ ಭಾವ, ಸಂತೆ, ಮನೆಗಳ ಇರುವಿಕೆ ಸಾಧ್ಯವಾಗುತ್ತದೆ.

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಜನಪದರ ಪ್ರಕಾರ ನಮ್ಮ ನಡೆನುಡಿಗಳು ಶಿವನಿಗೆ ಯಾವಾಗ ಪ್ರಿಯವಾಗುತ್ತವೆ?
ಜನಪದರ ಪ್ರಕಾರ ನಮ್ಮ ನಡೆನುಡಿಗಳು ಶಿವನಿಗೆ ಪ್ರಿಯವಾಗಬೇಕಾದರೆ ನಮ್ಮ ಬದುಕು ಅನುಕರಣೀಯವಾಗಿರಬೇಕು. ಅದು ಮಾದರಿ ಎನಿಸಬೇಕು. ಕಷ್ಟ ಬಂದಾಗ ಎದೆಗುಂದದೆ ಹೋರಾಡಿ ಬದುಕುವ ಛಲವಂತಿಕೆ ಇದ್ದಾಗ, ಓದಿ ತಾನು ಜ್ಞಾನಿಯಾಗಬೇಕು ಎಂಬ ಮನೋಧರ್ಮ ಇದ್ದಾಗ, ಸಿರಿತನ ಬಡತನದಲ್ಲಿ ಎಲ್ಲರನ್ನು ಸಮಾನವಾಗಿ ಕಾಣುವ ಹೃದಯವಂತಿಕೆ ಇದ್ದಾಗ, ಕೊಟ್ಟು ಕುದಿಯದೆ, ಇನ್ನೊಬ್ಬರಿಗೆ ಇಟ್ಟು ಹಂಗಿಸದೆ ಎಷ್ಟುಂಡರೆಂದು ಆಡಿಕೊಳ್ಳದಿದ್ದಾಗ, ನಮ್ಮ ನಡೆನುಡಿಗಳನ್ನು ಶಿವನು ಮೆಚ್ಚಿಕೊಳ್ಳುತ್ತಾನೆ. ಆಗ ಶಿವನಿಗೆ ನಾವು ಪ್ರೀಯರಾಗುತ್ತೇವೆ.

2. 'ಸುಖಕ್ಕೆ ಬರುವ ಜನ ಕಷ್ಟಕ್ಕೆ ಬಾರರು' ಎನ್ನುವ ಮಾತು ಜನಪದರ ಹಾಡಿನಲ್ಲಿ ಹೇಗೆ ವ್ಯಕ್ತವಾಗಿದೆ?
ಸಿರಿತನ ಬಂದಾಗ ಊರಿನ ಜನರೆಲ್ಲ ನೆಂಟರಾಗುವವರು. ಬಂಧು ಬಳಗದವರು ಬೆಲ್ಲದ ಸಿಹಿಗೆ ಮುತ್ತಿಕೊಳ್ಳುವ ಇರುವೆಯಂತೆ ಇರುತ್ತಾರೆ. ಅದೇ ಸಿರಿತನ ಕಳೆದು ಬಡತನ ಆವರಿಸಿ ಅಡವಿ ಸೊಪ್ಪು ತಿಂದು ಬದುಕುವ ಸಮಯ ಬಂದಾಗ ಒಡಹುಟ್ಟಿದ ಅಣ್ಣನು ಕೂಡ ಮುಖ ತಿರುಗಿಸಿ ನೋಡುವುದಿಲ್ಲ. ಇದ್ದಾಗ ಊರೆಲ್ಲ ನೆಂಟರು, ಇಲ್ಲದಿರುವಾಗ ಯಾರೂ ಸಹಾಯಕ್ಕೆ ಧಾವಿಸುವುದಿಲ್ಲ. ಆದ್ದರಿಂದ 'ಸುಖಕ್ಕೆ ಬರುವ ಜನ ಕಷ್ಟಕ್ಕೆ ಬಾರರು' ಎಂದು ಜನಪದರು ಹಾಡಿನಲ್ಲಿ ತಮ್ಮ ಭಾವನೆ ವ್ಯಕ್ತಪಡಿಸಿದ್ದಾರೆ.

3. 'ಜ್ಯೋತಿಯೇ ಆಗು ಜಗಕೆಲ್ಲ' ತ್ರಿಪದಿಗಳಲ್ಲಿ ವ್ಯಕ್ತವಾಗಿರುವ ಜನಪದರ ಭಾವನೆಗಳೇನು?
ಹೆತ್ತ ತಾಯಿಗೆ ತನ್ನ ಮಗುವಿನ ಮೇಲೆ ಅತೀವವಾದ ಪ್ರೀತಿ ಇರುತ್ತದೆ. ಜನಪದರಲ್ಲಿ ತಾಯಿ ಮತ್ತು ಮಗುವಿಗೆ ವಿಶೇಷ ಸ್ಥಾನವಿದೆ. ಮಗು ಬೆಳೆದು ದೊಡ್ಡವನಾದ ಮೇಲೆ ಹೇಗೆ ಬದುಕಬೇಕೆಂಬುದನ್ನು ತಾಯಿ ಈ ರೀತಿ ಬಯಸುತ್ತಾಳೆ. ಒಳ್ಳೆಯ ನಡತೆ ಹೊಂದುವ ಮೂಲಕ ಅರಸನಾಗಿ ಬಾಳು, ನೀತಿಯನ್ನು ಅಳವಡಿಸಿಕೊಂಡು ಯಜಮಾನನಾಗಿ ಬಾಳು, ಹೇಳುವ

ಪ್ರತಿ ಮಾತಿನಲ್ಲಿ ಸತ್ಯವಿರಲಿ, ಈ ಮೇಲಿನ ಗುಣಗಳಿಂದಾಗಿ ಉತ್ತಮ ರತ್ನದಂತೆ ನಿನ್ನ ಬಾಳು ಸದಾಕಾಲ ಹೊಳೆಯುವಂತಾಗಲಿ, ಆ ಬೆಳಕಿನ ಜ್ಯೋತಿ ಜಗವೆಲ್ಲ ಪಸರಿಸಲಿ ಎಂದು ಜನಪದರು ತ್ರಿಪದಿಯಲ್ಲಿ ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

4. ಕಂದ, ಹಡೆದವ್ವ ಮತ್ತು ಶ್ರೀಮಂತಿಕೆಯ ಬಗ್ಗೆ ಜನಪದ ತ್ರಿಪದಿಗಳಲ್ಲಿ ವ್ಯಕ್ತವಾಗಿರುವ ಆಶಯವೇನು?

ಜನಪದರಲ್ಲಿ ಮಗು ಮತ್ತು ತಾಯಿಯ ಪ್ರೀತಿಗೆ ಹೆಚ್ಚಿನ ಸ್ಥಾನವಿದೆ. ಮಕ್ಕಳ ಮೇಲೆ ಅವಳು ತೋರುವ ಪ್ರೀತಿ–ವಾತ್ಸಲ್ಯಕ್ಕೆ ಕೊನೆಯೆಂಬುದಿಲ್ಲ. ಅಕ್ಕ ಇದ್ದರೆ ಭಾವ ಬರುವಂತೆ, ಹಣವಿದ್ದರೆ ಸಂತೆಯ ಬೆಲೆ ತಿಳಿಯುವಂತೆ, ಮಕ್ಕಳಿದ್ದರೆ ಮನೆಮಾರು ಎನಿಸುವಂತೆ, ಹೆತ್ತ ತಾಯಿಯೊಬ್ಬಳು ಇದ್ದರೆ ನಮಗೆ ಅದು ದೊಡ್ಡ ಸಾಮ್ರಾಜ್ಯವಿದ್ದಂತೆ ಭಾಸವಾಗುತ್ತದೆ. ಹೆತ್ತ ತಾಯಿ ಇರುವ ಮನೆಯಲ್ಲಿ ಸುಖ, ಶಾಂತಿ, ನೆಮ್ಮದಿ, ಪ್ರೀತಿ, ವಾತ್ಸಲ್ಯ ತುಂಬಿ ತುಳುಕುತ್ತದೆ. ಆದ್ದರಿಂದ ಮಗು ಮತ್ತು ಹಡೆದವ್ವ ಶ್ರೇಷ್ಠ ಎಂಬ ಭಾವನೆ ಜನಪದರಲ್ಲಿದೆ.

ನಮ್ಮ ಜೀವನದಲ್ಲಿ ಸಿಗುವ ಶ್ರೀಮಂತಿಕೆ ಅಲ್ಪಕಾಲದ್ದಾಗಿರುತ್ತದೆ. ಅದು ನೀರಿನ ಮೇಲೆ ಇರುವ ಗುಳ್ಳೆಯಂತೆ ಇರುತ್ತದೆ. ಇದನ್ನು ಅರ್ಥಮಾಡಿಕೊಳ್ಳದ ಶಿವಕೊಟ್ಟ ಸಂಪತ್ತನ್ನು ದರ್ಪ ತೋರುವ ಸಲುವಾಗಿ ಕೈಯಲ್ಲಿ ಬಂಗಾರದ ಬಳೆ ತೊಟ್ಟು, ಬಡವರ ಶೋಷಣೆ ಮಾಡುವುದು ಸರಿಯಲ್ಲ. ಏಕೆಂದರೆ ಶ್ರೀಮಂತಿಕೆ ಸ್ಥಿರವಾದುದಲ್ಲ ಎಂಬ ಭಾವನೆ ಜನಪದರಲ್ಲಿದೆ.

**ಉ) ಸಂದರ್ಭದೊಡನೆ ವಿವರಿಸಿರಿ.**

1. ಜ್ಯೋತಿಯೇ ಆಗು ಜಗಕೆಲ್ಲ.

ಈ ವಾಕ್ಯವನ್ನು **'ಜನಪದ ಗೀತಾಂಜಲಿ' ಹಾಗೂ 'ಗರತಿಯ ಹಾಡು'** ಎಂಬ ಕೃತಿಯಿಂದ ಆಯ್ದ **ಜ್ಯೋತಿಯೇ ಆಗು ಜಗಕೆಲ್ಲ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಜನಪದರು ಹೇಳಿದ್ದಾರೆ. ಹೆತ್ತ ತಾಯಿ ತನ್ನ ಮಗನು ಒಳ್ಳೆಯ ನಡತೆ ಹೊಂದಿದ ಅರಸನಾಗಬೇಕು, ಯಜಮಾನನಾಗಬೇಕು, ರತ್ನದಂತೆ ಬಾಳು ಹೊಳೆಯಬೇಕು, ಜ್ಯೋತಿಯೇ ಆಗಿ ಕತ್ತಲಿನಲ್ಲಿರುವವರಿಗೆ ಬೆಳಕು ನೀಡಬೇಕು ಎಂದು ಹಾರೈಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

2. ಬಂಗಾರ ನಿನಗೆ ಸ್ಥಿರವಲ್ಲ.

ಈ ವಾಕ್ಯವನ್ನು **'ಜನಪದ ಗೀತಾಂಜಲಿ' ಹಾಗೂ 'ಗರತಿಯ ಹಾಡು'** ಎಂಬ ಕೃತಿಯಿಂದ ಆಯ್ದ **ಜ್ಯೋತಿಯೇ ಆಗು ಜಗಕೆಲ್ಲ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಜನಪದರು ಹೇಳಿದ್ದಾರೆ. ಸಿರಿವಂತಿಕೆ ಬಂದಾಗ ಬಡವರ ಮೇಲೆ ದರ್ಪ ತೋರುವುದು ಸರಿಯಲ್ಲ. ಶ್ರೀಮಂತಿಕೆ ಎಂಬುದು ಸ್ಥಿರವಾದುದಲ್ಲ ಎಂದು ತಿಳಿಸುವ ಸಮಯದಲ್ಲಿ ಈ ಮೇಲಿನ ಮಾತು ಬಂದಿದೆ.

3. ಇಟ್ಟು ಹಂಗಿಸಬೇಡ.

ಈ ವಾಕ್ಯವನ್ನು **'ಜನಪದ ಗೀತಾಂಜಲಿ' ಹಾಗೂ 'ಗರತಿಯ ಹಾಡು'** ಎಂಬ ಕೃತಿಯಿಂದ ಆಯ್ದ **ಜ್ಯೋತಿಯೇ ಆಗು ಜಗಕೆಲ್ಲ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಜನಪದರು ಹೇಳಿದ್ದಾರೆ. ನಮ್ಮ ನಡವಳಿಕೆಗಳು ಉತ್ತಮವಾಗಿದ್ದರೆ ಆ ಶಿವನ ಕೃಪೆಗೆ ಪಾತ್ರರಾಗಲು ಸಾಧ್ಯ. ಕೊಟ್ಟು ಕುದಿಯುವುದು, ಇಟ್ಟು ಹಂಗಿಸುವುದು, ಎಷ್ಟು ತಿಂದರೆಂದು ಅನ್ನುವುದು, ಈ ಮೂರು ಗುಣಗಳನ್ನು ಶಿವನು ಮೆಚ್ಚುವುದಿಲ್ಲ ಎಂದು ತಿಳಿಸುವ ಸಮಯದಲ್ಲಿ ಈ ಮೇಲಿನ ಮಾತು ಬಂದಿದೆ.

4. ಒಡಹುಟ್ಟಿದಣ್ಣ ಮುಖನೋಡ.

ಈ ವಾಕ್ಯವನ್ನು **'ಜನಪದ ಗೀತಾಂಜಲಿ' ಹಾಗೂ 'ಗರತಿಯ ಹಾಡು'** ಎಂಬ ಕೃತಿಯಿಂದ ಆಯ್ದ **ಜ್ಯೋತಿಯೇ ಆಗು ಜಗಕೆಲ್ಲ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಜನಪದರು ಹೇಳಿದ್ದಾರೆ. ಸಿರಿತನ ಬಂದಾಗ ಊರಿನ ಜನರೆಲ್ಲ ನೆಂಟರಾಗುವರು. ಬಂಧು ಬಳಗದವರು ಬೆಲ್ಲದ ಸಿಹಿಗೆ ಮುತ್ತಿಕೊಳ್ಳುವ ಇರುವೆಯಂತೆ ಇರುತ್ತಾರೆ. ಅದೇ ಸಿರಿತನ ಕಳೆದು ಬಡತನ ಆವರಿಸಿ ಅಡವಿ ಸೊಪ್ಪು ತಿಂದು ಬದುಕುವ ಸಮಯ ಬಂದಾಗ ಒಡಹುಟ್ಟಿದ ಅಣ್ಣನು ಕೂಡ ಮುಖ ತಿರುಗಿಸಿ ನೋಡುವುದಿಲ್ಲ ಎಂದು ತಿಳಿಸುವ ಸಮಯದಲ್ಲಿ ಈ ಮೇಲಿನ ಮಾತು ಬಂದಿದೆ.

**3. ಭಾಷಾಭ್ಯಾಸ :**

**ಅ) ಕೆಳಗಿನ ಪದಗಳಿಗೆ ಸಮಾನಾರ್ಥಕಗಳನ್ನು ಬರೆಯಿರಿ.**

ಅರಸ – ರಾಜ; ಒಡೆಯ, ಕಂದ – ಮಗು; ಕೂಸು, ಹಂಗಿಸು – ಮೂದಲಿಸು; ಹೀಯಾಳಿಸು,

ಬಂಗಾರ – ಚಿನ್ನ; ಅಪರಂಜಿ, ಅಡವಿ – ಕಾಡು; ವನ, ಸಾಗರ – ಸಮುದ್ರ; ಶರಧಿ.

**ಆ) ಕೆಳಗಿನ ಪದಗಳಿಗೆ ಗ್ರಾಂಥಿಕ ರೂಪ ಬರೆಯಿರಿ.**

ಬೈಬೇಡ – ಬಯ್ಯಬೇಡ, ಹೊರಳೋದು – ಹೊರಳುವುದು, ಸಾಂರಾಜ್ಯ – ಸಾಮ್ರಾಜ್ಯ, ನಮಗ – ನಮಗೆ

**ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

1. ಚೂಡಾಮಣಿ : ಸೀತೆಯು ತನ್ನ ಚೂಡಾಮಣಿ ಹಾರವನ್ನು ಆಂಜನೇಯನಿಗೆ ಕೊಟ್ಟಳು.
2. ಹಂಗಿಸು : ಶ್ರೀಮಂತರು ಬಡವರನ್ನು ಹಂಗಿಸುತ್ತಾರೆ.
3. ನೆಂಟರು : ನಮ್ಮ ಮನೆಯ ಹಬ್ಬಕ್ಕೆ ನೆಂಟರು ಬಂದಿದ್ದರು.
4. ಸ್ಥಿರ : ಬಂಗಾರ ಯಾರಿಗೂ ಸ್ಥಿರವಲ್ಲ.

**ಈ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕಗಳನ್ನು ಬರೆಯಿರಿ.**

ಪ್ರಭು x ಸೇವಕ, ಸ್ಥಿರ x ಅಸ್ಥಿರ, ನೀತಿ x ಅನೀತಿ, ಆಚಾರ x ಅನಾಚಾರ, ಬಡವ x ಶ್ರೀಮಂತ.

**ಉ) ಕೆಳಗಿನ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.**

**ಮಾದರಿ :** ಹಡೆದ + ಅವ್ವ = ಹಡೆದವ್ವ

ಜಗಕೆಲ್ಲ = ಜಗಕೆ + ಎಲ್ಲ, ಸಂಸಾರವೆಂಬುದು = ಸಂಸಾರ + ಎಂಬುದು,
ಎದೆಯುದ್ದ = ಎದೆ + ಉದ್ದ, ಎಷ್ಟುಂಡರೆಂದು = ಎಷ್ಟು + ಉಂಡರೆಂದು,
ಮಕ್ಕಳಿದ್ದರೆ = ಮಕ್ಕಳು + ಇದ್ದರೆ, ಒಡಹುಟ್ಟಿದಣ್ಣ = ಒಡಹುಟ್ಟಿ + ಅಣ್ಣ.

**ಋ) ಕೆಳಗೆ ನೀಡಿರುವ ಸಜಾತೀಯ ಮತ್ತು ವಿಜಾತೀಯ ಒತ್ತಕ್ಷರದ ಪದಗಳನ್ನು ವಿಂಗಡಿಸಿ ಬರೆಯಿರಿ.**

| ಸಜಾತೀಯ ಒತ್ತಕ್ಷರಗಳು | ವಿಜಾತೀಯ ಒತ್ತಕ್ಷರಗಳು |
|---|---|
| ಜಗಕೆಲ್ಲ, ಹೊತ್ತು, ಕೊಟ್ಟು,<br>ರೊಕ್ಕ, ಹುಟ್ಟಿದಣ್ಣ, ಸೊಪ್ಪು. | ಪ್ರಭು, ಜ್ಯೋತಿ, ರಾಜ್ಯ,<br>ಸ್ಥಿರ, ಬ್ಯಾಡ. |

## 4. ನನ್ನ ಹಾಗೆಯೆ – ಸು. ರಂ. ಎಕ್ಕುಂಡಿ

**ಕೃತಿಕಾರರ ಪರಿಚಯ :**

- **ಸು. ರಂ. ಎಕ್ಕುಂಡಿ** ಅವರ ಪೂರ್ಣ ಹೆಸರು **ಸುಬ್ಬಣ್ಣ ರಂಗನಾಥ ಎಕ್ಕುಂಡಿ.** ಇವರು ಹಾವೇರಿ ಜಿಲ್ಲೆಯ ರಾಣಿಬೆನ್ನೂರಿನಲ್ಲಿ 1923 ರಲ್ಲಿ ಜನಿಸಿದರು.
- ಇವರು ಆನಂದತೀರ್ಥ, ಸಂತಾನ, ಹಾವಾಡಿಗರ ಹುಡುಗ, ಮತ್ಸ್ಯಗಂಧಿ, ಬೆಳ್ಳಕ್ಕಿಗಳು, ಕಥನ ಕವನಗಳು, ಬಕುಳದ ಹೂವುಗಳು ಇನ್ನು ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಇವರಿಗೆ ಸೋವಿಯತ್‌ಲ್ಯಾಂಡ್ ನೆಹರೂ ಪ್ರಶಸ್ತಿ, ರಾಜ್ಯ ಶಿಕ್ಷಕ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿವೆ.
- ಪ್ರಸ್ತುತ ಪದ್ಯವನ್ನು ಅವರ **'ಕಥನ ಕವನಗಳು'** ಎಂಬ ಕವನ ಸಂಗ್ರಹದಿಂದ ಆಯ್ದುಕೊಳ್ಳಲಾಗಿದೆ.

**ಅಭ್ಯಾಸ**

**1. ಪದಗಳ ಅರ್ಥ ತಿಳಿಯಿರಿ :**

**ಅಭಯ** – ರಕ್ಷಣೆ
**ಚೆಂಬು** – ತಂಬಿಗೆ
**ದುಗ್ಧಹಾಸ** – ಹಾಲುನಗೆ; ಮುಗುಳ್ನಗೆ.
**ನುಡಿಯ ಹೊಳೆ** – ನಿರಂತರವಾಗಿ ಕೇಳಿ ಬರುವ ಮಾತು.
**ನೆರೆ** – ಗುಂಪುಸೇರು
**ಮಜ್ಜನ (ದ್ಭ)** – ಮಾರ್ಜನ(ತ್ಸ); ಸ್ನಾನ.
**ಮುಗಿಲು** – ಮೋಡ; ಎತ್ತರದ ಸ್ಥಾನ.
**ಮುಗ್ಧ** – ಸರಳ ಸ್ವಭಾವದ
**ಸೆಣಸು** – ಹೋರಾಡು
**ಹಚ್ಚಡ** – ಹೊದಿಕೆ
**ಹಮ್ಮು** – ಅಹಂಕಾರ.

**2. ಪ್ರಶ್ನೆಗಳು :**

**ಅ) ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಬಾಹುಬಲಿ ಮೂರ್ತಿ ಇರುವ ಬೆಟ್ಟದ ಹೆಸರು **ಇಂದ್ರಗಿರಿ**
2. ಬಾಹುಬಲಿಯ ಅಣ್ಣನ ಹೆಸರು **ಭರತ**
3. ಬಾಹುಬಲಿಯು ಹುಟ್ಟು ಸಾವು ತಿಳಿಯಲು ಕಂಡುಕೊಂಡ ದಾರಿ **ತಪಸ್ಸು**

4. ಸು.ರಂ.ಎಕ್ಕುಂಡಿಯವರ **<u>ಬಕುಳದ ಹೂವುಗಳು</u>** ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ದೊರೆತಿದೆ.

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಬಾಹುಬಲಿಯನ್ನು ಕಂಡು ಮಗುವು ಅಜ್ಜನನ್ನು ಏನೆಂದು ಕೇಳಿತು?
ಅಜ್ಜನನ್ನು ಮಗುವು 'ಈತನಾರು ತಾತ ಇಲ್ಲಿ ನಿಂತು ನೋಡುತ್ತಿರುವನು ಇಂದ್ರಗಿರಿಯ ನೆತ್ತಿಯಲ್ಲಿ ಏನು ಮಾಡುತಿರುವನು?' ಎಂದು ಕೇಳಿತು.
2. ಬಾಹುಬಲಿಯ ಏಕಾಂಗಿತನವನ್ನು ಕಂಡು ಮಗುವು ಕುತೂಹಲದಿಂದ ಕೇಳಿದ ಪ್ರಶ್ನೆಗಳಾವುವು?
ಬಾಹುಬಲಿಯ ಏಕಾಂಗಿತನವನ್ನು ಕಂಡು ಮಗುವು ಕುತೂಹಲದಿಂದ 'ಇಲ್ಲಿ ಏಕೆ ಬಂದು ನಿಂತ? ಇಷ್ಟು ದೂರ! ಎತ್ತರ! ಭಯವಾಗದೆ ಇವನಿಗಿಲ್ಲಿ ಯಾರೂ ಇಲ್ಲ ಹತ್ತಿರ' ಎಂದು ಪ್ರಶ್ನೆಗಳನ್ನು ಕೇಳಿತು.
3. ಬಾಹುಬಲಿ ಯಾವ ಮೌಲ್ಯಗಳ ಸಂಕೇತ?
ಬಾಹುಬಲಿ ಸ್ವಾಭಿಮಾನ, ತ್ಯಾಗ, ಹಾಗೂ ಅಹಿಂಸೆ ಮೌಲ್ಯಗಳ ಸಂಕೇತ.
4. ಬಾಹುಬಲಿಯ ತಪಸ್ಸು ಯಾವ ರೀತಿ ಇತ್ತು?
ಬಾಹುಬಲಿಯ ತಪಸ್ಸು ಹುಟ್ಟು ಸಾವಿನ ಆಚೆಗಿರುವ ಹೊಳೆಯುವ ಹಾದಿ ನೋಡುವಂತೆ ಇತ್ತು.
5. ಬಾಹುಬಲಿ ಮೂರ್ತಿಯು ಮಜ್ಜನದ ಸಂದರ್ಭದಲ್ಲಿ ಹೇಗೆ ಗೋಚರಿಸುತ್ತದೆಂದು ಕವಿ ವರ್ಣಿಸಿದ್ದಾರೆ?
ಬಾಹುಬಲಿ ಮೂರ್ತಿಯು ಮಜ್ಜನದ ಸಂದರ್ಭದಲ್ಲಿ ಹಾಲಿನಿಂದ ಅಭಿಷೇಕ ಮಾಡಿದ ಮುದ್ದುಮುಖದ ಮುಗುಳ್ನಗೆ ಚೆಲ್ಲುವವನ ರೀತಿಯಲ್ಲಿ ಗೋಚರಿಸುತ್ತಾನೆ.
6. ಸೂರ್ಯಚಂದ್ರರು ಬಾಹುಬಲಿಗೆ ಏಕೆ ನಮಿಸಿದರು?
ಬಾಹುಬಲಿಯು ಸೂರ್ಯ ಚಂದ್ರರಿಗಿಂತ ದೀಪದ ತೇಜಸ್ಸಿನಂತೆ ಕಂಗೊಳಿಸುವುದನ್ನು ನೋಡಿ ಬಾಹುಬಲಿಗೆ ನಮಿಸಿದರು.
7. ಮಗುವಿನ ಮುಗ್ಧ ನಂಬಿಕೆಗೆ ಗೊಮ್ಮಟನ ಪ್ರತಿಕ್ರಿಯೆ ಏನು?
ಮಗುವಿನ ಮುಗ್ಧ ನಂಬಿಕೆಗೆ ಗೊಮ್ಮಟನ ಪ್ರತಿಕ್ರಿಯೆ ಮುಗುಳ್ನಗೆ ಆಗಿತ್ತು.
8. ಭರತ ಬಾಹುಬಲಿಯರ ಸೆಣಸಾಟದ ಫಲಿತಾಂಶವೇನು?
ಬಾಹುಬಲಿ ಗೆದ್ದ ರಾಜ್ಯವನ್ನು ಅಣ್ಣನಿಗೆ ಒಪ್ಪಿಸಿ ತಾನು ವೈರಾಗ್ಯಪರನಾಗಿ ತಪಸ್ಸಿಗೆ ತೆರಳುತ್ತಾನೆ.

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಅಜ್ಜನು ಬಾಹುಬಲಿಯ ಮೂರ್ತಿ ಮತ್ತು ಕೀರ್ತಿಯ ಬಗ್ಗೆ ಮಗುವಿಗೆ ಏನು ಹೇಳಿದನು?
ಬಾಹುಬಲಿಯ ಮೂರ್ತಿ ಧೀರತನದ ಪ್ರತೀಕವಾಗಿ ಮತ್ತು ಕೀರ್ತಿಯು ಪ್ರತಿಯೊಬ್ಬರ ನುಡಿಯ ಹೊಳೆಗಳಲ್ಲಿ ತುಂಬಿ ಹರಿಯುತ್ತದೆ ಎಂದು 'ಅಜ್ಜನು ಬಾಹುಬಲಿಯ ಮೂರ್ತಿ ಮತ್ತು ಕೀರ್ತಿಯ ಬಗ್ಗೆ ಮಗುವಿಗೆ ಹೇಳಿದರು.
2. ಬಾಹುಬಲಿ ತಪಸ್ಸಿಗೆ ಹೋಗಲು ಕಾರಣವೇನು?
ಭರತ ಮತ್ತು ಬಾಹುಬಲಿ ಇಬ್ಬರ ನಡುವೆ ರಾಜ್ಯಕ್ಕಾಗಿ ಯುದ್ಧ ನಡೆಯುತ್ತದೆ. ಯುದ್ಧದಲ್ಲಿ ಬಾಹುಬಲಿಯು ತನ್ನ ಅಣ್ಣನಾದ ಭರತನನ್ನು ಮುಷ್ಟಿಯುದ್ಧ, ದೃಷ್ಟಿಯುದ್ಧ, ಹಾಗೂ ಜಲಯುದ್ಧಗಳಲ್ಲಿ ಸೋಲಿಸುತ್ತಾನೆ. ಇದರಿಂದ ಅವಮಾನಿತನಾದ ಭರತನು ಬಾಹುಬಲಿಯನ್ನು ಕೊಲ್ಲಲು ಮುಂದಾಗುತ್ತಾನೆ. ಇದರಿಂದ ಬೇಸರಗೊಂಡ ಬಾಹುಬಲಿ ಗೆದ್ದ ರಾಜ್ಯವನ್ನು ಭರತನಿಗೆ ಒಪ್ಪಿಸಿ ತಪಸ್ಸನ್ನಾಚರಿಸಲು ತೆರಳುತ್ತಾನೆ.
3. ಬಾಹುಬಲಿಯು ತನ್ನ ಹಾಗೆಯೆ ಎಂದು ಮಗು ಭಾವಿಸಿದುದು ಏಕೆ?
ಮಗುವಿಗೆ ಅಮ್ಮ ಮಜ್ಜನ ಮಾಡಿಸುವಾಗ ಮೊದಲು ಎಣ್ಣೆ ಹಚ್ಚಿ ಗೊಮ್ಮಟನಂತೆಯೇ ನಿಲ್ಲಿಸುವುದನ್ನು ಅರಿತ ಮಗು ತನ್ನಂತೆ ಬಾಹುಬಲಿಯು ಮಜ್ಜನ ಮಾಡಿಸಿಕೊಳ್ಳಲು 'ತನ್ನ ಹಾಗೆಯೆ' ನಿಂತಿದ್ದಾನೆ ಎಂದು ಮಗು ಭಾವಿಸಿತು.

**ಈ) ಸುಮಾರು ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. 'ನೀನು ಸೋತುಗೆದ್ದೆ. ಅಣ್ಣ, ನಾನು ಗೆದ್ದು ಸೋತೆನು' ಎಂದು ಬಾಹುಬಲಿಯು ಹೇಳಿದ ಪ್ರಸಂಗದ ಸ್ವಾರಸ್ಯವನ್ನು ವಿವರಿಸಿರಿ.
ವೃಷಭನಾಥನ ಮಕ್ಕಳಾದ ಭರತ ಮತ್ತು ಬಾಹುಬಲಿ ಇಬ್ಬರ ನಡುವೆ ರಾಜ್ಯಕ್ಕಾಗಿ ಯುದ್ಧ ನಡೆಯುತ್ತದೆ. ಯುದ್ಧದಲ್ಲಿ ಬಾಹುಬಲಿಯು ತನ್ನ ಅಣ್ಣನಾದ ಭರತನನ್ನು ಮುಷ್ಟಿಯುದ್ಧ, ದೃಷ್ಟಿಯುದ್ಧ, ಹಾಗೂ ಜಲಯುದ್ಧಗಳಲ್ಲಿ ಸೋಲಿಸುತ್ತಾನೆ. ಇದರಿಂದ ಅವಮಾನಿತನಾದ ಭರತನು ಬಾಹುಬಲಿಯನ್ನು ಕೊಲ್ಲಲು ಮುಂದಾಗುತ್ತಾನೆ. ಇದರಿಂದ ಬೇಸರಗೊಂಡ ಬಾಹುಬಲಿ ಗೆದ್ದ ರಾಜ್ಯವನ್ನು ಭರತನಿಗೆ ಒಪ್ಪಿಸಿ ತಪಸ್ಸಗೆ ಹೊರಡಲು ಸಿದ್ಧನಾಗುವಾಗ ಅಣ್ಣ ನೀನು ಸೋತು ಈಗ ಎಲ್ಲವನ್ನು ಗೆದ್ದೆ. ಆದರೆ ನಾನು ಮೊದಲು ಗೆದ್ದು ಈಗ ಸೋತೆ ಎಂದು ತಿಳಿಸಿದನು. ಪಶ್ಚಾತ್ತಾಪ ಹೊಂದಿ ಮನಸ್ಸು ನಿಯಂತ್ರಿಸಲು, ಮುಕ್ತಿಮಾರ್ಗ ಅರಿಯಲು ಗೆದ್ದು ಸೋತ ಬಾಹುಬಲಿ ತಪಸ್ಸಿಗೆ ಹೊರಟು ಹೋದನು ಎಂಬುದು ಈ ಪ್ರಸಂಗದ ಸ್ವಾರಸ್ಯವಾಗಿದೆ.
2. 'ನನ್ನ ಹಾಗೆಯೇ' ಕವನದ ಭಾವಾರ್ಥವನ್ನು ಬರೆಯಿರಿ

ಐತಿಹಾಸಿಕ, ಆಧ್ಯಾತ್ಮಕ, ಹಿನ್ನೆಲೆ ಹೊಂದಿರುವ ಶ್ರವಣಬೆಳಗೊಳದ ಗೊಮ್ಮಟಮೂರ್ತಿಯ ಪರಿಚಯವನ್ನು ತಾತ, ಮೊಮ್ಮಗನಿಗೆ ಪರಿಚಯಿಸುವ ಶೈಲಿಯಲ್ಲಿ ಕವಿ ಸು.ರಂ.ಎಕ್ಕುಂಡಿಯವರು ಬಹಳ ಸೊಗಸಾಗಿ ವಿವರಿಸಿದ್ದಾರೆ. ಸ್ವಾಭಿಮಾನ, ತ್ಯಾಗ ಹಾಗೂ ಅಹಿಂಸೆಯ ಪ್ರತೀಕವಾದ ಗೊಮ್ಮಟಮೂರ್ತಿಗೆ ಹನ್ನೆರಡು ವರ್ಷದಲ್ಲೊಮ್ಮೆ ಮಹಾಮಸ್ತಕಾಭಿಷೇಕ ನಡೆಯುತ್ತದೆ. ಈ ಮಹಾಮಜ್ಜನ ದಿನದಂದು ಮಗುವೊಂದು ತನ್ನ ಅಜ್ಜನೊಂದಿಗೆ ಶ್ರವಣಬೆಳಗೊಳದ ಇಂದ್ರಗಿರಿಗೆ ಭೇಟಿ ನೀಡಿತ್ತು.

ಆಗ ನಡೆದ ಅಜ್ಜ–ಮೊಮ್ಮಗನ ಸಂಭಾಷಣೆಯ ಕಥಾನಾಟಕ ಶೈಲಿ ಇದಾಗಿದೆ. ಮೊಮ್ಮಗನು ತನ್ನ ಅಜ್ಜನಿಗೆ ಇಂದ್ರಗಿರಿಯ ಬೆಟ್ಟದ ಮೇಲೆ ನಿಂತು ನೋಡುತ್ತಿರುವವನು ಯಾರು? ಅಲ್ಲೇನು ಮಾಡುತ್ತಿದ್ದಾನೆ? ಎಂಬ ಪ್ರಶ್ನೆಗೆ, ಅಜ್ಜನು ಇವನೇ ಬಾಹುಬಲಿ, ಧೀರತನದ ಮೂರ್ತಿ, ಇವನ ಕೀರ್ತಿ ದೇಶದಲ್ಲೆಲ್ಲ ಹರಡಿದೆ. ಬೆಟ್ಟ ಹತ್ತುವವರ ಇಳಿಯುವವರ ನಿಂತು ನೋಡುತಿರುವನು. ಹತ್ತುವಾಗ ಬಳಲಿದವರಿಗೆಲ್ಲ ಕೈ ನೀಡಿ ಸಹಕರಿಸುವನು. ಎಂಬುದಾಗಿ ಹೇಳಿದಾಗ ಮೊಮ್ಮಗನು ಕುತೂಹಲದಿಂದ " ಇಷ್ಟು ದೂರ ಇಷ್ಟು ಎತ್ತರದ ಮೇಲೆ ಏಕೆ ಒಬ್ಬನೇ ನಿಂತಿದ್ದಾನೆ. ಆತನಿಗೆ ಒಬ್ಬನೆ ನಿಂತಿರಲು ಭಯವಾಗದೆ? ಹತ್ತಿರ ಕೂಡ ಯಾರೂ ಇಲ್ಲ" ಎಂದು ಕೇಳಿದಾಗ, ಅಜ್ಜನು ಈತನು ಅಭಯಮೂರ್ತಿ ಈತನಿಗೆ ಭಯವೆಲ್ಲಿಂದ ಬರಬೇಕು. ಈತನ ಅಣ್ಣ ಭರತ ಚಕ್ರವರ್ತಿ, ಭರತ ಮತ್ತು ಬಾಹುಬಲಿ ಇಬ್ಬರ ನಡುವೆ ರಾಜ್ಯಕ್ಕಾಗಿ ಯುದ್ಧ ನಡೆಯುತ್ತದೆ. ಯುದ್ಧದಲ್ಲಿ ಬಾಹುಬಲಿಯು ತನ್ನ ಅಣ್ಣನಾದ ಭರತನನ್ನು ಮುಷ್ಟಿಯುದ್ಧ, ದೃಷ್ಟಿಯುದ್ಧ, ಹಾಗೂ ಜಲಯುದ್ಧಗಳಲ್ಲಿ ಸೋಲಿಸುತ್ತಾನೆ. ಇದರಿಂದ ಅವಮಾನಿತನಾದ ಭರತನು ಬಾಹುಬಲಿಯನ್ನು ಕೊಲ್ಲಲು ಮುಂದಾಗುತ್ತಾನೆ. ಇದರಿಂದ ಬೇಸರಗೊಂಡ ಬಾಹುಬಲಿ ಗೆದ್ದ ರಾಜ್ಯವನ್ನು ಭರತನಿಗೆ ಒಪ್ಪಿಸಿ ತಪಸ್ಸನ್ನಾಚರಿಸಲು ತೆರಳುತ್ತಾನೆ. ಈ ರೀತಿಯಲ್ಲಿ ಭೋಗವನ್ನು ತ್ಯಜಿಸಿ ತ್ಯಾಗಿಯಾಗುವ ಭವ್ಯ ತತ್ತ್ವವನ್ನು ಬಾಹುಬಲಿಯು ಜಗತ್ತಿಗೆ ಸಾರುತ್ತಾನೆ.

ಇಷ್ಟೊಂದು ಜನ ಇಲ್ಲಿಗೆ ಏಕೆ ಬಂದು ಸೇರಿದ್ದಾರೆ. ಎಲ್ಲರೂ 'ಬಾಹುಬಲಿ' 'ಬಾಹುಬಲಿ' ಎಂದೇಕೆ ಕರೆಯುತ್ತಿದ್ದಾರೆ? ಎಂದು ಮೊಮ್ಮಗನು ಕೇಳಲು, ಅಜ್ಜನು ಇಂದು ಬಾಹುಬಲಿಗೆ ಹಾಲಿನ ಮಜ್ಜನ, ಈತನ ಈ ಮುಗ್ಧ ಮುಗುಳ್ನಗುವನ್ನು ನೋಡಲು ಭಕ್ತವೃಂದ ಇವನನ್ನು ಧ್ಯಾನಿಸುತ್ತಾ, ಭಜಿಸುತ್ತಾ, ಆತನ ನಾಮವನ್ನು ಸ್ಮರಿಸುತ್ತಾ ಬರುತ್ತಿದ್ದಾರೆ ಎಂದರು. ಆಗ ಪುಟ್ಟ ಮಗುವಿಗೆ ಅಮ್ಮ ಮಜ್ಜನ ಮಾಡಿಸುವಾಗ ಮೊದಲು ಎಣ್ಣೆ ಹಚ್ಚಿ ಗೊಮ್ಮಟನಂತೆಯೇ ನಿಲ್ಲಿಸುವುದನ್ನು ಅರಿತ ಮಗು ತನ್ನಂತೆ ಬಾಹುಬಲಿಯು ಮಜ್ಜನ ಮಾಡಿಸಿಕೊಳ್ಳಲು 'ತನ್ನ ಹಾಗೆಯೆ' ನಿಂತಿದ್ದಾನೆ ಎಂದು ಮಗು ಭಾವಿಸಿತು.

**ಉ) ಸಂದರ್ಭದೊಂದಿಗೆ ವಿವರಿಸಿರಿ.**

1. ಇವನೆ ಬಾಹುಬಲಿಯು ಮಗು ಧೀರತನದ ಮೂರ್ತಿಯು!

ಈ ವಾಕ್ಯವನ್ನು **ಸು. ರಂ. ಎಕ್ಕುಂಡಿ** ಅವರು ಬರೆದಿರುವ **'ಕಥನ ಕವನಗಳು'** ಎಂಬ ಕೃತಿಯಿಂದ ಆಯ್ದ **ನನ್ನ ಹಾಗೆಯೆ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಅಜ್ಜನು ಮಗುವಿಗೆ ಹೇಳಿದ್ದಾನೆ. ಇಂದ್ರಗಿರಿಯ ಮೇಲೆ ಬಾಹುಬಲಿ ನಿಂತ ಪರಿಯನ್ನು ಕಂಡು ಮುಗ್ಧ ಮಗು ತನ್ನ ಅಜ್ಜನಿಗೆ ಇವನಾರು ತಾತ, ಇಲ್ಲಿಗೇಕೆ ಬಂದು ನಿಂತನು ಎಂದು ಕೇಳಿದಾಗ ತಾತ 'ಇವನೆ ಬಾಹುಬಲಿಯು ಮಗು ಧೀರತನದ ಮೂರ್ತಿಯು!' ಎಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

2.ನೀನು ಸೋತು ಗೆದ್ದೆ ಅಣ್ಣ, ನಾನು ಗೆದ್ದು ಸೋತೆನು.

ಈ ವಾಕ್ಯವನ್ನು **ಸು. ರಂ. ಎಕ್ಕುಂಡಿ** ಅವರು ಬರೆದಿರುವ **'ಕಥನ ಕವನಗಳು'** ಎಂಬ ಕೃತಿಯಿಂದ ಆಯ್ದ **ನನ್ನ ಹಾಗೆಯೆ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮೇಲಿನ ಮಾತನ್ನು ಬಾಹುಬಲಿಯು ಭರತನಿಗೆ ಹೇಳಿದ್ದಾನೆ. ಭರತ ಬಾಹುಬಲಿಯರ ಯುದ್ಧದಲ್ಲಿ ಬಾಹುಬಲಿ ಗೆದ್ದ ರಾಜ್ಯವನ್ನು ಭರತನಿಗೆ ಒಪ್ಪಿಸಿ ತಪಸ್ಸಗೆ ಹೊರಡಲು ಸಿದ್ಧನಾಗುವಾಗ ಅಣ್ಣ ನೀನು ಸೋತು ಈಗ ಎಲ್ಲವನ್ನು ಗೆದ್ದೆ. ಆದರೆ ನಾನು ಮೊದಲು ಗೆದ್ದು ಈಗ ಸೋತೆ ಎಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

3. ಗೊಮ್ಮಟೇಶ ನಕ್ಕುಬಿಟ್ಟ ಕಂಡು ಮುಗ್ಧ ನಂಬಿಗೆ.

ಈ ವಾಕ್ಯವನ್ನು **ಸು. ರಂ. ಎಕ್ಕುಂಡಿ** ಅವರು ಬರೆದಿರುವ **'ಕಥನ ಕವನಗಳು'** ಎಂಬ ಕೃತಿಯಿಂದ ಆಯ್ದ **ನನ್ನ ಹಾಗೆಯೆ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕವಿ ಹೇಳಿದ್ದಾರೆ. ತನ್ನ ಅಜ್ಜನ ಜೊತೆ ಗೊಮ್ಮಟನ ನೋಡಲು ಬಂದ ಮಗು ತನಗೆ ಅಮ್ಮ ಮಜ್ಜನ ಮಾಡಿಸುವ ಮುನ್ನ ಎಣ್ಣೆ ಹಚ್ಚಿ ಹೀಗೆಯೇ ನಿಲ್ಲಿಸುವಳು ಎಂದು ತಿಳಿಸಿದಾಗ ಮಗುವಿನ ಮಾತಿಗೆ ಗೊಮ್ಮಟೇಶ ನಕ್ಕುಬಿಟ್ಟ ಕಂಡುಮುಗ್ಧ ನಂಬಿಗೆ ಎಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

**3. ಭಾಷಾಭ್ಯಾಸ :**

**ಅ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕಗಳನ್ನು ಬರೆಯಿರಿ.**

ಭಯ x ನಿರ್ಭಯ, ಕೀರ್ತಿ x ಅಪಕೀರ್ತಿ, ಹತ್ತು x ಇಳಿ,

ದೂರ x ಹತ್ತಿರ, ಸೋಲು x ಗೆಲುವು, ಹುಟ್ಟು x ಸಾವು.

**ಆ) ಕೆಳಗಿನ ಪದಗಳಿಗೆ ತತ್ಸಮ– ತದ್ಭವಗಳನ್ನು ಬರೆಯಿರಿ.**

ಮುಖ – ಮೊಗ, ಮಜ್ಜನ – ಮಾರ್ಜನ, ಮೂರ್ತಿ – ಮೂರುತಿ, ಮುಗುದ – ಮುಗ್ದ.

**ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿರಿ.**

1. ಧೀರತನ : ಬಾಹುಬಲಿ ಧೀರತನದ ಮೂರ್ತಿಯಾಗಿದ್ದಾನೆ.
2. ಹೊಳೆವಹಾದಿ : ಹುಟ್ಟುಸಾವಿನಾಚೆ ಹೊಳೆವಹಾದಿ ಇರುತ್ತದೆ.
3. ಹಚ್ಚಡ : ನಾವು ಹಚ್ಚಡವನ್ನು ಉಪಯೋಗಿಸುತ್ತೇವೆ.
4. ಮುಗುಳ್ನಗು : ಬಾಹುಬಲಿ ಮುಗುಳ್ನಗುತ್ತಾ ಇದ್ದಾನೆ.
5. ಮುದ್ದುಮುಖ : ಚಿಕ್ಕಮಗು ಮುದ್ದುಮುಖದಿಂದ ಕೂಡಿರುತ್ತದೆ.
6. ಮುಗ್ಧಮಗುವಿನಂತೆ: ಬಾಹುಬಲಿ ಮುಗ್ಧಮಗುವಿನಂತೆ ಇದ್ದಾನೆ.

**ಈ) ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರು ತಿಳಿಸಿರಿ.**

1. ಕೇಳಿತೊಂದು = ಕೇಳಿತು + ಒಂದು – ಲೋಪಸಂಧಿ
2. ಸೂರ್ಯನೊಮ್ಮೆ = ಸೂರ್ಯ + ಒಮ್ಮೆ – ಲೋಪಸಂಧಿ
3. ಸಾವಿನಾಚೆ = ಸಾವಿನ + ಆಚೆ – ಲೋಪಸಂಧಿ
4. ಯಾವುದುಂಟು = ಯಾವುದು + ಉಂಟು – ಲೋಪಸಂಧಿ
5. ಭಯವಾಗದೆ = ಭಯ + ಆಗದೆ – ಆಗಮಸಂಧಿ
6. ಗೊಮ್ಮಟೇಶ = ಗೊಮ್ಮಟ + ಈಶ – ಗುಣಸಂಧಿ

**ಉ) ಈ ಪದ್ಯದಲ್ಲಿ ಬಳಕೆ ಆಗಿರುವ ಅಂತ್ಯ ಪ್ರಾಸ ಪದಗಳನ್ನು ಆರಿಸಿ ಬರೆಯಿರಿ.**

**ಮಾದರಿ :** ಮಜ್ಜನ – ಅಜ್ಜನ ಸ್ನಾನವು - ಧ್ಯಾನವು

ಚೆಂಬಿಗೆ –ನಂಬಿಗೆ ಮೂರ್ತಿಯು – ಕೀರ್ತಿಯು

ಎತ್ತರ – ಹತ್ತಿರ ನೋಡುತಿರುವವನು - ಮಾಡುತಿರುವವನು

ಮಾಡಲು - ನೋಡಲು ಹೀಗೆಯೇ – ಹಾಗೆಯೆ

ನಿಂತಿಹ - ಮಗುವಿನಂತಿಹ ಬೀಸಿತು – ಹಾಸಿತು

## 5. ತೂಗಿ ತೂಗಿ ಮರಗಳೇ – ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ

**ಕೃತಿಕಾರರ ಪರಿಚಯ :**

- **ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ** ಅವರು 1936 ರಲ್ಲಿ ಶಿವಮೊಗ್ಗದಲ್ಲಿ ಜನಿಸಿದರು. ಇವರು 'ನೈಶಿಲ ಭಟ್ಟ'ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದಾರೆ.
- ಇವರು ನಿನ್ನೆಗೆ ನನ್ನ ಹಾಡು, ವೃತ್ತ ಸುಳಿ, ಹೊಳೆ ಸಾಲಿನ ಮರ, ಬಾರೋ ವಸಂತ, ಭಾವಸಂಗಮ, ದೀಪಿಕಾ– ಮುಂತಾದ ಕೃತಿಗಳನ್ನು ರಚಿಸಿದ್ದಾರೆ.
- ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ, ಕಾರಂತ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಲಭಿಸಿವೆ.
- ಪ್ರಸ್ತುತ ಕವನವನ್ನು ಅವರ **'ಸಮಗ್ರ ಕಾವ್ಯ ಸಂಪುಟ–2'** ಕೃತಿಯಿಂದ ಆಯ್ದುಕೊಳ್ಳಲಾಗಿದೆ.

**ಅಭ್ಯಾಸ**

**I. ಪದಗಳ ಅರ್ಥ ತಿಳಿಯಿರಿ :**

**ಇಳೆ** – ಭೂಮಿ; ಧರೆ; ಪೃಥ್ವಿ.
**ಇಳಿ (ಕ್ರಿ)** – ಕೆಳಕ್ಕೆ ಬರು; ಬೀಳು.
**ಋಷಿ** – ತಪಸ್ವಿ; ಮುನಿ.
**ಒಡಲು** – ಶರೀರ; ಹೊಟ್ಟೆ.
**ಓಲೆ** – ಪತ್ರ
**ಔದಾರ್ಯ** – ಉದಾರತೆ; ಧಾರಾಳ ಗುಣ.
**ಕರ** – ಕೈ; ಹಸ್ತ.
**ಕರುಣೆ** – ದಯೆ
**ಗಾನ** – ಹಾಡು; ಸಂಗೀತ.
**ತಮ** – ಕತ್ತಲು

**ತಳೆ (ಕ್ರಿ)** – ಧರಿಸು

**ನಾಲೆ** – ಕಾಲುವೆ; ತೋಡು.

**ಮಧುರ** – ಇಂಪಾದ

**ತುಡಿ (ಕ್ರಿ).** – ಮಿಡಿ; ಸ್ಪಂದಿಸು.

**ನೆಲೆ** – ಆಶ್ರಯ

**ವರ** – ಅನುಗ್ರಹ

**2. ಪ್ರಶ್ನೆಗಳು :**

**ಅ) ಕೆಳಗೆ ನೀಡಿರುವ 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ.**

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| 1) ಮರ | ಆ) ಹಸಿರು |
| 2) ಹಕ್ಕಿ | ಅ) ಗೂಡು |
| 3) ಗಾನ | ಈ) ಸ್ವರ |

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಕವಿ ಯಾವುದನ್ನು ಇಳೆಗೆ ಇಳಿದ ವರಗಳೆಂದು ಕರೆದಿದ್ದಾರೆ?

ಕವಿ ಮರಗಳನ್ನು ಇಳೆಗೆ ಇಳಿದ ವರಗಳೆಂದು ಕರೆದಿದ್ದಾರೆ.

2.ಮರಗಳು ಯಾರಿಗೆ ನೆಲೆ ನೀಡಿವೆ?

ಮರಗಳು ಸೋತು ಬಂದ ಹಕ್ಕಿ ಹಿಂಡಿಗೆ ನೆಲೆ ನೀಡಿವೆ

3.ಕವಿ ಮರಗಳಿಗೆ ಎಂತಹ ಮನಸ್ಸಿದೆ ಎಂದಿದ್ದಾರೆ?

ಕವಿ ಮರಗಳಿಗೆ ಋಷಿಸಮಾನ ಮನಸ್ಸಿದೆ ಎಂದಿದ್ದಾರೆ.

4. ಮರಗಳು ಔದಾರ್ಯದ ರೂಪದಲ್ಲಿ ನಮಗೇನು ನೀಡುತ್ತವೆ?

ಮರಗಳು ಔದಾರ್ಯದ ರೂಪದಲ್ಲಿ ನಮಗೆ ಹೂವು ಹಣ್ಣು ನೀಡುತ್ತವೆ.

5. ಮರ ಯಾವ ಮೌಲ್ಯಗಳನ್ನು ಸಂಕೇತಿಸುತ್ತದೆ?

ಮರ ಸತ್ಯ, ತ್ಯಾಗ, ಅಹಿಂಸೆಯ ಮೌಲ್ಯಗಳನ್ನು ಸಂಕೇತಿಸುತ್ತದೆ.

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಮರಗಳು ಪ್ರಕೃತಿ ಬರೆದ ಓಲೆ ಎಂಬುದನ್ನು ಕವಿ ಹೇಗೆ ವರ್ಣಿಸಿದ್ದಾರೆ?

ಮರವು ಸದಾ ದುಡಿಯುತ್ತಾ, ಪ್ರೀತಿಯಿಂದ ಬಂದವರಿಗೆ ಆಶ್ರಯ ನೀಡುತ್ತಾ, ಹಸಿರಿನ ಮಾಲೆಯಂತೆ ಕಂಗೊಳಿಸುತ್ತಾ ಮನುಷ್ಯನಿಗೆ ಆಸರೆಯಾಗುತ್ತಿರುವುದನ್ನು ಕಂಡು ಪ್ರಕೃತಿಯೇ ಪ್ರೀತಿ, ನೀತಿಯೆಂಬ ಹಾಡನ್ನು ಓಲೆಯಲ್ಲಿ ಬರೆದಿದೆ ಎಂದು ಕವಿ ವರ್ಣಿಸಿದ್ದಾರೆ.

2. ಸಸಿಯೊಂದು ಮರವಾಗಿ ಬೆಳೆಯುವ ರೀತಿಯನ್ನು ಕವಿ ಹೇಗೆ ವರ್ಣಿಸಿದ್ದಾರೆ?

ಸಸಿ ಮಣ್ಣಿನ ಕತ್ತಲೆಯ ಸೀಳಿ ಹೊರಗೆ ಚಿಗುರೊಡೆಯುವಾಗಲೇ ಮೈತುಂಬ ಚಿಗುರನ್ನು ತುಂಬಿಕೊಂಡು ಕೊಂಬೆ ಕೊಂಬೆಗಳನ್ನು ಚಾಚುತ್ತಾ, ಎಲ್ಲರನ್ನೂ ಬನ್ನಿ ಬನ್ನಿ ಎಂದು ಸ್ವಾಗತಿಸುವಂತೆ ಮರವಾಗಿ ಬೆಳೆಯುತ್ತವೆ ಎಂದು ಕವಿ ವರ್ಣಿಸಿದ್ದಾರೆ.

3. ಮರಗಳು ಸತ್ಯ, ತ್ಯಾಗ, ಅಂಹಿಸೆಯ ಪ್ರತೀಕವಾಗಿವೆ ಹೇಗೆ?

ಮರಗಳು ಮಾನವರಿಗೆ ಪ್ರಯೋಜನ ನೀಡಿದರೂ, ಸ್ವಾರ್ಥ ಹೊಂದಿದ ಮನುಷ್ಯರು ಅವುಗಳನ್ನೇ ಕಡಿಯುವ ಸಾಹಸಕ್ಕೆ ಕೈ ಹಾಕುತ್ತಾರೆ. ಮರಗಳಿಗೆ ಕೊಡಲಿ ಪೆಟ್ಟು ಕೊಟ್ಟವರಿಗೂ ಕರುಣೆಯಿಂದ ಕಡಿದವರಿಗೆ ನೆರಳು, ಹೂವು, ಹಣ್ಣುಗಳನ್ನು ಕೊಡುವುದರಿಂದ ಮರಗಳು ಸತ್ಯ, ತ್ಯಾಗ, ಅಹಿಂಸೆಯ ಪ್ರತೀಕವಾಗಿದೆ.

**ಈ) ಕೆಳಗಿನ ಪ್ರಶ್ನೆಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಪ್ರಕೃತಿಯಲ್ಲಿ ಮರಗಳು ನೀಡುವ ಸಂದೇಶವನ್ನು ಕವಿ ಯಾವ ರೀತಿ ವರ್ಣಿಸಿದ್ದಾರೆ?

ಮರವನ್ನು ಕಲ್ಪವೃಕ್ಷ ಎಂದು ಕರೆಯುತ್ತೇವೆ. ಮಾನವನ ಪಾಲಿಗೆ ಮರಗಳು ವರಗಳಾಗಿವೆ. ನಮಗೆ ಶುದ್ಧಗಾಳಿ, ನೆರಳು, ಹಣ್ಣು, ತಂಪು ನೀಡುತ್ತವೆ ನಿಜ, ಅದರ ಜೊತೆಗೆ ಮರವೊಂದು ನಮ್ಮ ಬದುಕಿಗೆ ನೀತಿ ಪಾಠವಾಗಿರುವುದನ್ನು ಕವಿ ಗುರುತಿಸಿದ್ದಾರೆ. ಮರಗಳಿಗೆ ಋಷಿ ಸಮಾನವಾದ ಮನಸ್ಸಿದೆ. ಅವು ಸತ್ಯ, ತ್ಯಾಗ, ಅಹಿಂಸೆಯ ನಿಲುವು ಎಂಬುದನ್ನು ಕವಿ ಬಣ್ಣಿಸಿದ್ದಾರೆ. ಮರದ ಬದುಕಿನಂತೆ ನಮ್ಮ ಬದುಕು ರೂಪಿತಗೊಳ್ಳಬೇಕು ಎಂಬುದು ಕವಿಯ ಸಂದೇಶವಾಗಿದೆ.

**ಉ) ಸಂದರ್ಭದೊಡನೆ ವಿವರಿಸಿರಿ.**

1. ಪ್ರಕೃತಿ ಬರೆದ ಓಲೆಯೇ

ಈ ವಾಕ್ಯವನ್ನು **ಎಸ್. ಎಸ್. ಲಕ್ಷ್ಮೀನಾರಾಯಣಭಟ್ಟ** ಅವರು ಬರೆದಿರುವ **'ಸಮಗ್ರ ಕಾವ್ಯ ಸಂಪುಟ-2'** ಎಂಬ ಕೃತಿಯಿಂದ ಆಯ್ದ **ತೂಗಿ ತೂಗಿ ಮರಗಳೇ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಕವಿ ಹೇಳಿದ್ದಾರೆ. ಮರವು ಸದಾ ದುಡಿಯುತ್ತಾ, ಪ್ರೀತಿಯಿಂದ ಬಂದವರಿಗೆ ಆಶ್ರಯ ನೀಡುತ್ತಾ, ಹಸಿರಿನ ಮಾಲೆಯಂತೆ ಕಂಗೊಳಿಸುತ್ತಾ ಮನುಷ್ಯನಿಗೆ ಆಸರೆಯಾಗುತ್ತಿರುವುದನ್ನು ಕಂಡು ಪ್ರಕೃತಿಯ ಈ ನೀತಿಯೆ ಪ್ರಕೃತಿ ಬರೆದ ಓಲೆ ಎಂದು ತಿಳಿಸುವಾಗ ಈ ಮೇಲಿನ ಮಾತು ಬಂದಿದೆ.

2. ಹೂವು ಹಣ್ಣು ಸುರಿವಿರಿ

ಈ ವಾಕ್ಯವನ್ನು **ಎಸ್. ಎಸ್. ಲಕ್ಷ್ಮೀನಾರಾಯಣಭಟ್ಟ** ಅವರು ಬರೆದಿರುವ **'ಸಮಗ್ರ ಕಾವ್ಯ ಸಂಪುಟ-2'** ಎಂಬ ಕೃತಿಯಿಂದ ಆಯ್ದ **ತೂಗಿ ತೂಗಿ ಮರಗಳೇ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಕವಿ ಹೇಳಿದ್ದಾರೆ. ಮರವು ಮಣ್ಣಿನಿಂದ ಹುಟ್ಟಿ ಬೆಳೆದು ಮೈತುಂಬ ಚಿಗುರನ್ನು ತುಂಬಿಕೊಂಡು ಕೊಂಬೆ ಕೊಂಬೆಗಳನ್ನು ಚಾಚುತ್ತಾ, ಎಲ್ಲರನ್ನೂ ಬನ್ನಿ ಬನ್ನಿ ಎಂದು ಸ್ವಾಗತಿಸುತ್ತಾ ಹೂವು ಹಣ್ಣು ಸುರಿಸುತ್ತವೆ ಎಂದು ತಿಳಿಸುವಾಗ ಈ ಮೇಲಿನ ಮಾತು ಬಂದಿದೆ.

3. ಸತ್ಯ ತ್ಯಾಗ ಅಹಿಂಸೆಯೇ ನಿತ್ಯವಾದ ನಿಲುವೇ!

ಈ ವಾಕ್ಯವನ್ನು **ಎಸ್. ಎಸ್. ಲಕ್ಷ್ಮೀನಾರಾಯಣಭಟ್ಟ** ಅವರು ಬರೆದಿರುವ **'ಸಮಗ್ರ ಕಾವ್ಯ ಸಂಪುಟ-2'** ಎಂಬ ಕೃತಿಯಿಂದ ಆಯ್ದ **ತೂಗಿ ತೂಗಿ ಮರಗಳೇ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಕವಿ ಹೇಳಿದ್ದಾರೆ. ಮರಗಳು ಮಾನವರಿಗೆ ಪ್ರಯೋಜನ ನೀಡಿದರೂ, ಸ್ವಾರ್ಥ ಹೊಂದಿದ ಮನುಷ್ಯರು ಅವುಗಳನ್ನೇ ಕಡಿಯುವ ಸಾಹಸಕ್ಕೆ ಕೈ ಹಾಕುತ್ತಾರೆ. ಮರಗಳಿಗೆ ಕೊಡಲಿ ಪೆಟ್ಟು ಕೊಟ್ಟವರಿಗೂ ಕರುಣೆಯಿಂದ ಕಡಿದವರಿಗೆ ನೆರಳು, ಹೂವು, ಹಣ್ಣುಗಳನ್ನು ಕೊಡುವುದರಿಂದ ಮರಗಳು ಸತ್ಯ, ತ್ಯಾಗ, ಅಹಿಂಸೆಯ ಪ್ರತೀಕವಾಗಿದೆ ಎಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

**3. ಭಾಷಾಭ್ಯಾಸ :**

**ಅ) ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.**

1. ಇಳೆ : ಭೂಮಿ :: ಓಲೆ : **ಪತ್ರ**
2. ಸತ್ಯ : ಅಸತ್ಯ :: ಅಹಿಂಸೆ : **ಹಿಂಸೆ**
3. ಸ್ವರ : ಸರ :: ಹಕ್ಕಿ : **ಪಕ್ಷಿ**
4. ಮರ : ಮರಗಳು :: ಸ್ವರಗಳು : **ಸ್ವರ**

**ಆ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

1.ವರ : ಮರಗಳು ಇಳೆಗೆ ಇಳಿದ ವರಗಳಾಗಿವೆ.
2.ಮಧುರ : ಗಾನ ಮಧುರವಾಗಿರುತ್ತದೆ.
3.ನೆಲೆ : ಮರಗಳು ಪಕ್ಷಿಗಳಿಗೆ ನೆಲೆ ನೀಡಿವೆ.
4.ರೋಮಾಂಚನ: ನಾನು ಹಾವನ್ನು ನೋಡಿ ರೋಮಾಂಚನಗೊಂಡೆನು.
5.ಔದಾರ್ಯ : ಮರಗಳು ಔದಾರ್ಯದಿಂದ ನಮಗೆ ಹೂವುಹಣ್ಣು ನೀಡುತ್ತಿವೆ.
6.ಅಹಿಂಸೆ : ನಾವು ಅಹಿಂಸಾ ವಾದಿಗಳಾಗಬೇಕು.

**ಇ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕಗಳನ್ನು ಬರೆಯಿರಿ.**

ವರ x ಶಾಪ, ಸ್ವರ x ಅಪಸ್ವರ, ಅಹಿಂಸೆ x ಹಿಂಸೆ, ಪ್ರೀತಿ x ದ್ವೇಷ, ನೆಲ x ಆಕಾಶ

**ಈ) ಕೆಳಗಿನ ಪದಗಳಿಗೆ ತತ್ಸಮ-ತದ್ಭವಗಳನ್ನು ಬರೆಯಿರಿ.**

ಋಷಿ – ರಿಸಿ, ಆಕಾಶ – ಆಗಸ, ನಿತ್ಯ – ನಿಚ್ಚ, ಪಕ್ಷಿ – ಹಕ್ಕಿ, ಸ್ವರ – ಸರ

**ಉ) ಕೆಳಗೆ ನೀಡಿರುವ ಪದಗಳ ಉಚ್ಚಾರಣೆ ಹಾಗೂ ಅರ್ಥ ವ್ಯತ್ಯಾಸಗಳನ್ನು ಕೇಳಿ ತಿಳಿಯಿರಿ.**

1. ಮರ – ವರ
2. ನಾಲೆ – ನೆಲೆ
3. ಕರ – ಕರೆ
4. ಇಳೆ – ಇಳಿ

## 6. ಮಳೆ ಬರಲಿ — ಸವಿತಾ ನಾಗಭೂಷಣ

**ಕೃತಿಕಾರರ ಪರಿಚಯ :**

- **ಶ್ರೀಮತಿ ಸವಿತಾ ನಾಗಭೂಷಣ** ಅವರು 1961 ರಲ್ಲಿ ಚಿಕ್ಕಮಗಳೂರಿನಲ್ಲಿ ಜನಿಸಿದರು.
- ಇವರು ಚಂದ್ರನನ್ನು ಕರೆಯಿರಿ ಭೂಮಿಗೆ, ಹೊಳೆ ಮಗಳು, ಆಕಾಶ ಮಲ್ಲಿಗೆ, ಜಾತ್ರೆಯಲ್ಲಿ ಶಿವ, ದರುಶನ, ಕಾಡು ಲಿಲ್ಲಿ ಹೂಗಳು, ಹಳ್ಳಿಯ ದಾರಿ – ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಶ್ರೀಯುತರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಡಿ. ಎಸ್. ಕರ್ಕಿ ಕಾವ್ಯ ಪ್ರಶಸ್ತಿಯೂ ಲಭಿಸಿದೆ.
- ಪ್ರಸ್ತುತ 'ಮಳೆ ಬರಲಿ...' ಕವನವನ್ನು **'ಚಂದ್ರನನ್ನು ಕರೆಯಿರಿ ಭೂಮಿಗೆ'** ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

### ಅಭ್ಯಾಸ

**I. ಪದಗಳ ಅರ್ಥ ತಿಳಿಯಿರಿ :**

**ಕಂಬಳಿ** – ಕುರಿಯ ತುಪ್ಪಟದಿಂದ ಮಾಡಿದ ಹೊದಿಕೆ.
**ಕೊಳ್ಳ** – ತಗ್ಗು; ಗುಣಿ.
**ಬಯಲು** – ವಿಸ್ತಾರವಾದ ಭೂಪ್ರದೇಶ.
**ಹಳ್ಳ** – ತಗ್ಗು; ಗುಣಿ.
**ಕಸಿದು** (ಕ್ರಿ) – ಕಿತ್ತುಕೊಳ್ಳು; ಅಪಹರಿಸು.
**ಛಾವಣಿ** – ಚಾವಣಿ(ಕ). ಮಾಳಿಗೆ.
**ಬೆಂದ** (ಕ್ರಿ) – ಸುಡು; ಕುದಿ; ಬಿಸಿ.

**2. ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ರೈತರಿಗೆ ಸುಖ ನಿದ್ದೆಗಳು ಯಾವಾಗ ಸಿಗುತ್ತವೆ?
ಮಳೆಯಿಂದ ರೈತರ ಬದುಕು ಹಸನಾದಾಗ ರೈತರಿಗೆ ಸುಖ ನಿದ್ದೆಗಳು ಸಿಗುತ್ತವೆ.
2. ಕೆರೆ ಹಳ್ಳ ಬಾವಿಗಳಿಗೆ ಬಾಯಾರಿಕೆ ಆಗುವುದು ಯಾವಾಗ?
ಕೆರೆ ಹಳ್ಳ ಬಾವಿಗಳಿಗೆ ಬಾಯಾರಿಕೆ ಆಗುವುದು ಮಳೆ ಬರದೇ ಇದ್ದಾಗ.
3. ನೊಂದ ಬಯಲುಗಳು, ಬೆಂದ ಬೆಟ್ಟಗಳು ತಂಪಾಗುವುದು ಯಾವಾಗ?
ನೊಂದ ಬಯಲುಗಳು, ಬೆಂದ ಬೆಟ್ಟಗಳು ತಂಪಾಗುವುದು ಮಳೆ ಬಂದಾಗ.
4. ಮಳೆ ಬಂದು ನಿಂತಾಗ ನೆಲ ಮುಗಿಲು ಹೇಗೆ ಕಾಣಬೇಕು?
ಮಳೆ ಬಂದು ನಿಂತಾಗ ನೆಲ ಮುಗಿಲು ಏಳು ಬಣ್ಣಗಳಲ್ಲಿ ನಕ್ಕಂತೆ ಕಾಣಬೇಕು.

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಮಳೆ ಯಾವ ಯಾವ ನಷ್ಟಗಳನ್ನು ಉಂಟುಮಾಡದಿರಲಿ ಎಂದು ಕವಯಿತ್ರಿ ಆಶಿಸಿದ್ದಾರೆ?
ಮಳೆಯೂ ಹಸಿರು ಹೊಲ, ಗದ್ದೆ, ರೈತರ ಸುಖನಿದ್ದೆ, ಹುಲ್ಲಿನ ಛಾವಣಿ, ಮಣ್ಣಿನ ಗೋಡೆಗಳ ನಷ್ಟಗಳನ್ನು ಉಂಟುಮಾಡದಿರಲಿ ಎಂದು ಕವಯಿತ್ರಿ ಆಶಿಸಿದ್ದಾರೆ.
2. ವಿಪರೀತ ಮಳೆಯಿಂದ ಯಾರ ಮನೆಗಳಿಗೆ ಹೆಚ್ಚು ಹಾನಿ ಉಂಟಾಗುತ್ತದೆ? ಏಕೆ?
ವಿಪರೀತ ಮಳೆಯಿಂದ ರೈತರ ಮನೆಗಳಿಗೆ ಹೆಚ್ಚು ಹಾನಿ ಉಂಟಾಗುತ್ತದೆ. ಏಕೆಂದರೆ ರೈತರ ಮನೆಯ ಗೋಡೆ ಮಣ್ಣಿನಿಂದ ಮಾಡಿರುತ್ತದೆ. ಛಾವಣಿ ಹುಲ್ಲಿನಿಂದ ಮಾಡಲ್ಪಟ್ಟಿರುತ್ತದೆ.
3. ಮಳೆಯಿಂದ ಯಾವ ಯಾವ ಸುಖಗಳು ಸಿಗಲಿ ಎಂದು ಕವಯಿತ್ರಿ ಆಶಿಸುತ್ತಾರೆ?
ಮಳೆಯಿಂದ ಇರಲೊಂದು ಮನೆ, ಹೊದೆಯಲು ಬೆಚ್ಚನೆಯ ಕಂಬಳಿ ಸಿಗಬೇಕು. ಕೆರೆ, ಕಟ್ಟೆ, ಬಾವಿ ತುಂಬಿರಬೇಕು. ಇಂತಹ ಸುಖಗಳು ಸಿಗಲಿ ಎಂದು ಕವಯಿತ್ರಿ ಆಶಿಸುತ್ತಾರೆ.
4. ನೊಂದು ಬೆಂದು ಬಾಯಾರಿದ ಪ್ರಕೃತಿಯ ಅಂಶಗಳಾವುವು?
ನೊಂದು ಬೆಂದು ಬಾಯಾರಿದ ಪ್ರಕೃತಿಯ ಅಂಶಗಳೆಂದರೆ ನೊಂದ ಬಯಲುಗಳು, ಬೆಂದ ಬೆಟ್ಟಗಳು, ಬಾಯಾರಿದ ಕೆರೆ, ಬಾವಿ, ಹಳ್ಳ, ಕೊಳ್ಳಗಳು ಎಂದು ತಿಳಿಸಿದ್ದಾರೆ.

**ಇ) ಕೆಳಗಿನ ಪ್ರಶ್ನೆಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಮಳೆಯಿಂದ ಆಗುವ ಅನುಕೂಲ ಹಾಗೂ ಅನಾನುಕೂಲಗಳಾವುವು?
ಮಳೆಯಿಂದ ಆಗುವ ಅನುಕೂಲಗಳೆಂದರೆ, ಬತ್ತಿ ಹೋದ ಬಾವಿ, ಕೆರೆ, ಕಟ್ಟೆ ತುಂಬುತ್ತದೆ. ಮಳೆಯು ಸಕಾಲಕ್ಕೆ ಹಿತವಾಗಿ ಬಂದು ಕೆರೆ ಕಟ್ಟೆ ಬಾವಿಗಳು ತುಂಬಿದರೆ ರೈತರ ಬದುಕು ಹಸನಾಗುತ್ತದೆ. ಕೃಷಿ ಬೆಳೆ ಬೆಳೆಯಲು ಸಹಕಾರಿಯಾಗುತ್ತದೆ.

ಭೂಮಿಯ ಅಂತರ್ಜಲದ ಮಟ್ಟ ಹೆಚ್ಚಾಗುತ್ತದೆ. ಭೂಮಿಯೂ ತಂಪಾಗುತ್ತದೆ. ಆ ಮುಖೇನ ನಾಡು ಸಮೃದ್ಧಿಯಿಂದ ನೆಮ್ಮದಿಯಿಂದ ಕೂಡಿರುತ್ತದೆ.
ಮಳೆಯಿಂದ ಆಗುವ ಅನಾನುಕೂಲಗಳಾವುವೆಂದರೆ, ಜಲಪ್ರಳಯವಾಗುತ್ತದೆ. ಆಸ್ತಿ ಪಾಸ್ತಿ ನಾಶವಾಗುತ್ತದೆ. ಬೆಳೆದ ಬೆಳೆಗಳು ನಾಶವಾಗುತ್ತವೆ. ರೋಗರುಜಿನಗಳು ಹೆಚ್ಚಾಗುತ್ತವೆ. ಅಭಿವೃದ್ಧಿಗೆ ತೊಡಕಾಗುತ್ತದೆ.

**ಈ) ಸಂದರ್ಭದೊಡನೆ ವಿವರಿಸಿರಿ.**

1. ರೈತರ ಸುಖ ನಿದ್ದೆಗಳನ್ನು ಕಸಿದುಕೊಳ್ಳದಿರಲಿ.

ಈ ವಾಕ್ಯವನ್ನು **ಸವಿತಾ ನಾಗಭೂಷಣ** ಅವರು ಬರೆದಿರುವ **'ಚಂದ್ರನನ್ನು ಕರೆಯಿರಿ ಭೂಮಿಗೆ'** ಎಂಬ ಕೃತಿಯಿಂದ ಆಯ್ದ **ಮಳೆ ಬರಲಿ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಕವಯಿತ್ರಿ ಹೇಳಿದ್ದಾರೆ. ಬರುವ ಮಳೆ ರೈತರ ಬಾಳನ್ನು ಹಸನುಗೊಳಿಸುವಂತಾಗಬೇಕು. ಅದರೆ ಅವರ ಸುಖನಿದ್ದೆಗಳನ್ನು ಕಸಿದುಕೊಳ್ಳದಿರಲಿ ಎಂದು ತಿಳಿಸುವ ಸಮಯದಲ್ಲಿ ಈ ಮೇಲಿನ ಮಾತು ಬಂದಿದೆ.

2. ಹೊದೆಯಲು ಬೆಚ್ಚನೆಯ ಕಂಬಳಿ ಎಲ್ಲರಿಗೂ ಸಿಗಲಿ.

ಈ ವಾಕ್ಯವನ್ನು **ಸವಿತಾ ನಾಗಭೂಷಣ** ಅವರು ಬರೆದಿರುವ **'ಚಂದ್ರನನ್ನು ಕರೆಯಿರಿ ಭೂಮಿಗೆ'** ಎಂಬ ಕೃತಿಯಿಂದ ಆಯ್ದ **ಮಳೆ ಬರಲಿ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಕವಯಿತ್ರಿ ಹೇಳಿದ್ದಾರೆ. ಬರುವ ಮಳೆ ಹರುಷವನ್ನು ಹೊತ್ತು ತರಲಿ ಇರಲೊಂದು ಪುಟ್ಟ ಮನೆ, ಹೊದೆಯಲು ಬೆಚ್ಚನೆಯ ಕಂಬಳಿ ಎಲ್ಲರಿಗೂ ಸಿಗಲಿ ಎಂದು ತಿಳಿಸುವ ಸಮಯದಲ್ಲಿ ಈ ಮೇಲಿನ ಮಾತು ಬಂದಿದೆ.

3. ಕೆರೆ ಬಾವಿ ಹಳ್ಳಕೊಳ್ಳಗಳಿಗೆ ಬರಲಿ ಮಳೆ.

ಈ ವಾಕ್ಯವನ್ನು **ಸವಿತಾ ನಾಗಭೂಷಣ** ಅವರು ಬರೆದಿರುವ **'ಚಂದ್ರನನ್ನು ಕರೆಯಿರಿ ಭೂಮಿಗೆ'** ಎಂಬ ಕೃತಿಯಿಂದ ಆಯ್ದ **ಮಳೆ ಬರಲಿ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಕವಯಿತ್ರಿ ಹೇಳಿದ್ದಾರೆ. ಮಳೆ ಬಾರದೇ ಹೋದರೆ ಭೂಮಿಯ ಮೇಲೆ ಜೀವಕಳೆ ನಾಶವಾಗುತ್ತದೆ. ಆದ್ದರಿಂದ ಕೆರೆ, ಬಾವಿ, ಹಳ್ಳಕೊಳ್ಳಗಳಿಗೆ ಮಳೆ ಬರಲಿ ಎಂದು ಆಶಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

**3. ಭಾಷಾಭ್ಯಾಸ :**

**ಅ) ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.**

1. ಹಳ್ಳಕೊಳ್ಳ : ಜೋಡುನುಡಿ :: ಧೋ : **ಅನುಕರಣಾವ್ಯಯ**
2. ಹಳ್ಳ : ತಗ್ಗು :: ಕಸಿದು : **ಕಿತ್ತುಕೊಳ್ಳು**
3. ಸಿಗು : ಸಿಗಲಿ :: ನಗು : **ನಗಲಿ**

**ಆ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

1. ಸುಖನಿದ್ದೆ : ಮಳೆ ಬರಲಿ ರೈತರಿಗೆ ಸುಖನಿದ್ದೆಗಳನ್ನು ಕಸಿದುಕೊಳ್ಳದಂತಿರಲಿ.
2. ಬಾಯಾರು : ನಮಗೆ ಆಯಾಸವಾದಾಗ ಬಾಯಾರಿಕೆಯಾಗುತ್ತದೆ.
3. ಬೆಚ್ಚನೆ : ಚಳಿಗಾಲದಲ್ಲಿ ಬೆಚ್ಚನೆಯ ಹೊದಿಕೆ ಬೇಕು.

**ಇ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕಗಳನ್ನು ಬರೆಯಿರಿ.**

ಮೇಲೆ x ಕೆಳಗೆ, ಬೀಳು x ಏಳು, ಸುಖ x ದುಃಖ, ಕೆಡವು x ಕಟ್ಟು.

**ಈ) ಕೆಳಗಿನ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.**

**ಮಾದರಿ :** ಹಾಕದೆ + ಇರಲಿ = ಹಾಕದಿರಲಿ

1. ಇರಲೊಂದು = ಇರಲಿ + ಒಂದು
2. ಬಾಯಾರಿದ = ಬಾಯ + ಆರಿದ
3. ಕೊಳ್ಳದಿರಲಿ = ಕೊಳ್ಳದೆ + ಇರಲಿ

## 7. ಹಕ್ಕಿಗಳು – ಸಿದ್ಧಲಿಂಗಯ್ಯ

**ಕೃತಿಕಾರರ ಪರಿಚಯ:**

- **ಡಾ. ಸಿದ್ಧಲಿಂಗಯ್ಯ** ಅವರು 1954 ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಮಂಚನಬೆಲೆಯಲ್ಲಿ ಜನಿಸಿದರು. (ಈಗಿನ ರಾಮನಗರ ಜಿಲ್ಲೆ)
- ಇವರು ಹೊಲೆಮಾದಿಗರ ಹಾಡು, ಸಾವಿರಾರು ನದಿಗಳು, ಕಪ್ಪುಕಾಡಿನ ನಾಡು, ಮೆರವಣಿಗೆ, ಅವತಾರಗಳು, ಗ್ರಾಮದೇವತೆಗಳು, ಹಕ್ಕಿನೋಟ, ಪಂಚಮ, ನೆಲಸಮ, ಏಕಲವ್ಯ, ಊರು ಕೇರಿ ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಇವರಿಗೆ ರಾಜ್ಯೋತ್ಸವ ಪ್ರಶಸ್ತಿ, ಡಾ. ಅಂಬೇಡ್ಕರ್ ಶತಮಾನೋತ್ಸವ ವಿಶೇಷ ಬಹುಮಾನ, ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ಮುಂತಾದ ಪ್ರಶಸ್ತಿಗಳು ಲಭಿಸಿವೆ.
- ಪ್ರಸ್ತುತ 'ಹಕ್ಕಿಗಳು' ಕವನವನ್ನು ಅವರ **'ಮೆರವಣಿಗೆ'** ಕೃತಿಯಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

### ಅಭ್ಯಾಸ

**I. ಪದಗಳ ಅರ್ಥ :**

**ಅರಸು** – ಹುಡುಕು; ಶೋಧಿಸು.
**ಅರಿ** – ತಿಳಿ
**ಕಮರು (ಕ್ರಿ)** – ಕುಂದು; ಬಾಡು; ನಾಶವಾಗು.
**ಎಂಜಲು** – ತಿಂದು ಮಿಕ್ಕಿದ್ದು
**ಕರಾಳ (ಗು)** – ಭಯಂಕರವಾದ; ವಿಕೃತವಾದ.
**ಕುಸಿ** (ಕ್ರಿ) – ಕುಗ್ಗು; ಆಯಾಸಗೊಂಡು ಬೀಳು
**ಬಾಡು** (ಕ್ರಿ) – ಕುಗ್ಗು ; ಒಣಗು; ಕಳೆಗುಂದು.
**ಬಿರಿ** (ಕ್ರಿ) – ಅರಳು; ಬಿರುಕು.
**ಸೀಳುದಾರಿ** – ಕವಲುದಾರಿ
**ಹೊತ್ತು** – ಸಮಯ
**ಪಾತಾಳ** – ಭೂಮಿ ಕೆಳಗಿನ ಏಳು ಲೋಕಗಳಲ್ಲಿ ಒಂದು; ಬಹಳ ಆಳವಾದ ಸ್ಥಳ.
**ಗಂಜಲ** – ಗೋಮೂತ್ರ

**2. ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಹಕ್ಕಿಗಳು ಕವಿತೆ ಯಾರನ್ನು ಕುರಿತು ಬರೆದುದಾಗಿದೆ?
ಹಕ್ಕಿಗಳು ಕವಿತೆ ದಲಿತರು ಮತ್ತು ಶೋಷಿತರನ್ನು ಕುರಿತು ಬರೆದುದಾಗಿದೆ.
2. ಕುರಿದನಗಳನ್ನು ಕಾಯ್ದ ಬಾಲಕರಿಗೆ ಯಾವುದು ಸಿಗಲಿಲ್ಲ?
ಕುರಿದನಗಳನ್ನು ಕಾಯ್ದ ಬಾಲಕರಿಗೆ ಕುಡಿಯಲು ಹಾಲು ಸಿಗಲಿಲ್ಲ.
3. ಎಂಜಲು ತೊಳೆದವರಿಗೆ ಏನು ಸಿಗಬೇಕಾಗಿತ್ತು?
ಎಂಜಲು ತೊಳೆದವರಿಗೆ ಗಂಜಿ ಸಿಗಬೇಕಾಗಿತ್ತು.
4. ಗಿಡಗಳ ಜೊತೆ ಬೆಳೆದವರಿಗೆ ಯಾವ ಭಾಗ್ಯ ಸಿಗಲಿಲ್ಲ?
ಗಿಡಗಳ ಜೊತೆ ಬೆಳೆದವರಿಗೆ ಓದುವ ಬರೆಯುವ ಭಾಗ್ಯ ಸಿಗಲಿಲ್ಲ.
5. ಬಾಲಕರು ಚಳಿಯನು ತಡೆಯದೆ ಕುಸಿದುದು ಏಕೆ?
ಬಾಲಕರು ಎಂಜಲನ್ನು ತೊಳೆದು ಬಳಿದು ಗಂಜಿಯನ್ನು ಕಾಣದೆ, ಗುಡಿಗೋಪುರಗಳ ಬಣ್ಣಗಳಾಗಿ ಚಳಿಯನು ತಡೆಯದೆ ಕುಸಿದರು.
6. ಬಾಲಕರ ಕನಸುಗಳು ಹೇಗೆ ಕಮರಿಹೋಗಿವೆ?
ಬಾಲಕರ ಕನಸುಗಳು ಬಿರಿಯುವ ಮೊದಲೇ ಕಮರಿಹೋಗಿವೆ.

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಹಕ್ಕಿಗಳು ಕವಿತೆಯಲ್ಲಿ ಬಾಲಕರು ಯಾವ ಯಾವ ಅವಕಾಶಗಳಿಂದ ವಂಚಿತರಾಗಿದ್ದಾರೆ?
ಹಕ್ಕಿಗಳು ಕವಿತೆಯಲ್ಲಿ ಬಾಲಕರು ಹಾಲು ಕುಡಿಯುವ, ಓದುವ ಬರೆಯುವ, ಗಂಜಿಯ ಕುಡಿಯುವ, ಅವಕಾಶಗಳಿಂದ ವಂಚಿತರಾಗಿದ್ದಾರೆ.
2. ನೋವುಂಡ ಬಾಲಕರಿಗೆ ಯಾವ ಯಾವ ಅನುಭವಗಳಾಗಿವೆ?

ನೋವುಂಡ ಬಾಲಕರಿಗೆ ಬೆಟ್ಟವ ಹತ್ತುವ ಇಳಿಯುವ, ಪಾತಾಳದ ಕರಾಳ ನೋವನು ಕಾಣುವ, ಕುರಿ ದನಗಳ ಕಾಯ್ದು ಮೇಯಿಸುವ, ಗಿಡಗಳ ಜೊತೆ ಬೆಳೆಯುವ, ಎಂಜಲು ತೊಳೆಯುವ, ಗಂಜಲ ಬಳಿಯುವ, ಉರಿಬಿಸಿಲಲ್ಲಿ ಉರಿಯುವ, ಬಿರಿಯುವ ಮೊದಲೇ ಬಾಡುವ ಅನುಭವಗಳಾಗಿವೆ.

3. ಬಾಲಕರ ಹಾಡು ಮತ್ತು ನಾಡು ಯಾವ ಸ್ವರೂಪದ್ದಾಗಿದೆ? ಏಕೆ?

ಬಾಲಕರ ಹಾಡು ದಲಿತರ ಜೀವನ ಶೈಲಿಯನ್ನು ಮತ್ತು ದಾರುಣ್ಯ ಪರಿಸ್ಥಿತಿಯನ್ನು ವ್ಯಕ್ತಪಡಿಸಿದೆ. ಸಮಾಜದಲ್ಲಿ ನಾಗರಿಕ ಜೀವನ ನಡೆಸಲು ಕೂಡ ಸಾಧ್ಯವಾಗದ ಪರಿಸ್ಥಿತಿ ಮೇಲ್ವರ್ಗದವರಿಂದ ಏರ್ಪಟ್ಟಿತ್ತು. ನಾಡಿನಲ್ಲಿ ಮನುಷ್ಯ ಮಾನವತೆಯನ್ನು ಮರೆತಿದ್ದ, ಏಕೆಂದರೆ ನಾಡಿನಲ್ಲಿ ಜಾತಿಪದ್ಧತಿಯೇ ಇದಕ್ಕೆ ನೇರ ಕಾರಣವಾಗಿದೆ.

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಬಾಲಕರದು ನೋವಿನ ಹಾಡು, ಕತ್ತಲ ನಾಡು ಎಂದು ಕವಿ ಏಕೆ ಕರೆದಿದ್ದಾರೆ?

ಬಾಲಕರದು ನೋವಿನ ಹಾಡು, ಕತ್ತಲ ನಾಡು ಏಕೆಂದರೆ ದಲಿತರು ಶತಶತಮಾನಗಳಿಂದ ಮೇಲ್ವರ್ಗದವರಿಂದ, ಶ್ರೀಮಂತರಿಂದ ತುಳಿತಕ್ಕೆ ಒಳಗಾದವರು. ಇಲ್ಲಿ ಕವಿಯು ದಲಿತರ ಮನಸ್ಥಿತಿಯನ್ನು ಮನಸ್ಸಿನ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಬಾಲಕರ ಮುಖೇನ ಕವಿ ಸಿದ್ಧಲಿಂಗಯ್ಯನವರು ದಲಿತರು ಸಮಾಜದ ಮುಖ್ಯವಾಹಿನಿಗೆ ಬರುವಲ್ಲಿನ ಅಡೆತಡೆಗಳನ್ನು ವಿವರಿಸಿದ್ದಾರೆ. ಆ ಪ್ರಯತ್ನದಲ್ಲಿ ವಿಫಲತೆಯನ್ನು ಕತ್ತಲಿಗೆ ಹೋಲಿಸಿದ್ದಾರೆ. ಕತ್ತಲಿನಲ್ಲಿ ಬೆಳಕನ್ನು ಹುಡುಕುವ ಬಾಲಕರೆಂದು ಕರೆದಿದ್ದಾರೆ. ಸಮಾಜದಲ್ಲಿನ ದಲಿತರ ತುಳಿತವನ್ನು ನೇರವಾಗಿ ಪದ್ಯದ ಮುಖೇನ ಹೊರಹಾಕಿದ್ದಾರೆ.

2. 'ಹಕ್ಕಿಗಳು' ಕವಿತೆಯಲ್ಲಿ ವ್ಯಕ್ತಗೊಂಡಿರುವ ಕವಿಯ ಭಾವನೆಗಳೇನು?

ಶತಶತಮಾನಗಳಿಂದ ಶೋಷಣೆ, ಅನ್ಯಾಯ, ಅವಮಾನ, ನಿರ್ಲಕ್ಷ್ಯ ಹಾಗೂ ತುಳಿತಕ್ಕೆ ಒಳಗಾಗಿದ್ದಾರೆ. ಈ ರೀತಿ ತುಳಿತಕ್ಕೆ ಒಳಗಾದವರು ಎಲ್ಲರಂತೆ ಬದುಕಬೇಕು. ಸಮಾಜದಲ್ಲಿನ ಎಲ್ಲ ಸವಲತ್ತುಗಳು ಅವರಿಗೂ ಸಿಗಬೇಕು ಎಂದಿದ್ದಾರೆ. ಹಾಲು ಕುಡಿಯುವ, ಓದುವ ಬರೆಯುವ, ಗಂಜಿಯ ಕುಡಿಯುವ ಎಂದೂ ಬಾಡದಿರುವ ಕನಸುಗಳ ನನಸು ಮಾಡುವ ಹೊತ್ತು ದಿಕ್ಕನ್ನು ಅರಿಯುವ, ಬೆಳಕನ್ನು ಕಾಣುವ ಪರಿಸ್ಥಿತಿ ನನ್ನ ಜನಗಳಾದ ದಲಿತರಿಗೆ ಸಿಗಬೇಕು ಎಂಬ ಅನಿವಾರ್ಯತೆಯನ್ನು ಹೊರಹಾಕಿದ್ದಾರೆ. ಎಲ್ಲರಂತೆ ಮಾನವೀಯ ಬದುಕು ನನ್ನ ಜನಗಳದ್ದು ಆಗಿರಬೇಕು ಎಂಬುದೇ ಕವಿಯ ಭಾವನೆಗಳಾಗಿವೆ.

**ಈ) ಸಂದರ್ಭದೊಡನೆ ವಿವರಿಸಿರಿ.**

1. ಹಾಲನು ಕುಡಿಯದೆ ಹೋದವರು.

ಈ ವಾಕ್ಯವನ್ನು **ಸಿದ್ಧಲಿಂಗಯ್ಯ** ಅವರು ಬರೆದಿರುವ **'ಮೆರವಣಿಗೆ'** ಎಂಬ ಕೃತಿಯಿಂದ ಆಯ್ದ **ಹಕ್ಕಿಗಳು** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕವಿ ಹೇಳಿದ್ದಾರೆ. ಹಾಲು ಕೊಡುವ ಹಸುಗಳ ಜೊತೆಯಲ್ಲಿಯೇ ಇದ್ದು, ಅವುಗಳ ಮೇಯಿಸಿ ಗಂಜಲ ತೊಳೆದು, ಎಂಜಲು ಬಳಿದರು ನನ್ನ ಜನಗಳು, ಹಾಲು ಕುಡಿಯದೇ ಹೋದವರು, ಎಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

2. ಗಂಜಿಯ ಕಾಣದೆ ದುಡಿದವರು.

ಈ ವಾಕ್ಯವನ್ನು **ಸಿದ್ಧಲಿಂಗಯ್ಯ** ಅವರು ಬರೆದಿರುವ **'ಮೆರವಣಿಗೆ'** ಎಂಬ ಕೃತಿಯಿಂದ ಆಯ್ದ **ಹಕ್ಕಿಗಳು** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕವಿ ಹೇಳಿದ್ದಾರೆ. ದಲಿತರು ಪ್ರತಿದಿನ ಊಟದ ಎಲೆಯನ್ನು ಸ್ವಚ್ಛಗೊಳಿಸಿದರು. ಗಂಜಲವನ್ನೇ ಬಳಿದರು. ಹಸಿವಾದಾಗ ಕುಡಿಯುವ ಗಂಜಿಗೂ ಕಷ್ಟಪಡಬೇಕು ಎಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

3. ಕಮರುವ ಬಣ್ಣದ ಕನಸುಗಳು.

ಈ ವಾಕ್ಯವನ್ನು **ಸಿದ್ಧಲಿಂಗಯ್ಯ** ಅವರು ಬರೆದಿರುವ **'ಮೆರವಣಿಗೆ'** ಎಂಬ ಕೃತಿಯಿಂದ ಆಯ್ದ **ಹಕ್ಕಿಗಳು** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕವಿ ಹೇಳಿದ್ದಾರೆ. ಶೋಷಿತ ವರ್ಗದವರು ಎಲ್ಲರಂತೆ ತಾವುಗಳೂ ಬಣ್ಣ ಬಣ್ಣದ ಕನಸುಗಳನ್ನು ಕಟ್ಟಿಕೊಂಡವರು. ಆದರೆ ಆ ಕನಸು ನನಸಾಗುವ ಮೊದಲೇ ಕಮರಿ ಹೋಗುತ್ತವೆ ಎಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

4. ಬೆಳಕನು ಅರಸುವ ಹಕ್ಕಿಗಳು.

ಈ ವಾಕ್ಯವನ್ನು **ಸಿದ್ಧಲಿಂಗಯ್ಯ** ಅವರು ಬರೆದಿರುವ **'ಮೆರವಣಿಗೆ'** ಎಂಬ ಕೃತಿಯಿಂದ ಆಯ್ದ **ಹಕ್ಕಿಗಳು** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕವಿ ಹೇಳಿದ್ದಾರೆ. ಗೊತ್ತುಗುರಿಯಿಲ್ಲದ ದಲಿತರು ಸದಾಕಾಲ ಕವಲು ದಾರಿಯಲ್ಲಿ ಪ್ರಯಾಣ ಮಾಡುತ್ತಾರೆ. ಆ ಕತ್ತಲ ದಾರಿಯ ಬೆಳಕು ತಮ್ಮ ಜೀವನದಲ್ಲೂ ಮೂಡಿ ಬರುವುದೇನೋ? ಎಂಬ ಆಶಾಭಾವನೆ ಉಳ್ಳವರಾಗಿದ್ದಾರೆ ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

**3. ಭಾಷಾಭ್ಯಾಸ :**

**ಅ) ಕೆಳಗಿನ 'ಅ' ಪಟ್ಟಿಯೊಂದಿಗೆ 'ಬ' ಪಟ್ಟಿಯನ್ನು ಹೊಂದಿಸಿ ಬರೆಯಿರಿ.**

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| 1. ವರ್ಣ | ಈ) ಬಣ್ಣ |
| 2. ಪ್ರಯಾಣ | ಇ) ಪಯಣ |
| 3. ಹಾಲು | ಉ) ಪಾಲು |
| 4. ಹಕ್ಕಿ | ಆ) ಪಕ್ಷಿ |
| | ಅ) ದಿಸೆ |

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

ಇಳಿ x ಹತ್ತು, ಕತ್ತಲು x ಬೆಳಕು, ಕನಸು x ನನಸು, ಕಮರು x ಅರಳು.

**ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

1. ಭಾಗ್ಯ : ಈಗಿನ ಮಕ್ಕಳಿಗೆ ಓದುವ ಬರೆಯುವ ಭಾಗ್ಯ ಸಿಕ್ಕಿದೆ.
2. ಬಣ್ಣದ : ಉದ್ಯಾನವನದಲ್ಲಿ ಬಣ್ಣಬಣ್ಣದ ಹೂವುಗಳಿವೆ.
3. ಕನಸು : ನಾನು ಕಂಡ ಕನಸು ನನಸಾಯಿತು.
4. ಉರಿಬಿಸಿಲು: ಬೇಸಿಗೆಯಲ್ಲಿ ಉರಿಬಿಸಿಲು ಇರುತ್ತದೆ.
5. ಕರಾಳ ನೋವು: ಬಡವರು ಕರಾಳ ನೋವನ್ನು ಕಂಡಿದ್ದಾರೆ.
6. ಬಾಡುವ : ಬಿಸಿಲಿಗೆ ಹೂವುಗಳು ಬಾಡುವ ಹಾಗಾಗಿವೆ.
7. ಹೂವು : ಹೂವುಗಳ ರಾಣಿ ಗುಲಾಬಿ.

**ಈ) ಹಕ್ಕಿಗಳು ಕವಿತೆಯಲ್ಲಿ ಬಳಕೆಯಾಗಿರುವ ಕ್ರಿಯಾಪದಗಳನ್ನು ಪಟ್ಟಿಮಾಡಿರಿ.**

**ಉದಾ :** ಹತ್ತಿ, ಇಳಿ, ಕಾಯ್ದು, ಮೇಯಿಸಿ, ಕುಸಿದು, ಬಾಡಿ, ದುಡಿ, ಕಮರು, ಬಿರಿ.

**ಉ) ಯಾವುದೇ ಒಂದು ಪದಕ್ಕೆ 'ಗಳು' ಮತ್ತು 'ಅರು' ಪ್ರತ್ಯಯ ಸೇರಿದಾಗ ಬಹುವಚನ ರೂಪ ಪಡೆಯುತ್ತದೆ. ಅಂತಹ ಪದಗಳನ್ನು 'ಹಕ್ಕಿಗಳು' ಕವಿತೆಯಿಂದ ಆರಿಸಿ ಬರೆಯಿರಿ.**

| **'ಗಳು'** ಪ್ರತ್ಯಯದ ಪದಗಳು | **'ಅರು'** ಪ್ರತ್ಯಯದ ಪದಗಳು |
|---|---|
| 1. ನಾವುಗಳು | 1. ಹೋದವರು |
| 2. ಹಕ್ಕಿಗಳು | 2. ಕುಸಿದವರು |
| 3. ಎಲೆಗಳು | 3. ಪಯಣಿಗರು |
| 5. ಕನಸುಗಳು | 4. ಬೆಳೆದವರು |
| 4. ಹೂವುಗಳು | 5. ದುಡಿದವರು |

**ಊ) ಈ ಕೆಳಗಿನ ಪದ್ಯದ ಭಾವಾರ್ಥ ಬರೆಯಿರಿ.**

1. ಕುರಿಗಳ ಕಾಯ್ದು ದನಗಳ ಮೇಯಿಸಿ
ಹಾಲನು ಕುಡಿಯದೆ ಹೋದವರು
ಓದುವ ಬರೆಯುವ ಭಾಗ್ಯವು ಸಿಗದೆ
ಗಿಡಗಳ ಜೊತೆಯಲಿ ಬೆಳೆದವರು

ಶತಶತಮಾನಗಳಿಂದ ಶೋಷಣೆ, ಅನ್ಯಾಯ, ಅವಮಾನ, ನಿರ್ಲಕ್ಷ್ಯ ಹಾಗೂ ತುಳಿತಕ್ಕೆ ಒಳಗಾಗಿದ್ದಾರೆ. ಕುರಿ ದನಗಳ ಕಾಯ್ದು ಮೇಯಿಸುವ, ಹಾಲು ಕೊಡುವ ಹಸುಗಳ ಜೊತೆಯಲ್ಲಿಯೇ ಇದ್ದು, ನನ್ನ ಜನಗಳು, ಹಾಲು ಕುಡಿಯದೇ ಹೋದವರು. ಓದುವ ಬರೆಯುವ ಭಾಗ್ಯವು ಸಿಗದೆ ಗಿಡಗಳ ಜೊತೆಯಲ್ಲಿ ಬೆಳೆದವರಾಗಿದ್ದಾರೆ. ಇಲ್ಲಿ ಕವಿಯು ದಲಿತರ ಮನಸ್ಥಿತಿಯನ್ನು ಮನಸ್ಸಿನ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಬಾಲಕರ ಮುಖೇನ ಕವಿ ಸಿದ್ಧಲಿಂಗಯ್ಯನವರು ದಲಿತರು ಸಮಾಜದ ಮುಖ್ಯವಾಹಿನಿಗೆ ಬರುವಲ್ಲಿನ ಅಡೆತಡೆಗಳನ್ನು ವಿವರಿಸಿದ್ದಾರೆ.

2.ಎಂಜಲು ತೊಳೆದು ಗಂಜಲ ಬಳಿದು
ಗಂಜಿಯ ಕಾಣದೆ ದುಡಿದವರು
ಗುಡಿಗೋಪುರದ ಬಣ್ಣಗಳಾಗಿ
ಚಳಿಯನು ತಡೆಯದೆ ಕುಸಿದವರು
ಬಾಲಕರ ಹಾಡು ದಲಿತರ ಜೀವನ ಶೈಲಿಯನ್ನು ಮತ್ತು ದಾರುಣ್ಯ ಪರಿಸ್ಥಿತಿಯನ್ನು ವ್ಯಕ್ತಪಡಿಸಿದೆ. ದಲಿತ ವರ್ಗದ ಬಾಲಕರು ಎಂಜಲನ್ನು ತೊಳೆದು ಬಳಿದು ಗಂಜಿಯನ್ನು ಕಾಣದೆ, ಗಂಜಿಯ ಕುಡಿಯುವ, ಅವಕಾಶಗಳಿಂದ ವಂಚಿತರಾಗಿದ್ದಾರೆ. ಗುಡಿಗೋಪುರಗಳ ಬಣ್ಣಗಳಾಗಿ ಚಳಿಯನು ತಡೆಯದೆ ಕುಸಿದರು. ಕವಿ ಸಮಾಜದಲ್ಲಿನ ದಲಿತರ ತುಳಿತವನ್ನು ನೇರವಾಗಿ ಪದ್ಯದ ಮುಖೇನ ಹೊರಹಾಕಿದ್ದಾರೆ.

## 8. ಗೌರವಿಸು ಜೀವನವ – ಡಿ.ವಿ.ಜಿ.

**ಕೃತಿಕಾರರ ಪರಿಚಯ :**

- **ಡಿವಿಜಿ** ಎಂದು ಪ್ರಸಿದ್ಧರಾಗಿರುವ ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ ಅವರು 1887 ರಲ್ಲಿ ಕೋಲಾರ ಜಿಲ್ಲೆಯ ಮುಳಬಾಗಿಲಲ್ಲಿ ಜನಿಸಿದರು.
- ಇವರು ಮಂಕುತಿಮ್ಮನ ಕಗ್ಗ, ಮರುಳುಮುನಿಯನ ಕಗ್ಗ, ಉಮರನ ಒಸಗೆ, ಜ್ಞಾಪಕ ಚಿತ್ರಶಾಲೆ, ಅಂತಃಪುರದ ಗೀತೆಗಳು, ಶ್ರೀ ಮದ್ಭಗವದ್ಗೀತಾ ತಾತ್ಪರ್ಯ – ಮುಂತಾದ ಕೃತಿಗಳನ್ನು ರಚಿಸಿದ್ದಾರೆ.
- ಶ್ರೀಯುತರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಗೌರವ ಡಿ.ಲಿಟ್. ಪದವಿ ಲಭಿಸಿದೆ.
- 'ಗೌರವಿಸು ಜೀವನವ' ಪದ್ಯ ಭಾಗವನ್ನು ಡಿವಿಜಿ ಅವರ **'ಮಂಕುತಿಮ್ಮನ ಕಗ್ಗ'** ಕೃತಿಯಿಂದ ಆಯ್ಕೆಮಾಡಿಕೊಳ್ಳಲಾಗಿದೆ.

**ಅಭ್ಯಾಸ**

**I. ಪದಗಳ ಅರ್ಥ ತಿಳಿಯಿರಿ :**

**ಅನುಗ್ರಹ** – ಕೃಪೆ; ಆಶೀರ್ವಾದ; ದಯೆ.
**ಆತ್ಮೋನ್ನತಿ** – ಅಧ್ಯಾತ್ಮ ಸಾಧನೆಯಿಂದ ಉನ್ನತಿಗೇರುವುದು.
**ಕೂಟ** – ಸಂಗ; ಗುಂಪು.
**ಜೀವನ** – ಬದುಕು
**ತೃಣ** – ಹುಲ್ಲು; ಗರಿಕೆ.
**ನೂತ್ನ** – ನೂತನ; ಹೊಸ.
**ಬ್ರಹ್ಮಾನುಭವಿ** – ಅನುಭಾವದಿಂದ ಸಿದ್ಧಿ ಪಡೆದವರು.
**ಮೊಡಕು** – ಮೂಲೆ
**ವಿಸ್ತಾರ** – ಹರವು; ವಿಶಾಲತೆ.
**ಸತ್ತ್ವ** – ಸಾರ; ಬಲ; ಇರುವಿಕೆ.
**ಅಲ್ಪ** – ಕಡಿಮೆ
**ಕೆಳೆ** – ಸ್ನೇಹ; ಗೆಳೆತನ.
**ಚೇತನ** – ಮನಸ್ಸು; ಶಕ್ತಿ; ಆತ್ಮ.
**ತಣಿ** – ತಂಪಾಗು; ತೃಪ್ತಿಹೊಂದು.
**ದಿನಪ** – ಸೂರ್ಯ; ರವಿ; ಆದಿತ್ಯ.
**ಪುಣ್ಯ** – ಭಾಗ್ಯ; ಅದೃಷ್ಟ.
**ಭೇದ** – ಒಡಕು; ಬಿರುಕು; ಭಿನ್ನತೆ.
**ಮೃತ್ಯು** – ಸಾವು; ಮರಣ.
**ಸಮೃದ್ಧಿ** – ಐಶ್ವರ್ಯ; ಪ್ರಗತಿ.

**2.ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಕಣ್ಣಿನ ಪುಣ್ಯ ಯಾವುದು?
ತೃಣದ ಹಸಿರು ಬಣ್ಣ ನೋಡುವುದೇ ಕಣ್ಣಿನ ಪುಣ್ಯವಾಗಿದೆ.
2. ಡಿವಿಜಿ ಅವರು ಮಾನವ ಹೇಗೆ ಬಾಳಬೇಕು ಎಂದಿದ್ದಾರೆ?
ಡಿವಿಜಿ ಅವರು ಮಾನವ ಹೃದಯ ವೈಶಾಲ್ಯತೆಯಿಂದ ಬಾಳಬೇಕು ಎಂದಿದ್ದಾರೆ.
3. ಡಿವಿಜಿ ಅವರು ಯಾವುದನ್ನು ಗೌರವಿಸಬೇಕು ಎಂದಿದ್ದಾರೆ?
ಡಿವಿಜಿ ಅವರು ಜೀವನವನ್ನು ಗೌರವಿಸಬೇಕು ಎಂದಿದ್ದಾರೆ.
4. ಆತ್ಮೋನ್ನತಿಗೆ ದಾರಿ ಯಾವುದೆಂದು ಡಿವಿಜಿ ಹೇಳಿದ್ದಾರೆ?
ಆತ್ಮೋನ್ನತಿಗೆ ದಾರಿ ಬದುಕಿನಲ್ಲಿ ಸಮೃದ್ಧಿಯನ್ನು ಕಾಣುವುದಾಗಿದೆ.
5. ಡಿವಿಜಿ ಅವರ ಪೂರ್ಣ ಹೆಸರೇನು?

ಡಿವಿಜಿ ಅವರ ಪೂರ್ಣ ಹೆಸರು ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ.
6. 'ಗೌರವಿಸು ಜೀವನವ' ಕಾವ್ಯ ಭಾಗದ ಮೂಲ ಕೃತಿ ಯಾವುದು?
ಗೌರವಿಸು ಜೀವನವ ಕಾವ್ಯ ಭಾಗದ ಮೂಲ ಕೃತಿ **'ಮಂಕುತಿಮ್ಮನ ಕಗ್ಗ'**

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**
1. ತೃಣದ ಹಸಿರಿಗೆ ಕಾರಣವಾದ ಅಂಶಗಳಾವುವು?
ತೃಣದ ಹಸಿರಿಗೆ ಕಾರಣವಾದ ಅಂಶಗಳಾವುವೆಂದರೆ ಬೇರು, ಮಣ್ಣು, ಸೂರ್ಯ, ಚಂದ್ರ, ನೀರು ಮತ್ತು ನೋಡುವ ಕಣ್ಣುಗಳಾಗಿವೆ.
2. ಡಿವಿಜಿ ಅವರು ಜೀವನ ಯಾವಾಗ ಸಮೃದ್ಧವಾಗುತ್ತದೆ ಎಂದಿದ್ದಾರೆ?
ಡಿವಿಜಿ ಅವರು ಜೀವನವನ್ನು ನಾವು ಗೌರವಿಸುವುದರ ಮೂಲಕ, ಚೇತನವನ್ನು ಗೌರವಿಸುವುದರ ಮೂಲಕ, ಈ ಜಗತ್ತು ನನ್ನದೇ ಎಂಬ ಭಾವ ಹೊಂದುವುದರ ಮೂಲಕ ಜೀವನ ಸಮೃದ್ಧವಾಗುತ್ತದೆ ಎಂದಿದ್ದಾರೆ.
3. ಬ್ರಹ್ಮಾನುಭವ ಪಡೆಯುವುದು ಹೇಗೆ?
ಹೂದೋಟ, ಸ್ನೇಹಿತರ ಗುಂಪು, ಸಂಗೀತ, ಶಾಸ್ತ್ರ, ಸಂಸಾರ, ಮೌನ ಮುಂತಾದ ಸಂದರ್ಭಗಳಲ್ಲಿ ತನ್ಮಯತೆಯನ್ನು ಹೃದಯ ವೈಶಾಲ್ಯತೆಯನ್ನು ರೂಢಿಸಿಕೊಂಡು ಬ್ರಹ್ಮಾನುಭವ ಪಡೆಯಬಹುದಾಗಿದೆ.
4. ಜೀವನ ಮತ್ತು ಚೇತನವನ್ನು ಏಕೆ ಗೌರವಿಸಬೇಕು?
ನಮ್ಮ ಈ ಜೀವನವನ್ನು ಗೌರವಿಸಬೇಕು. ಈ ಜೀವಕ್ಕೆ ಮೂಲವಾದ ಚೇತನವನ್ನು ಗೌರವಿಸಬೇಕು. ಇವೆರಡರ ಸಂಗಮದಿಂದ ಮಾತ್ರ ನಮ್ಮ ಬದುಕಿನಲ್ಲಿ ಸಮೃದ್ಧಿ ಕಾಣಲು ಸಾಧ್ಯ. ನಮ್ಮ ಜೀವನ ಮತ್ತು ಚೇತನ ಶುದ್ಧವಾಗಿದ್ದರೆ ಆಗ ನಾವು ಮಾಡುವ ಪ್ರತಿ ಕೆಲಸಗಳು ಶುದ್ಧವಾಗಿರುತ್ತವೆ. ಹೀಗಾಗಿ ಜೀವನ ಮತ್ತು ಚೇತನವನ್ನು ಗೌರವಿಸಬೇಕು.
5. ಮೃತ್ಯು ಯಾವಾಗ ಅಲ್ಪವಾಗಿ ತೋರುತ್ತದೆ?
ಬದುಕಿನ ಎಲ್ಲ ಸಮಯದಲ್ಲಿ ಹೃದಯ ವೈಶಾಲ್ಯತೆಯನ್ನು ರೂಢಿಸಿಕೊಂಡಾಗ ನಮ್ಮ ಬದುಕು ಕತ್ತಲೆಯ ಮೂಲೆಯಿಂದ ಬೆಳಕಿನೆಡೆಗೆ ಸಾಗುತ್ತದೆ. ಆ ಭಾಸ್ಕರ ಎಲ್ಲ ಜೀವಿಗಳನ್ನು ತನ್ನ ಬೆಳಕಿನ ಅನುಗ್ರಹದಿಂದ ಹೊಸತು ಜೀವನದ ಕಡೆ ಕೊಂಡೊಯ್ಯುವಾಗ ಎಲ್ಲರನ್ನು ಬಾಧಿಸುವ ಮೃತ್ಯು ಕೂಡ ಆಗ ಅಲ್ಪವಾಗಿ ತೋರುತ್ತದೆ.

**ಇ) ಕೆಳಗಿನ ಪ್ರಶ್ನೆಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**
1. ಗೌರವಿಸು ಜೀವನವ ಪದ್ಯಗಳಲ್ಲಿ ಅಂತರ್ಗತವಾಗಿರುವ ಕವಿಯ ಭಾವನೆಗಳನ್ನು ವಿವರಿಸಿ.
ನಮ್ಮ ಈ ಜೀವನವನ್ನು ಗೌರವಿಸಬೇಕು. ಈ ಜೀವಕ್ಕೆ ಮೂಲವಾದ ಚೇತನವನ್ನು ಗೌರವಿಸಬೇಕು. ಇದು ಯಾರದೋ ಜಗತ್ತು, ನಾನೇನು ಇಲ್ಲಿ ಶಾಶ್ವತವಾಗಿರುವುದಿಲ್ಲ ಎನ್ನುವ ಭಾವವನ್ನು ತೊರೆದು ಬದುಕಿನಲ್ಲಿ ಸಮೃದ್ಧಿಯನ್ನು ಕಾಣಲು ಪ್ರಯತ್ನಿಸಬೇಕು. ನಮ್ಮ ದೇಹ, ಮನಸ್ಸು ಮತ್ತು ಚೇತನ ಶುದ್ಧವಾಗಿರಬೇಕು. ಆಗ ನಾವು ಮಾಡುವ ಪ್ರತಿ ಕೆಲಸಗಳೂ ಶುದ್ಧವಾಗಿರುತ್ತವೆ. ಅದು ಆತ್ಮೋನ್ನತಿಗೆ ದಾರಿಯಾಗುತ್ತದೆ.

ಪ್ರಪಂಚದಲ್ಲಿ ನಾವು ನೋಡುವ ಪ್ರತಿ ವಸ್ತುವಿನಲ್ಲೂ ಹಲವು ಸೋಜಿಗಗಳಿವೆ. ತೃಣದ ಹಸಿರಿಗೆ ಕಾರಣವಾದ ಬೇರು, ಮಣ್ಣು, ಸೂರ್ಯ, ಚಂದ್ರ, ನೀರು ಮತ್ತು ನೋಡುವ ಕಣ್ಣುಗಳಾಗಿವೆ. ಆ ಸೋಜಿಗಗಳಿಗೆ ಕಾರಣಗಳನ್ನು ಹುಡುಕಲು ನಮ್ಮಿಂದ ಸಾಧ್ಯವಿಲ್ಲ. ಆ ಪರಮಾತ್ಮ ತನ್ನಿಚ್ಛೆಯಂತೆ ತನ್ನ ಸಂತೋಷಕ್ಕೆ ಎಲ್ಲವನ್ನೂ ಸೃಷ್ಟಿಸಿ ಆನಂದಪಡುತ್ತಾನೆ. ಹೀಗಾಗಿ ನಮ್ಮಲ್ಲಿರುವ ಅಹಂಕಾರವನ್ನು ಬಿಟ್ಟು ಆನಂದಪಡುವುದನ್ನು ಕಲಿಯಬೇಕು. ಹೂದೋಟ, ಸ್ನೇಹಿತರ ಗುಂಪು, ಸಂಗೀತ, ಶಾಸ್ತ್ರ, ಸಂಸಾರ, ಮೌನ ಮುಂತಾದ ಸಂದರ್ಭಗಳಲ್ಲಿ ತನ್ಮಯತೆಯನ್ನು ಹೃದಯ ವೈಶಾಲ್ಯತೆಯನ್ನು ರೂಢಿಸಿಕೊಂಡು ಬ್ರಹ್ಮಾನುಭವ ಪಡೆಯಬಹುದಾಗಿದೆ. ಬದುಕಿನ ಎಲ್ಲ ಸಮಯದಲ್ಲಿ ಹೃದಯ ವೈಶಾಲ್ಯತೆಯನ್ನು ರೂಢಿಸಿಕೊಂಡಾಗ ನಮ್ಮ ಬದುಕು ಕತ್ತಲೆಯ ಮೂಲೆಯಿಂದ ಬೆಳಕಿನೆಡೆಗೆ ಸಾಗುತ್ತದೆ. ಆ ಭಾಸ್ಕರ ಎಲ್ಲ ಜೀವಿಗಳನ್ನು ತನ್ನ ಬೆಳಕಿನ ಅನುಗ್ರಹದಿಂದ ಹೊಸತು ಜೀವನದ ಕಡೆ ಕೊಂಡೊಯ್ಯುವಾಗ ಎಲ್ಲರನ್ನು ಬಾಧಿಸುವ ಮೃತ್ಯು ಕೂಡ ಆಗ ಅಲ್ಪವಾಗಿ ತೋರುತ್ತದೆ. ಎನ್ನುವ ವಿಚಾರಗಳನ್ನು ಡಿವಿಜಿ ಅವರು ಇಲ್ಲಿ ವ್ಯಕ್ತಪಡಿಸಿದ್ದಾರೆ.

**ಈ) ಸಂದರ್ಭದೊಡನೆ ವಿವರಿಸಿರಿ.**
1. ಗುಣಕೆ ಕಾರಣವೊಂದೆ
ಈ ವಾಕ್ಯವನ್ನು **ಡಿ.ವಿ.ಜಿ** ಅವರು ಬರೆದಿರುವ **'ಮಂಕುತಿಮ್ಮನ ಕಗ್ಗ'** ಎಂಬ ಕೃತಿಯಿಂದ ಆಯ್ದ **ಗೌರವಿಸು ಜೀವನವ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಕವಿ ಹೇಳಿದ್ದಾರೆ. ಹಸಿರು ಹುಲ್ಲಿಗೆ ಬಣ್ಣವನ್ನು ತುಂಬಿದವನು, ಮಣ್ಣು, ಸೂರ್ಯ, ಚಂದ್ರ, ನೀರು, ನೋಡುವ ಕಣ್ಣು ಯಾವುದೆಂದು ಹೇಳಲು ಸಾಧ್ಯವಿಲ್ಲ. ಹುಲ್ಲಿನ ಹಸಿರು ಬಣ್ಣ ತುಂಬಿರುವುದು ಅದರ ಗುಣವೆ ಆಗಿದೆ ಎಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

2. ಆರದೋ ಜಗವೆಂದು ಭೇದವೆಣಿಸದಿರು
ಈ ವಾಕ್ಯವನ್ನು **ಡಿ.ವಿ.ಜಿ** ಅವರು ಬರೆದಿರುವ **'ಮಂಕುತಿಮ್ಮನ ಕಗ್ಗ'** ಎಂಬ ಕೃತಿಯಿಂದ ಆಯ್ದ **ಗೌರವಿಸು ಜೀವನವ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಕವಿ ಹೇಳಿದ್ದಾರೆ. ನಮ್ಮ ಈ ಜೀವನವನ್ನು ಗೌರವಿಸಬೇಕು. ಈ ಜೀವಕ್ಕೆ ಮೂಲವಾದ ಚೇತನವನ್ನು ಗೌರವಿಸಬೇಕು. ಇದು ಯಾರದೋ ಜಗತ್ತು ಎಂಬ ಭೇದ ಎಣಿಸಬಾರದು ಎಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.
3.ಬ್ರಹ್ಮಾನುಭವಿಯಾಗು
ಈ ವಾಕ್ಯವನ್ನು **ಡಿ.ವಿ.ಜಿ** ಅವರು ಬರೆದಿರುವ **'ಮಂಕುತಿಮ್ಮನ ಕಗ್ಗ'** ಎಂಬ ಕೃತಿಯಿಂದ ಆಯ್ದ **ಗೌರವಿಸು ಜೀವನವ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಕವಿ ಹೇಳಿದ್ದಾರೆ. ಮನುಷ್ಯನು ಜ್ಞಾನವೆಂಬ ಅನುಭವವನ್ನು ಹೂದೋಟ, ಸ್ನೇಹಿತರ ಗುಂಪು, ಸಂಗೀತ, ಶಾಸ್ತ್ರ, ಸಂಸಾರ, ಮೌನ ಮುಂತಾದ ಸಂದರ್ಭಗಳಲ್ಲಿ ತನ್ಮಯತೆಯನ್ನು ಹೃದಯ ವೈಶಾಲ್ಯತೆಯನ್ನು ರೂಢಿಸಿಕೊಂಡು ಬ್ರಹ್ಮಾನುಭವಿಯಾಗಬಹುದು ಎಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.
4. ವಿಸ್ತಾರದಲಿ ಬಾಳು ವೈಶಾಲ್ಯದಿಂ ಬಾಳು
ಈ ವಾಕ್ಯವನ್ನು **ಡಿ.ವಿ.ಜಿ** ಅವರು ಬರೆದಿರುವ **'ಮಂಕುತಿಮ್ಮನ ಕಗ್ಗ'** ಎಂಬ ಕೃತಿಯಿಂದ ಆಯ್ದ **ಗೌರವಿಸು ಜೀವನವ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಕವಿ ಹೇಳಿದ್ದಾರೆ. ಬದುಕಿನ ಎಲ್ಲ ಸಮಯದಲ್ಲಿ ತನ್ಮಯತೆಯನ್ನು ಹೃದಯ ವೈಶಾಲ್ಯತೆಯನ್ನು ರೂಢಿಸಿಕೊಂಡು ಬ್ರಹ್ಮಾನಂದವನ್ನು ಅನುಭವಿಸಬೇಕು ಎಂದು ಕವಿ ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

**3. ಭಾಷಾಭ್ಯಾಸ :**
**ಅ) ಕೆಳಗಿನ ಪದಗಳಲ್ಲಿ ಗುಂಪಿಗೆ ಸೇರದಿರುವ ಪದವನ್ನು ಆಯ್ದು ಬರೆಯಿರಿ.**
1. ಸೂರ್ಯ, ಚಂದ್ರ, ಭಾಸ್ಕರ, ದಿನಪ = **ಚಂದ್ರ**
2. ಕಣ್ಣು, ನೇತ್ರ, ನಯನ, ತೃಣ = **ತೃಣ**
3. ಸಾವು, ಮೃತ್ಯು, ಹುಟ್ಟು, ನಿಧನ = **ಹುಟ್ಟು**
4. ಗೆಳೆತನ, ಶತೃ, ಸ್ನೇಹ, ಕೆಳೆ = **ಶತೃ**

**ಆ) ಕೆಳಗೆ ನೀಡಿರುವ 'ಅ' ಪಟ್ಟಿಯೊಂದಿಗೆ 'ಬ' ಪಟ್ಟಿಯನ್ನು ಹೊಂದಿಸಿ ಬರೆಯಿರಿ.**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| 1) ಗೌರವಿಸು | ಡ) ಜೀವನವ |
| 2) ವಿಸ್ತಾರದಲಿ | ಕ) ಬಾಳು |
| 3) ಮೂಲೆಗಳ | ಇ) ಸೇರದಿರು |
| 4) ಭಾಸ್ಕರನ | ಬ) ಅನುಗ್ರಹ |

**ಇ) ಕೆಳಗೆ ನೀಡಿರುವ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**
1.ಚೇತನ : ಚೇತನ ಹೂವಿನಂತಿರಬೇಕು.
2.ಅನುಗ್ರಹ : ನಮಗೆ ದೇವರ ಅನುಗ್ರಹ ಇದೆ.
3.ಗೌರವಿಸು : ಗುರುಹಿರಿಯರನ್ನು ಗೌರವಿಸಬೇಕು.
4.ಮೌನ : ಮಾತಿಗಿಂತ ಮೌನ ಒಳ್ಳೆಯದು.
5.ಸಮೃದ್ಧಿ : ಮಳೆಗಾಲದಲ್ಲಿ ಭೂಮಿ ಹಸಿರಿನಿಂದ ಸಮೃದ್ಧಿಯಾಗಿರುತ್ತದೆ.
6.ಗುಣ : ಗುಣ ನೋಡಿ ಗೆಳೆತನ ಮಾಡಬೇಕು.

**ಈ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಬರೆಯಿರಿ.**

ಪುಣ್ಯ x ಪಾಪ, ಗೌರವ x ಅಗೌರವ, ವಿವೇಕ x ಅವಿವೇಕ, ಸಮ x ಅಸಮ,

ಮೃತ್ಯು x ಅಪಮೃತ್ಯು, ಭೇದ x ಅಭೇದ, ಚೇತನ x ನಿಶ್ಚೇತನ.

**ಉ) ಕೆಳಗಿನ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿರಿ.**
1. ಹಸಿರೆಲ್ಲಿ = ಹಸಿರು + ಎಲ್ಲಿ – ಲೋಪಸಂಧಿ

2. ಕಾರಣವೊಂದೇ = ಕಾರಣ + ಒಂದೇ – ಆಗಮಸಂಧಿ
3. ಭೇದವೆಣಿಸು = ಭೇದ + ಎಣಿಸು – ಆಗಮಸಂದಿ
4. ಆತ್ಮೋನ್ನತಿ = ಆತ್ಮ + ಉನ್ನತಿ – ಗುಣಸಂಧಿ
5. ಹೂದೋಟ = ಹೂ + ತೋಟ – ಆದೇಶಸಂಧಿ
6. ಬ್ರಹ್ಮಾನುಭವಿ = ಬ್ರಹ್ಮ + ಅನುಭವಿ – ಸವರ್ಣದೀರ್ಘಸಂಧಿ
7. ಭಾಸ್ಕರನನುಗ್ರಹ = ಭಾಸ್ಕರನ + ಅನುಗ್ರಹ – ಲೋಪಸಂಧಿ

## ಗಾದೆಗಳ ವಿಸ್ತರಣೆ

**1) ಹಾಸಿಗೆ ಇದ್ದಷ್ಟು ಕಾಲು ಚಾಚು**

**ಪೀಠಿಕೆ:** ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ, ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

**ವಿವರಣೆ** – ನಾವು ನಮ್ಮ ಅರ್ಹತೆಗೆ ತಕ್ಕ ಗುರಿಯನ್ನು, ಆಸೆಯನ್ನು ಹೊಂದಿರಬೇಕು. ಇಲ್ಲದಿದ್ದರೆ ತಿರುಕ ಕಂಡ ಕನಸಿನಂತೆ ಕನಸು ಕನಸಾಗಿಯೇ ಉಳಿಯುತ್ತದೆ. ಮುಂದೆ ಪಡಬಾರದ ಕಷ್ಟವನ್ನು ಪಡಬೇಕಾಗುತ್ತದೆ. ಆದ್ದರಿಂದ ಹಣವನ್ನು ದುಂದುವೆಚ್ಚ ಮಾಡಬಾರದು. ನ್ಯಾಯಯುತವಾಗಿ ಸಂಪಾದಿಸಿದ ಸಂಪಾದನೆಯಲ್ಲಿಯೇ ಜೀವನ ನಡೆಸಬೇಕು ಎಂಬುದು ಮೇಲಿನ ಗಾದೆ ಮಾತಿನ ಅರ್ಥವಾಗಿದೆ.

**2) ಅತಿ ಆಸೆ ಗತಿಗೇಡು**

**ಪೀಠಿಕೆ** :ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ, ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

**ವಿವರಣೆ:** ಮನುಷ್ಯನಿಗೆ ಆಸೆ ಇರಬೇಕು, ಆದರೆ ದುರಾಸೆ ಇರಬಾರದು. ಅತಿಯಾದ ಅಸೆ ದುಃಖಕ್ಕೆ ಕಾರಣವಾಗಿ ಇರುವುದನ್ನು ಕಳೆದುಕೊಂಡು ಗತಿಹೀನರನ್ನಾಗಿ ಮಾಡುತ್ತದೆ. ಉದಾ – ಊಟ ಬಹಳ ರುಚಿಯಾಗಿದೆ ಎಂದು ಹೆಚ್ಚು ತಿಂದರೆ ಅಜೀರ್ಣವಾಗುತ್ತದೆ. ಖ್ಯಾತ ಕವಿ ಡಿ.ವಿ.ಜಿ ಅವರು ಹೇಳುವಂತೆ ಜೀವನದಲ್ಲಿ ಅತಿ ಎಂಬುದು ಎಲ್ಲಿಯೂ ಇಲ್ಲದಿದ್ದರೆ ನೆಮ್ಮದಿಯ ಜೀವನ ನಮ್ಮದಾಗುತ್ತದೆ. ಆದ್ದರಿಂದ ಅತಿ ಆಸೆ ಹೊಂದದೆ ಇದ್ದುದರಲ್ಲಿಯೇ ತೃಪ್ತರಾಗಿರಬೇಕು ಎಂಬುದು ಈ ಗಾದೆಯ ಅರ್ಥ ಹಾಗೂ ಉದ್ದೇಶವಾಗಿದೆ.

**3) ಕೈ ಕೆಸರಾದರೆ ಬಾಯಿ ಮೊಸರು.**

**ಪೀಠಿಕೆ:** ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ, ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಬವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

**ವಿವರಣೆ:** ಕೈ ಕೆಸರಾದರೆ ಬಾಯಿ ಮೊಸರು ಎಂದರೆ ಕಷ್ಟ ಪಟ್ಟು ದುಡಿದರೆ ದುಡಿಮೆಗೆ ತಕ್ಕ ಪ್ರತಿಫಲ ಸಿಗುತ್ತದೆ. ಎಂಬುದು ಈ ಮೇಲಿನ ಗಾದೆ ಮಾತಿನ ಅರ್ಥವಾಗಿದೆ. ಉದಾಹರಣೆಗೆ ರೈತರು ಸರಿಯಾದ ಸಮಯದಲ್ಲಿ ಹೊಲದಲ್ಲಿ ಉತ್ತಿ ಬಿತ್ತಿ ಬೆಳೆ ಬೆಳೆದರೆ ಮುಂದೆ ಫಸಲು ಸಮೃದ್ಧವಾಗಿ ಸಿಗುತ್ತದೆ. ಆಳಾಗಿ ದುಡಿ ಅರಸನಾಗಿ ಉಣ್ಣು, ಎಂಬ ಗಾದೆಮಾತಿಗೆ ಸಮಾನವಾದ ಗಾದೆಯಾಗಿದೆ. ಇದರಲ್ಲಿ ಕಾಯಕದ ಮಹತ್ವ ಅಡಗಿದೆ.

**4) ದೇಶ ಸುತ್ತಿ ನೋಡು; ಕೋಶ ಓದಿ ನೋಡು**

**ಪೀಠಿಕೆ:** ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ, ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

**ವಿವರಣೆ:** ದೇಶ ಸುತ್ತಿ ನೋಡು, ಕೋಶ ಓದಿ ನೋಡು.' ಇದೊಂದು ಪ್ರಚಲಿತದಲ್ಲಿರುವ ಗಾದೆಮಾತಾಗಿದೆ. ಜ್ಞಾನ ಸಂಪಾದನೆಯು ಪ್ರವಾಸ ಮಾಡುವುದರಿಂದ ಇಲ್ಲವೇ ಪುಸ್ತಕ ಓದುವುದರಿಂದ ಸಾಧ್ಯವಾಗುತ್ತದೆ ಎಂಬುದು ಈ ಗಾದೆಮಾತಿನ ಅರ್ಥವಾಗಿದೆ. ಪ್ರವಾಸ ಮಾಡುವುದು ಎಲ್ಲರಿಂದಲೂ ಸಾಧ್ಯವಿಲ್ಲ. ಆದರೆ ಜ್ಞಾನ ಭಂಡಾರದ ಕೀಲಿಕೈಯಂತಿರುವ ಪುಸ್ತಕವನ್ನು ಓದುವುದು ಎಲ್ಲರಿಂದಲೂ ಸಾಧ್ಯ ಎಂಬುದು ಈ ಗಾದೆ ಮಾತಿನ ವೈಶಿಷ್ಟ್ಯವಾಗಿದೆ.

**5) ಬೆಳೆಯುವ ಸಿರಿ ಮೊಳಕೆಯಲ್ಲಿ.**
**ಪೀಠಿಕೆ:** ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ, ಗಾದೆ ಮಾತುಗಳು ಸರ್ವಕಾಲಿ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.
**ವಿವರಣೆ–** ಮುಂದೆ ಬೆಳೆಯಬಹುದಾದ ಪೈರಿನ ಗುಣವನ್ನು ಅದು ಮೊಳಕೆಯಲ್ಲಿ ಇದ್ದಾಗಲೇ ಕಂಡುಬರುತ್ತದೆ. ಒಬ್ಬ ಸಾಧಕನ ಸಾಧನೆಯ ಗುಣ ಆತನ ಬಾಲ್ಯದಲ್ಲಿಯೇ ಕಂಡು ಬರುತ್ತದೆ. ಎಂಬುದು ಈ ಗಾದೆ ಮಾತಿನ ಅರ್ಥವಾಗಿದೆ.ಪಂಡಿತ ಪುಟ್ಟರಾಜ ಗವಾಯಿಗಳ ಸಾಧನೆ ಇದಕ್ಕೆ ಉತ್ತಮ ಉದಾಹರಣೆಯಾಗಿದೆ.

## ಪ್ರಬಂಧಗಳು

**1) ಪರಿಸರ ಸಂರಕ್ಷಣೆಯ ಇಂದಿನ ಅಗತ್ಯ:**
**ಪೀಠಿಕೆ:** – ಮನುಷ್ಯ ಪರಿಸರದ ಕೂಸು ಎಂಬುದು ಪ್ರಸಿದ್ಧವಾದ ಮಾತು. ಪರಿಸರ ಎಂಬುದು ಮನುಷ್ಯನಿಗೆ ಮಾತ್ರವಲ್ಲ, ಪ್ರತಿಯೊಂದು ಜೀವಿಗೂ ತಾಯಿಯ ಸಮಾನ. ಆದರೆ ಇಂದು ಮಾನವ ಪರಿಸರದ ಮೇಲೆ ಬಲತ್ಕಾರ ಮಾಡುತ್ತಿದ್ದಾನೆ. ಇದರಿಂದ ಪರಿಸರ ನಾಶವಾಗುತ್ತಿದೆ.
**ವಿಷಯ ನಿರೂಪಣೆ:** – ಮಾನವನು ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ವಿವಿಧ ರೀತಿಯಲ್ಲಿ ಹಾಳು ಮಾಡುತ್ತಿದ್ದಾನೆ. ಇದಕ್ಕೆಪ್ರತಿಯಾಗಿ ಪ್ರಕೃತಿಯು ನೆರೆ ಹಾವಳಿ, ಭೂಕಂಪ, ಅತಿವೃಷ್ಟಿ,ಅನಾವೃಷ್ಟಿ, ಅಕಾಲವೃಷ್ಟಿ, ಚಂಡಮಾರುತ, ಸಾಂಕ್ರಾಮಿಕರೋಗಗಳ ಮೂಲಕ ಪ್ರತಿಭಟನೆಯನ್ನು ನಡೆಸಿದೆ. ಇದನ್ನು ಅರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ. ಪರಿಸರ ಮಾಲಿನ್ಯಕ್ಕೆ ಅತಿಕ್ರಮಣ ಸಾಗುವಳಿ, ಅರಣ್ಯನಾಶ, ರಾಸಾಯನಿಕ ಗೊಬ್ಬರಗಳ ಬಳಕೆ,ಗಣಿಗಾರಿಕೆ ಮುಂತಾದವು ಕಾರಣಗಳಾಗಿವೆ. ದಿನದಿಂದ ದಿನಕ್ಕೆ ಅಂತರ್ಜಲದ ಮಟ್ಟ ಕುಸಿಯುತ್ತಿದೆ. ಎಷ್ಟೋ ಜೀವಸಂಕುಲಗಳು ಅಳಿವಿನಂಚಿನಲ್ಲಿವೆ. ಪರಿಸರದಲ್ಲಿ ಒಂದು ಅಂಶವು ಅಳಿದು ಹೋದರೆ ಸಮತೋಲನ ತಪ್ಪುತ್ತದೆ.
**ಉಪಸಂಹಾರ** :– ಪರಿಸರ ದಿನದಿಂದ ದಿನಕ್ಕೆ ನಾಶವಾಗುತ್ತಾ ಸಾಗಿದರೆ ನಮ್ಮ ಮುಂದಿನ ಪೀಳಿಗೆಗೆ ಶುದ್ಧ ನೀರು,ಗಾಳಿ, ಆಹಾರ ಸಿಗದೇ ಹೋಗಬಹುದು. ಆದ್ದರಿಂದ ಇದನ್ನರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ.

**2) ಕ್ರೀಡೆಗಳ ಮಹತ್ವ:**
**ಪೀಠಿಕೆ:**– ಆರೋಗ್ಯವೇ ಭಾಗ್ಯ ಎಂಬ ನಾಣ್ಣುಡಿಯಂತೆ ಕ್ರೀಡೆಗಳು ಆಧುನಿಕತೆಯಲ್ಲಿ ಬಹಳ ಪ್ರಾಮುಖ್ಯತೆ ಪಡೆದುಕೊಂಡಿವೆ. ಸದೃಢ ದೇಹದಲ್ಲಿ ಸದೃಢ ಮನಸ್ಸು ರೂಪಗೊಳ್ಳುತ್ತದೆ. ಆದ್ದರಿಂದ ಪಾಠದ ಜೊತೆಗೆ ಆಟವು ಬೇಕಾಗಿದೆ.
**ವಿಷಯ ನಿರೂಪಣೆ:**– ಇಂದು ಮಾನವನ ಬದುಕು ಯಾಂತ್ರಿಕ ಬದುಕಾಗಿದೆ. ಜೀವನದಲ್ಲಿ ಉತ್ಸಾಹ ತುಂಬಲು ಮಕ್ಕಳಿಂದ ಹಿಡಿದು ವೃದ್ದರೆಲ್ಲರಿಗೂ ಕ್ರೀಡೆಗಳು ಅವಶ್ಯಕವಾಗಿವೆ. ನಮಗೆ ಇಷ್ಟವಾದ ಕ್ರೀಡೆಯನ್ನು ಆಯ್ಕೆಮಾಡಿಕೊಂಡು ಸತತವಾಗಿ ಪ್ರಯತ್ನಮಾಡಿದರೆ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಹೆಸರು ಗಳಿಸಬಹುದು. ಇದಕ್ಕೆ ಉತ್ತಮ ಉದಾಹರಣೆಯಾಗಿ ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ ಮುಂತಾದವರು ನಮ್ಮ ಕಣ್ಮುಂದೆ ಇದ್ದಾರೆ. ಮಗು ಕ್ರೀಡೆಯಲ್ಲಿ ಭಾಗಿಯಾಗುವುದರಿಂದ ಏಕಾಗ್ರತೆ, ಚುರುಕುತನ, ತತಕ್ಷಣದಲ್ಲಿ ಪ್ರತಿಕ್ರಿಯಿಸುವ ಮನೋಭಾವ ಹಾಗೂ ನಾಯಕತ್ವದ ಗುಣಗಳು ಬೆಳೆದು ಪರಿಪೂರ್ಣ ವ್ಯಕ್ತಿತ್ವ ಹೊಂದಲು ಸಾಧ್ಯವಾಗುತ್ತದೆ.
**ಉಪಸಂಹಾರ:**– ಒಟ್ಟಾರೆಯಾಗಿ ಕ್ರೀಡೆಗಳು ಮಾನವನ ಬದುಕಿನ ಒಂದು ಅಂಗವಾಗಿವೆ. ನಮ್ಮ ಪೂರ್ವಜರಿಂದ ಬಳುವಳಿಯಾಗಿ ಬಂದಿರುವ ಜನಪದ ಕ್ರೀಡೆಗಳನ್ನು ಉಳಿಸಿ ಬೆಳೆಸುವ ಹೊಣೆ ನಮ್ಮದಾಗಬೇಕಿದೆ.

**3) ಸಂಪರ್ಕ ಮಾಧ್ಯಮಗಳಲ್ಲಿ ದೂರದರ್ಶನದ ಪಾತ್ರ:**
**ಪೀಠಿಕೆ** :– ಸಂಪರ್ಕ ಮಾಧ್ಯಮಗಳಲ್ಲಿ ಅತೀ ಹೆಚ್ಚು ಬಳಕೆಯಲ್ಲಿರುವ ಮಾಧ್ಯಮ ದೂರದರ್ಶನವಾಗಿದೆ. ಹೆಸರೇ ಹೇಳುವಂತೆ ದೂರದಲ್ಲಿರುವುದನ್ನು ಕುಳಿತಲ್ಲಿಯೇ ದರ್ಶನ ಮಾಡಿಸುವುದು ದೂರದರ್ಶನವಾಗಿದೆ.
**ವಿಷಯ ನಿರೂಪಣೆ** :– ದೂರದರ್ಶನ ಜನಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ಇದು ಮಕ್ಕಳಾದಿಯಾಗಿ ವಯೋವೃದ್ಧರವರೆಗೂ ಎಲರನ್ನು ಆಕರ್ಷಿಸುವ ಮಾಧ್ಯಮವಾಗಿದೆ. ಸಮಾಜದ ನಾನಾ ವೃತ್ತಿಗಳಲ್ಲಿ ತೊಡಗಿರುವ ಎಲ್ಲಾ ಜನರಿಗೂ ಉಪಯುಕ್ತ ಮಾಹಿತಿಯನ್ನು ಒದಗಿಸುವುದರೊಂದಿಗೆ ಮನೋರಂಜನಾ ಮಾಧ್ಯಮವಾಗಿಯೂ ಕಾರ್ಯನಿರ್ವಹಿತ್ತಿದೆ. ಉದಾಹರಣಗೆ ರೈತರಿಗೆ ಕೃಷಿ ಮಾಹಿತಿಯನ್ನು, ವರ್ತಕರಿಗೆ ಮಾರುಕಟ್ಟೆಯ ವಿವರವನ್ನು, ಕರಾವಳಿ ತೀರದವರಿಗೆ ಹವಾಮಾನ ಹಾಗೂ ವಾಯುಗುಣದ ಎಚ್ಚರಿಕೆಯನ್ನು ಕುಳಿತಲ್ಲೇ ಏಕಕಾಲಕ್ಕೆ ಎಲ್ಲರಿಗೂ ತಿಳಿಸುತ್ತದೆ. ವಿದ್ಯಾರ್ಥಿಗಳಿಗೆ ಪರೀಕ್ಷಾ ಸಿದ್ಧತೆಗಾಗಿ ವಿಜ್ಞಾನ, ಗಣಿತ ವಿಷಯಗಳ ಪಾಠಮಾಲಿಕೆ ಪ್ರಸಾರವಾಗುತ್ತಿವೆ. ಕ್ರೀಡೆ, ಸಂಗೀತ,

ವಿಜ್ಞಾನ, ಚಲನಚಿತ್ರ, ವಿವಿಧ ಕ್ಷೇತ್ರಗಳ ಮಾಹಿತಿ ನೀಡುವುದರೊಂದಿಗೆ ಇದೊಂದು ಜ್ಞಾನಾಭಿವೃದ್ಧಿಯನ್ನು ಉಂಟು ಮಾಡುವ ಮಾಧ್ಯಮವಾಗಿದೆ.

**ಉಪಸಂಹಾರ:–** ಆಧುನಿಕತೆಯಲ್ಲಿ ದೂರದರ್ಶನದ ಪಾತ್ರ ಪ್ರಮುಖವಾದದ್ದು. ವಿದ್ಯಾರ್ಥಿಗಳು ಇದರ ಸಾಧಕ ಬಾಧಕಗಳನ್ನು ಅರಿತು ಉಪಯೋಗಿಸಿಕೊಳ್ಳಬೇಕು.

**4) ರಾಷ್ಟ್ರೀಯ ಹಬ್ಬಗಳು**

**ಪೀಠಿಕೆ:–** ರಾಷ್ಟ್ರೀಯ ಹಬ್ಬಗಳು ಆಯಾ ದೇಶದ ನಾಗರಿಕತೆ, ಸಂಸ್ಕೃತಿ ಹಾಗೂ ಇತಿಹಾಸವನ್ನು ಬಿಂಬಿಸುವ ಪ್ರತೀಕಗಳಾಗಿವೆ. ಎಳೆಯರಲ್ಲಿ ದೇಶಾಭಿಮಾನ ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

**ವಿಷಯ ನಿರೂಪಣೆ :–** ದೇಶದ ಎಲ್ಲ ಜನರು ತಮ್ಮ ಜಾತಿ, ಧರ್ಮವನ್ನು ಮರೆತು ನಾವೆಲ್ಲರೂ ಒಂದು, ನಾವೂ ಭಾರತೀಯರು ಎಂಬ ಭಾವನೆಯನ್ನು ಹೊಂದಿ ಏಕಕಾಲಕ್ಕೆ ಎಲ್ಲರೂ ಕೂಡಿ ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು. ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿದ ಭವ್ಯ ಭಾರತದ ಪ್ರಮುಖ ರಾಷ್ಟ್ರೀಯ ಹಬ್ಬಗಳೆಂದರೆ ಸ್ವಾತಂತ್ರ್ಯೋತ್ಸವ ಹಾಗೂ ಗಣರಾಜ್ಯೋತ್ಸವ. ಸ್ವಾತಂತ್ರ್ಯೋತ್ಸವವನ್ನು ಅಗಸ್ಟ 15 ರಂದು ಗಣರಾಜ್ಯೋತ್ಸವವನ್ನು ಜನೇವರಿ 26ರಂದು ಆಚರಿಸುತ್ತೇವೆ. ಭಾರತ ಸ್ವತಂತ್ರ ಹೊಂದಿದ ಇತಿಹಾಸವನ್ನು ಸ್ವಾತಂತ್ರ್ಯೋತ್ಸವ ಬಿಂಬಿಸಿದರೆ, ಗಣರಾಜ್ಯೋತ್ಸವ ದೇಶ ಏಕರೂಪದ ಆಡಳಿತ ಹಾಗೂ ಕಾನೂನು ವ್ಯವಸ್ಥೆಗೆ ಒಳಪಟ್ಟ ಇತಿಹಾಸವನ್ನು ಬಿಂಬಿಸುತ್ತದೆ.

**ಉಪಸಂಹಾರ:–** ದೇಶದ ಎಲ್ಲ ಜನರು ಶಾಲೆ, ಕಾಲೇಜು, ಕಛೇರಿ, ಸಾರ್ವಜನಿಕ ಸ್ಥಳಗಳಲ್ಲಿ ರಾಷ್ಟ್ರ ಧ್ವಜಾರೋಹಣ ಮಾಡಿ, ದೇಶಕ್ಕೆ ಗೌರವ ಸೂಚಿಸುವುದು ಹಾಗೂ ಯುವಕರಲ್ಲಿ ದೇಶಾಭಿಮಾನ ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳು ಪ್ರಮುಖ ಪಾತ್ರವಹಿಸುತ್ತವೆ.

**5) ಸ್ವಚ್ಛ ಭಾರತ ಅಭಿಯಾನ**

**ಪೀಠಿಕೆ: –** ಸ್ವಚ್ಛತೆಯು ಉತ್ತಮ ನಾಗರಿಕತ್ವದ ಲಕ್ಷಣವಾಗಿದೆ. ಮಾನವನ ನೆಮ್ಮದಿಯ ಬದುಕಿನ ಒಂದು ಅಂಶವಾಗಿದೆ. ನವ ಭಾರತದ ಕನಸನ್ನು ಹೊತ್ತ ದೇಶದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು 02.10.2014 ರಲ್ಲಿ ಈ ಯೋಜನೆಯನ್ನು ಜಾರಿಗೆ ತಂದರು.

**ವಿಷಯ ನಿರೂಪಣೆ: –** ಪ್ರಧಾನ ಮಂತ್ರಿಗಳು ದೆಹಲಿಯ ರಾಜಘಾಟದಲ್ಲಿ ಮಹಾತ್ಮಾ ಗಾಂಧೀಜಿಯವರ ದೇಶದ ಅಭಿವೃದ್ಧಿಯ ಮಾತುಗಳನ್ನು ನೆನಪಿಸಿಕೊಳ್ಳುತ್ತಾ ತಾವೇ ಸ್ವತಃ ರಸ್ತೆ ಸ್ವಚ್ಛಗೊಳಿಸುವುದರ ಮೂಲಕ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿ ದೇಶದ ನಾಗರಿಕರಿಗೆ ಮಾದರಿಯಾದರು. ದೇಶದ ಸರಕಾರಿ ಮತ್ತು ಸರಕಾರೇತರ ಸಂಘ ಸಂಸ್ಥೆಗಳ ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳ ಸಹಭಾಗಿತ್ವದಲ್ಲಿ ಯೋಜನೆಯನ್ನು ಯಶಸ್ವಿಗೊಳಿಸಲು ಯೋಜಿಸಲಾಯಿತು. 2019 ಅಕ್ಟೋಬರ್2 ಒಳಗಾಗಿ ದೇಶವನ್ನು ಬಯಲು ಶೌಚದಿಂದ ಮುಕ್ತಗೊಳಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಶೌಚಾಲಯ ಕಟ್ಟಿಕೊಳ್ಳಲು ಅನೇಕ ಸರಕಾರ ಹಾಗೂ ಸಹಕಾರಿ ಸಂಘಗಳು ಸಹಾಯಧನ ನೀಡುತ್ತಿವೆ. ಈ ಯೋಜನೆಯ ಧ್ಯೇಯ ವಾಕ್ಯ 'ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ' ಎಂಬುದಾಗಿದೆ.

**ಉಪಸಂಹಾರ:** ದೇಶದ ಅಭಿವೃದ್ಧಿ ಆ ದೇಶದ ಸ್ವಚ್ಛತೆ ಮತ್ತು ಅದರ ಕಾರ್ಯ ವೈಖರಿಯನ್ನು ಅವಲಂಬಿಸಿರುತ್ತದೆ.ಎಲ್ಲರೂ ಮುಕ್ತ ಮನಸ್ಸಿನಿಂದ ಕಾರ್ಯ ನಿರ್ವಹಿಸಿದಲ್ಲಿ ಈ ಯೋಜನೆ ಯಶಸ್ವಿಯಾಗುವುದರಲ್ಲಿ ಎರಡು ಮಾತಿಲ್ಲ.

**6) ಕಂಪ್ಯೂಟರ್‌ನ ಉಪಯೋಗಗಳು**

**ಪೀಠಿಕೆ:–** ಕಂಪ್ಯೂಟರ್ ಈ ಪದದ ಅರ್ಥವು ಕನ್ನಡದಲ್ಲಿ ಗಣಕಯಂತ್ರ ಎಂದಾಗುತ್ತದೆ. ಆಧುನಿಕತೆಯಲ್ಲಿ ಇದರ ಪ್ರಾಮುಖ್ಯತೆ ಬಹಳಷ್ಟಿದೆ. ಇಂದು ಪ್ರತಿಯೊಂದು ಶಾಲಾ ಕಾಲೇಜು, ವಿವಿಧ ಕಛೇರಿಗಳಲ್ಲಿಯೂ ಕಂಪ್ಯೂಟರ್‌ನ ಬಳಕೆಯಿದೆ. ವಿಜ್ಞಾನ ಮುಂದುವರೆದಂತೆ ಇದರಲ್ಲಿ ಅನೇಕ ವಿಧಗಳನ್ನು ನೋಡುತ್ತಿದ್ದೇವೆ.

**ವಿಷಯ ನಿರೂಪಣೆ :–**ಕಂಪ್ಯೂಟರ್ ಎಂಬ ಈ ಮಾಯ ಪೆಟ್ಟಿಗೆಯ ಬಳಕೆಯಿಂದ ಮಾನವನು ಕೈಯಾರೆ ಮಾಡುವ ಮುನ್ನಾಲ್ಕು ದಿನದ ಕೆಲಸವನ್ನು ಈ ಕಂಪ್ಯೂಟರ್‌ನ ಸಹಾಯದಿಂದ ಕೆಲವೇ ಗಂಟೆಗಳಲ್ಲಿ ಮಾಡಬಹುದಾಗಿದೆ. ಗಣಿತ, ವಿಜ್ಞಾನ,ಸಾಮಾನ್ಯ ಜ್ಞಾನ, ಸಾಹಿತ್ಯ, ಸಂಸ್ಕೃತಿ ಜಗತ್ತಿನ ಅನುಭವ ಪರಿಧಿಯು ನಮಗೆ ಅಂಗೈಯಲ್ಲಿ ಕಾಣುವಂತಾಗಿದೆ. ಮಾನವನು ತನಗೆ ಅವಶ್ಯವಿರುವ ದಾಖಲೆಗಳನ್ನು ಇದರಲ್ಲಿ ಸಂಗ್ರಹಿಸಿ, ಬೇಕೆಂದಾಗ ತಕ್ಷಣದಲ್ಲಿ ಪಡೆಯಬಹುದಾಗಿದೆ.

***ಉಪಸಂಹಾರ* :–** ಒಟ್ಟಾರೆಯಾಗಿ ಕಂಪ್ಯೂಟ್‌ರನ ಬಳಕೆ ಆಧುನಿಕ ಯುಗದಲ್ಲಿ ಬಹಳ ಮಹತ್ವ ಪಡೆದುಕೊಂಡಿದೆ. ವೈಜ್ಞಾನಿಕ ಜಗತ್ತಿನ ವಿಶಿಷ್ಟ ಕೊಡುಗೆಯಿಂದ ಕಂಪ್ಯೂಟರ್ ವಿಶಿಷ್ಟ ಸಂಪತ್ತಾಗಿದೆ.

## ಪತ್ರಲೇಖನ

**ಖಾಸಗಿ ಪತ್ರ / ವೈಯಕ್ತಿಕ ಪತ್ರ**

1) ನಿಮ್ಮನ್ನು ಶ್ರೀರಂಗಪಟ್ಟಣದ ಸರ್ಕಾರಿ ಪ್ರೌಢಶಾಲೆಯ ಕೀರ್ತಿಕುಮಾರ್ ಎಂದು ಭಾವಿಸಿಕೊಂಡು ಹಾಸನದಲ್ಲಿರುವ ನಿಮ್ಮ ತಂದೆಗೆ ಶಾಲಾ ಶುಲ್ಕ ಕಟ್ಟಲು 150/– ರೂಪಾಯಿಗಳನ್ನು ಕೋರಿ ಒಂದು ಪತ್ರ ಬರೆಯಿರಿ.

ಇವರಿಂದ: ದಿನಾಂಕ : 05.06.2020

**ಕೀರ್ತಿಕುಮಾರ,**
ಒಂಬತ್ತನೆಯ ತರಗತಿ,
ಸರ್ಕಾರಿ ಪ್ರೌಢಶಾಲೆ,
**ಶ್ರೀರಂಗಪಟ್ಟಣ** – 571438.

ತೀರ್ಥರೂಪರವರಿಗೆ ನಿಮ್ಮ ಮಗನು ಮಾಡುವ ಸಾಷ್ಟಾಂಗ ನಮಸ್ಕಾರಗಳು. ಇಲ್ಲಿ ನಾನು ಆರೋಗ್ಯವಾಗಿದ್ದೇನೆ. ಅಲ್ಲಿ ನಿಮ್ಮ ಮತ್ತು ಅಮ್ಮನ ಆರೋಗ್ಯ ಹೇಗಿದೆ? ಯಾವುದಕ್ಕೂ ಪತ್ರ ಬರೆಯಿರಿ. ಇಲ್ಲಿ ನಾನು ಚೆನ್ನಾಗಿ ವಿದ್ಯಾಭ್ಯಾಸ ಮಾಡುತ್ತಿದ್ದೇನೆ. ನಿಮ್ಮ ಅಪೇಕ್ಷೆಯಂತೆ ಪ್ರಥಮ ಸ್ಥಾನದಲ್ಲಿ ಉತ್ತೀರ್ಣನಾಗಲು ಪ್ರಯತ್ನಿಸುತ್ತಿದ್ದೇನೆ. ಪತ್ರದ ಮುಖ್ಯ ವಿಚಾರವೇನೆಂದರೆ, ಜೂನ್ 10 ನೇ ತಾರೀಖಿನ ಒಳಗಾಗಿ ವಾರ್ಷಿಕ ಪರೀಕ್ಷೆಯ ಶುಲ್ಕ 150/– (ನೂರ ಐವತ್ತು ಮಾತ್ರ) ರೂಪಾಯಿಗಳನ್ನು ಕಟ್ಟಬೇಕಾಗಿದೆ. ತಾವು ಆದಷ್ಟು ಬೇಗ ಅಂಚೆ ಮೂಲಕ ಹಣ ಕಳುಹಿಸಿ ಕೊಡಿ ಎಂದು ಕೇಳಿಕೊಳ್ಳುತ್ತೇನೆ. ಮನೆಯವರಿಗೆಲ್ಲ ನನ್ನ ನಮಸ್ಕಾರಗಳನ್ನು ತಿಳಿಸಿ. ಉಳಿದ ವಿಷಯವನ್ನು ಊರಿಗೆ ಬಂದಾಗ ಮಾತನಾಡುತ್ತೇನೆ.

ನಮಸ್ಕಾರಗಳೊಂದಿಗೆ,

ನಿಮ್ಮ ಪ್ರೀತಿಯ ಮಗ
ಕೀರ್ತಿಕುಮಾರ

ಇವರಿಗೆ:
**ಶ್ರೀ ಸಿದ್ದಪ್ಪ,**
ಮನೆ ಸಂಖ್ಯೆ 54, 1ನೆಯ ಮುಖ್ಯರಸ್ತೆ,
ಕುವೆಂಪುನಗರ, **ಹಾಸನ** – 573 201

2) ನಿಮ್ಮನ್ನು ಗೌರಿಬಿದನೂರಿನ ವಿನಾಯಕ ಪ್ರೌಢಶಾಲೆಯ ಮಮತ ಕೆ.ಎಲ್. ಎಂದು ಭಾವಸಿಕೊಡು ತುಮಕೂರಿನಲ್ಲಿರುವ ನಿಮ್ಮ ತಂದೆಗೆ ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಒಂದು ಪತ್ರ ಬರೆಯಿರಿ.

ಇವರಿಂದ, ದಿನಾಂಕ 25–02–2020

ಮಮತ ಕೆ. ಎಲ್.
10 ನೇ ತರಗತಿ, 'ಬಿ' ವಿಭಾಗ,
ವಿನಾಯಕ ಪ್ರೌಢಶಾಲೆ, ಗೌರಿಬಿದನೂರು.

ತೀರ್ಥರೂಪರವರಿಗೆ ನಿಮ್ಮ ಮಗಳು ಮಾಡುವ ನಮಸ್ಕಾರಗಳು.
ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ನಿಮ್ಮ ಯೋಗಕ್ಷೇಮದ ವಿಚಾರವಾಗಿ ಪತ್ರವನ್ನು ಬರೆಯಿರಿ.ಇಲ್ಲಿ ನಮ್ಮ ನಿತ್ಯದ ಶಾಲಾ ಚಟುವಟಿಕೆಗಳು ಯಾವ ತೊಂದರೆಯೂ ಇಲ್ಲದಂತೆ ನಡೆಯುತ್ತಿವೆ. ಕಳೆದ ವಾರ ಮಾಸಿಕ ಪರೀಕ್ಷೆಗಳು ನಡೆದಿದ್ದವು. ಆ ಪರೀಕ್ಷೆಯಲ್ಲಿ ನಾನು ತರಗತಿಗೆ ದ್ವಿತೀಯ ಸ್ಥಾನವನ್ನು ಪಡೆದಿದ್ದೇನೆ. ಮುಂದಿನ ಪರೀಕ್ಷೆಯಲ್ಲಿ ಇನ್ನು ಸ್ವಲ್ಪ ಪ್ರಯತ್ನ ಮಾಡಿದಲ್ಲಿ ನೀನು ಪ್ರಥಮ ಸ್ಥಾನವನ್ನು ಪಡೆದೇ ಪಡೆಯುತ್ತೀಯ ಎಂದು ನನ್ನ ಗುರುಗಳು ಹೇಳಿದರು. ನಾನು ಅವರ ಮಾರ್ಗದರ್ಶನದಂತೆ ವ್ಯಾಸಂಗವನ್ನು ಮಾಡಿ, ಶಾಲೆಗೆ ಹಾಗೂ ನಿಮಗೆ ಕೀರ್ತಿಯನ್ನು ತರುತ್ತೇನೆ. 10 ನೇ ತರಗತಿಯ ಫಲಿತಾಂಶ ನಮ್ಮ ಮುಂದಿನ ವ್ಯಾಸಂಗಕ್ಕೆ ದಾರಿದೀಪವಾಗುವುದರಿಂದ ಶಾಲಾ ಶಿಕ್ಷಕರು ತುಂಬಾ ಕಾಳಜಿವಹಿಸಿ ಪಾಠಗಳನ್ನು ಮಾಡುತ್ತಿದ್ದಾರೆ. ನಾವೂ ಕೂಡ ಶ್ರದ್ಧೆವಹಿಸಿ ಕಲಿಯುತ್ತಿದ್ದೇವೆ. ಒಳ್ಳೆಯ ಶಾಲೆ ಹಾಗೂ ಗುರುಗಳನ್ನು ಪಡೆದ ನಾವು ನಿಜಕ್ಕೂ ಧನ್ಯರು. ಮನೆಯಲ್ಲಿ ನನ್ನ ಪ್ರೀತಿಯ ಅಮ್ಮ ಮತ್ತು ಅಣ್ಣನಿಗೆ ನನ್ನ ನಮಸ್ಕಾರಗಳನ್ನು ತಿಳಿಸಿರಿ.

ನಮಸ್ಕಾರಗಳೊಂದಿಗೆ,

ನಿಮ್ಮ ಪ್ರೀತಿಯ
(ಮಮತ ಕೆ.ಎಲ್.)

**ಇವರಿಗೆ,**
ಶ್ರೀ ಬಸವರಾಜ ಕೆ. ಎಲ್.
ಮನೆ ನಂ – 1199, ಬನಶಂಕರಿ ನಿಲಯ,
ರಾಜಕುಮಾರ್ ರಸ್ತೆ, ತುಮಕೂರು.

3.ನಿಮ್ಮ ಶಾಲೆಯಲ್ಲಿ ನಡೆದ 'ಶಾಲಾ ವಾರ್ಷಿಕೋತ್ಸವ'ವನ್ನು ಕುರಿತು ನಿಮ್ಮ ಗೆಳೆಯ/ ಗೆಳತಿಗೆ ಒಂದು ಪತ್ರವನ್ನು ಬರೆಯಿರಿ.

ಇಂದ: ದಿನಾಂಕ:12:03:2020

ಸಲ್ಮಾ /ಸಲ್ಮಾನ್
10 ನೇ ತರಗತಿ
ಸರ್ಕಾರಿ ಉರ್ದು ಪ್ರೌಢಶಾಲೆ(ಆರ್.ಎಂ.ಎಸ್.ಎ.)
ಅರಳಿಹಳ್ಳಿ, ಭದ್ರಾವತಿ ತಾಲ್ಲೂಕು

ಪ್ರೀಯ ಗೆಳೆಯ/ಗೆಳತಿ ಯಾದ ಸುಧಾ/ಸುಧಾಕರ ಳಿಗೆ/ನಿಗೆ ನಿನ್ನ ಗೆಳೆಯ/ಗೆಳತಿ ಮಾಡುವ ವಂದನೆಗಳು. ನಮ್ಮ ಶಾಲೆಯಲ್ಲಿ ದಿನಾಂಕ 7ನೇ ಫೆಬ್ರವರಿ 2020 ರಂದು 'ಶಾಲಾ ವಾರ್ಷಿಕೋತ್ಸವ'ವನ್ನು ಹಮ್ಮಿಕೊಂಡಿದ್ದೆವು. ನಮ್ಮ ಮುಖ್ಯೋಪಾಧ್ಯಾಯರ ಮುಂದಾಳತ್ವದಲ್ಲಿ ಎಲ್ಲಾ ಶಿಕ್ಷಕರು,ವಿದ್ಯಾರ್ಥಿಗಳು 'ಶಾಲಾ ವಾರ್ಷಿಕೋತ್ಸವ' ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರು. ವಾರ್ಷಿಕೋತ್ಸವದ ಅಂಗವಾಗಿ ವಾರ್ಷಿಕ ಕ್ರೀಡಾಕೂಟ,ರಸಪ್ರಶ್ನೆ,ಪ್ರಬಂಧ,ಭಾಷಣ ಸ್ಪರ್ಧೆಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು.ಕೆಲವು ಸ್ಪರ್ಧೆಗಳಲ್ಲಿ ನಾನು ಸಹ ಭಾಗವಹಿಸಿ ಬಹುಮಾನಗಳನ್ನು ಪಡೆದಿದ್ದೇನೆ ಎಂದು ಹೇಳಲು ನನಗೆ ಹೆಮ್ಮೆ ಎನಿಸುತ್ತದೆ. ಹಾಗೆಯೇ ನನ್ನ ವಿದ್ಯಾಭ್ಯಾಸದ ಕಡೆಗೂ ಗಮನ ನೀಡುತ್ತಿದ್ದೇನೆ. ಈ ಪತ್ರ ತಲುಪಿದ ತಕ್ಷಣ ಪತ್ರ ಬರೆಯುತ್ತೀಯ ಎಂದು ನಂಬಿರುತ್ತೇನೆ.
ಈ ಎಲ್ಲ ವಿಷಯವನ್ನು ನಿನ್ನ ಮಾತೃಶ್ರೀಯವರಿಗೂ ಹೇಳಿ,ನನ್ನ ನಮಸ್ಕಾರಗಳನ್ನು ತಿಳಿಸು..

ವಂದನೆಗಳೊಂದಿಗೆ, ಇತಿ ನಿನ್ನ ಪ್ರೀತಿಯ ಗೆಳೆಯ/ಗೆಳತಿ

ಸಲ್ಮಾ / ಸಲ್ಮಾನ್

ಗೆ,
ಸುಧಾ/ಸುಧಾಕರ
ಸರ್ಕಾರಿ ಪ್ರೌಢಶಾಲೆ,ನೆಹರೂ ನಗರ,
ಶಿವಮೊಗ್ಗ–577421

## ವ್ಯವಹಾರಿಕ ಪತ್ರ ಅಥವಾ ಮನವಿ ಪತ್ರ

4) ನಿಮ್ಮನ್ನು ವಿಜಯಪುರದ ಸಂಗಮೇಶ ಎಂದು ಭಾವಿಸಿಕೊಂಡು ನಿಮ್ಮ ಊರಿನ ಕೋಟೆ ಬೀದಿಗೆ ನೀರಿನ ಸೌಲಭ್ಯ ಒದಗಿಸಿಕೊಡುವಂತೆ ಕೋರಿ, ನಿಮ್ಮ ಜಿಲ್ಲೆಯ ಜಿಲ್ಲಾಧಿಕಾರಿಯವರಿಗೆ ಒಂದು ಪತ್ರ ಬರೆಯಿರಿ.

**ಇವರಿಂದ,** ದಿನಾಂಕ : 05.05.2020

ಶ್ರೀ ಸಂಗಮೇಶ,
ಕೋಟೆ ಬೀದಿ,
ಬಿಜಾಪುರ – 586101.

**ಇವರಿಗೆ,**
ಜಿಲ್ಲಾಧಿಕಾರಿಗಳು,
ವಿಜಯಪುರ – 586101,
ವಿಜಯಪುರ ಜಿಲ್ಲೆ.

ಮಾನ್ಯರೇ,

**ವಿಷಯ :** ಕೋಟೆ ಬೀದಿಗೆ ನೀರಿನ ಸೌಲಭ್ಯ ಒದಗಿಸುವಂತೆ ಕೋರಿ.
ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಕೋಟೆ ಬೀದಿಯಲ್ಲಿ ಸುಮಾರು 60 ಮನೆಗಳಿದ್ದು ಕೊಳಾಯಿಯ ವ್ಯವಸ್ಥೆ ಇಲ್ಲದೆ ಕುಡಿಯುವ ನೀರಿಗೆ ತುಂಬಾ ತೊಂದರೆಯಾಗಿದೆ. ಜನಪರ ಕಾಳಜಿ ಇರುವ ತಾವು ದಯಮಾಡಿ ಕೋಟೆ ಬೀದಿಗೆ ಬೋರ್‌ವೆಲ್ ಹಾಕಿಸಿ, ನಳದ ಮೂಲಕ ಕುಡಿಯುವ ನೀರಿನ ಸೌಲಭ್ಯ ಒದಗಿಸಿಕೊಡಬೇಕೆಂದು ತಮ್ಮಲ್ಲಿ ವಿನಯಪೂರ್ವಕವಾಗಿ ಕೋರುತ್ತೇನೆ.
ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
(ಸಂಗಮೇಶ)

ಸ್ಥಳ : ಬಿಜಾಪುರ

5) ನಿಮ್ಮನ್ನು ಧಾರವಾಡದ ಜವಾಹರ ನವೋದಯ ಶಾಲೆಯ ಚಿನ್ಮಯ ಜಿ.ಎಂ. ಎಂದು ಭಾವಿಸಿಕೊಂಡು ಎರಡು ದಿನ ರಜೆ ಕೋರಿ ನಿಮ್ಮ ಶಾಲೆಯ ತರಗತಿ ಶಿಕ್ಷಕರಿಗೆ ಒಂದು ರಜಾ ಅರ್ಜಿ ಬರೆಯಿರಿ.

ಇವರಿಂದ, ದಿನಾಂಕ 20–04–2020

**ಚಿನ್ಮಯ್ ಜಿ.ಎಂ.**
8 ನೇ ತರಗತಿ, 'ಎ' ವಿಭಾಗ,
ಜವಾಹರ ನವೋದಯ ಶಾಲೆ
ಧಾರವಾಡ.

ಇವರಿಗೆ,
**ತರಗತಿ ಅಧ್ಯಾಪಕರು**
ಜವಾಹರ ನವೋದಯ ಶಾಲೆ
ಧಾರವಾಡ.

ಮಾನ್ಯರೆ,

**ವಿಷಯ :** ಎರಡು ದಿನ ರಜೆ ನೀಡುವಂತೆ ಕೋರಿ

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ನನ್ನ ಅಕ್ಕನ ಮದುವೆಯು ದಿನಾಂಕ 22–04–2020 ಹಾಗೂ 23–04–2020 ರಂದು ಬೆಳಗಾವಿಯಲ್ಲಿ ನೆರವೇರುತ್ತಿದೆ. ಈ ಸಂಭ್ರಮದಲ್ಲಿ ನಾನೂ ಅಗತ್ಯವಾಗಿ ಪಾಲ್ಗೊಳ್ಳಬೇಕಾಗಿದೆ. ಆದುದರಿಂದ ದಯವಿಟ್ಟು ಮೇಲ್ಕಾಣಿಸಿದ ಎರಡು ದಿನಗಳಿಗೆ ರಜೆಯನ್ನು ನೀಡಬೇಕೆಂದು ವಿನಂತಿಸುತ್ತೇನೆ.

ನಮಸ್ಕಾರಗಳೊಂದಿಗೆ, ತಮ್ಮ ವಿಧೇಯ ವಿದ್ಯಾರ್ಥಿ

ಸಹಿ

(ಚಿನ್ಮಯ್ ಜಿ.ಎಂ.)

**6) ನಿಮ್ಮನ್ನು** ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಗುಬ್ಬಿಹಳ್ಳಿಯ ಸರ್ಕಾರಿ ಪ್ರೌಢಶಾಲೆಯ ತನುಜ ಎಸ್. ಎಂ. ಎಂದು ಭಾವಿಸಿಕೊಡು ನಿಮ್ಮ ಊರಿನ ಬೀದಿ ದೀಪಗಳನ್ನು ಸರಿಪಡಿಸುವಂತೆ ಕೋರಿ ನಿಮ್ಮ ಗ್ರಾಮಪಂಚಾಯಿತಿ ಅಧ್ಯಕ್ಷರಿಗೆ ಒಂದು ಪತ್ರ ಬರೆಯಿರಿ.

**ಇವರಿಂದ,** ದಿನಾಂಕ 10–01–2020

ತನುಜ ಎಸ್. ಎಂ.
10 ನೇ ತರಗತಿ,
ಸರ್ಕಾರಿ ಪ್ರೌಢಶಾಲೆ,
ಗುಬ್ಬಿಹಳ್ಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

**ಇವರಿಗೆ,**
ಅಧ್ಯಕ್ಷರು,
ಗ್ರಾಮ ಪಂಚಾಯಿತಿ, ಗುಬ್ಬಿಹಳ್ಳಿ.
ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

**ಮಾನ್ಯರೇ,**

**ವಿಷಯ:** ನಮ್ಮ ಊರಿನ ಬೀದಿ ದೀಪಗಳನ್ನು ಸರಿಪಡಿಸುವಂತೆ ಕೋರಿ.

ವಿಷಯಕ್ಕೆ ಸಂಬಂಧಿಸಿದಂತೆ, ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ನಮ್ಮ ಊರಿನ ಬೀದಿ ದೀಪಗಳು ಕೆಲವು ದಿನಗಳಿಂದ ಕೆಟ್ಟುಹೋಗಿವೆ. ಇದರಿಂದ ರಸ್ತೆಯಲ್ಲಿ ರಾತ್ರಿ ಹೊತ್ತು ಮುದುಕರು, ಹೆಣ್ಣುಮಕ್ಕಳು ಹಾಗೂ ಮಕ್ಕಳು ಏಕಾಂಗಿಯಾಗಿ ಸಂಚರಿಸಲು ಭಯಪಡುವಂತಾಗಿದೆ. ಹೀಗಾಗಿ, ಜನಪರ ಕಾಳಜಿ ಹೊಂದಿರುವ ತಾವು ಈ ಕೂಡಲೇ ನಮ್ಮ ಗ್ರಾಮದ ಬೀದಿ ದೀಪಗಳನ್ನು ಸರಿಪಡಿಸಿ ಜನರಿಗಾಗುತ್ತಿರುವ ತೊಂದರೆಗಳನ್ನು ನಿವಾರಿಸಬೇಕೆಂದು ಗ್ರಾಮಸ್ಥರ ಪರವಾಗಿ ಮನವಿ ಮಾಡಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ತನುಜ ಎಸ್. ಎಂ.)

# ಗ್ರಂಥಋಣ

| ಕ್ರ ಸಂ | ಪುಸ್ತಕದ ಹೆಸರು | ಲೇಖಕರ ಹೆಸರು |
|---|---|---|
| 1 | 8ನೆಯ ತರಗತಿಯ ತಿಳಿ ಕನ್ನಡ ದ್ವಿತೀಯ ಭಾಷಾ ಕನ್ನಡ ಪಠ್ಯಪುಸ್ತಕ. | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ) ಬೆಂಗಳೂರು |
| 2 | 9 ಮತ್ತು 10ನೆಯ ತರಗತಿಯ ತಿಳಿ ಕನ್ನಡ ದ್ವಿತೀಯ ಭಾಷಾ ಕನ್ನಡ ಪಠ್ಯಪುಸ್ತಕ. | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ) ಬೆಂಗಳೂರು |
| 3 | ವಿದ್ಯಾರ್ಥಿ ಮಾರ್ಗದರ್ಶಿ | ಕನ್ನಡ ಶಿಕ್ಷಕರ ವೇದಿಕೆ, ಬೆಂಗಳೂರು. |
| 4 | ಕನ್ನಡ ಸಾಹಿತ್ಯ ಸಂಪದ ಪಲ್ಲವ | ಎಂ.ಸಿ.ಸಿ ಪಬ್ಲಿಕೇಷನ್ಸ್, ಬೆಂಗಳೂರು. |
| 5 | ಡೈಮಂಡ್ ತಿಳಿ ಕನ್ನಡ | ಶ್ರೀಲತಾ ಜಿ.ಎನ್. ಎಂ.ಇ.ಎಸ್. ಕಿಶೋರ ಕೇಂದ್ರ ಪ್ರೌಢಶಾಲೆ, ಬೆಂಗಳೂರು |
| 6 | ಕನ್ನಡ ಮಧ್ಯಮ ವ್ಯಾಕರಣ | ತೀ.ನಂ.ಶ್ರೀಕಂಠಯ್ಯ |

ಪರಶುರಾಮ್ ಎನ್